Sir, as we have already conceded to the allotment of time as suggested by our Leader, I would like straight away to refer to the famine conditions of our places. Sir, I do not know whether the Government is aware that nearly five thousand cattle died for want of fodder and things like that. Fortunately some rains have fallen and the main population of the distressed areas have gone to agricultural work leaving the little relief works that are already undertaken and thereby losing their purchasing power. Apart from the cattle that have died even the small number of cattle that are left alive have no strength at all. There is another difficulty that has arisen, that is the lack of bulls to till the lands and not only that, since the cattle have died in large numbers, there is the question of manure also. Now Government say that they are giving Rs. 20,000 per day for about 30,000 people, which is ridiculously inadequate because there are nearly three lakhs of people who are suffering from famine in the famine area. And because of the lack of purchasing capacity, people have gone to the extent of eating all kinds of things like roots, etc. Coming now to the

(SRI B. V. NARAYANA REDDY)

question, Government have sent about 700 tons of fodder. To think in terms of tons might look big enough. But if we go to the real necessity of things, with one ton we can feed about 100 cattle per day and thereby after all 70,000 cattle can be fed on 700 tons. But what about the remaining cattle which number nearly about a quarter of a million? If we ask them why they cannot supply more fodder, they say that it is because of lack of conveyance. If they had thought of these things before itself in time and not felt shy of things and taken due cognizance of facts, I am sure they would have definitely given the help that Rayalaseema gave to their people. There is no meaning in saying that there are lorries and army people to work just a few miles off our border on the other side but we could not do anything here. There seems to be something wrong somewhere. Another aspect which the Government should take cognizance of is that these distressed areas which are now very greatly affected are in no way better than Rayalaseema, geographically and linguistically. I think that it is not even now too late to avoid famine conditions, if the Government face facts as they are and give liberal loans like Takavi loans and Land improvement loans, and Subsistence loans, etc. There is another difficulty in the villages now. There are some village servants, for example, thoties, thalaries, sakalies and mangals, who have no lands of their own but have inam lands. Government refuse to give any loans on inam lands. They must be given monies; otherwise they will be facing starvation. Not only this; Government must take up this question as they took it up in the case of Assam. With such measures they could avert famine conditions most probably. Another thing I would like to point out is this. These areas which are now facing famine are really drought areas and every year there is drought and there is the question of facing famine. It must be definitely seen that it is averted. There are several measures which Government could adopt to avert famine which comes now and then. Permanent measures like giving loans to upper and middle class raiyats to dig wells must be adopted. Government can recover them in easy instalments. Bore wells must be dug in tank beds at Government cost. Tanks must be desilted. Electricity must be supplied to these parts for irrigation and projects like Chitravati anecut, Palar, Pennar and Pinakini Tanks must be put through and the subterranean water resources exploited to the limit.

Speaking of electricity, you must be aware that Bagepalli and Gudibanda have not got even the scent of it. There was a resolution No. 6 passed in the June session of 1949 that priority must be given to Kolar District. With all these things in view, I do not know how our Government have given electricity to the people outside the State though some of the taluks have not seen electricity. No wonder then that there are some people who have not seen an electric switch.

In view of all these things, Government must take steps to meet the conditions there permanently.

Another thing I would like to mention. The Hon'ble Chief Minister is taking round His Highness the Maharaja to some of the distress places. How I wish he is taken round to more distress areas than he is being taken round now!

With these remarks I close.

MR. SPEAKER.—Amendment moved.—

"At the end of the motion, the following be added, namely:—

'but regrets that the Address fails to mention

(*a*) the acute distress caused in the famine areas of the State and an assurance to give adequate relief to the affected people, and an indication of a policy to combat drought conditions on a permanent basis;

(*b*) the necessity of an extensive supply of electricity to some taluks

in Kolar District for power and lighting, especially in rural areas'."

Sri K. PATTABHI RAMAN (Kolar).—Sir, I move:

"That the following words at the end of the motion be added:

'but regret that your Highness's Ministers have not either taken or held out, therein, any definite assurance that they would take steps to bring into line with the States of Madras and Bihar their food policy and embark upon a policy of decontrol or taken effective steps to give relief, adequate to the people in the distress areas of the State or adopt measures to carry out the directions given in Part IV of the Indian Constitution'."

ಮಾನ್ಯ ಸಭಾಧ್ಯಕ್ಷರೇ, ಈವರೆಗೆ ಮಹಾರಾಜರವರ ಭಾಷಣದ ಮೇಲೆ ಅನೇಕ ವಿಧವಾಗಿ ಚರ್ಚೆಯಾಗಿದೆ. ಬಹಳ ಸ್ನೇಹಿತರು ನಮಗೆ ಉಪಕಾರಮಾಡಿದ್ದಾರೆ ಎಂದು ನಾನು ನಂಬುತ್ತೇನೆ. ಆದರೂ ಈ ಸಭೆಯ ಮುಂದೆ ಒಂದೆರಡು ವಿಚಾರಗಳನ್ನು ಸ್ವಲ್ಪ ತೀವ್ರವಾದ ದೃಷ್ಟಿಯಿಂದ ಇಡಲಕ್ಕೆ ಈ ಒಂದು ಉಪಸೂಚನೆಯನ್ನು ತಮ್ಮ ಮುಂದೆ ತಂದಿದ್ದೇನೆ. ಮುಖ್ಯವಾಗಿ ನಾವು ಗಮನಿಸಬೇಕಾದದ್ದು ಏನೆಂದರೆ ಸಾಧಾರಣವಾಗಿ ಶ್ರೀಮಂತ ಮಹಾರಾಜರವರ ಭಾಷಣಕ್ಕೆ ಯಾವ ಹಿನ್ನೆಲೆ ಎಂದರೆ, ನಮ್ಮ ಭಾರತ ರಾಜ್ಯಾಂಗ ದೃಷ್ಟಿಯಿಂದ ನೋಡುವುದಾದರೆ, ಇದು ಬಹಳ ಮುಖ್ಯವಾದ ವಿಚಾರ. ಮೂಲಭೂತವಾದ ಸಿದ್ಧಾಂತ, ಧ್ಯೇಯ, ಧೋರಣೆ, ಆದರ್ಶ ಇತ್ಯಾದಿಗಳನ್ನು ಮಾರ್ಗದರ್ಶಕವಾಗಿ ತೋರಿಸಿ ಅವುಗಳ ಹಿನ್ನೆಲೆಯಿಂದ ಮುಂದಿನ ಕಾರ್ಯಕ್ರಮ ನಡೆಯಲು ಸಹಾಯಕವಾಗುವ ರೀತಿಯಲ್ಲಿ ಇದನ್ನು ರಾಜ್ಯಾಂಗದಲ್ಲಿ ಅಳವಡಿಸಿದ್ದಾರೆ ಎಂದು ನಾನು ನಂಬುತ್ತೇನೆ. ಆದರೆ ಒಂದು ದೃಷ್ಟಿಯಿಂದ ಕಾಣುತ್ತದೆ—ಬಹುಶಃ ನನ್ನ ಸ್ನೇಹಿತರು ಇದನ್ನು ಯೋಚನೆ ಮಾಡಬಹುದಾಗಿದೆ—ನಮ್ಮ ರಾಜ್ಯಾಂಗದ ವೈಶಿಷ್ಟ್ಯವೇನೆಂದರೆ Part IV of the Indian Constitution, *i.e.*, directive principles. ಅದನ್ನು ಹಾಕಿರುವುದು ಚೆನ್ನಾಗಿದೆ. ಬಹುಶಃ ಬೇರೆ ದೇಶಗಳ ರಾಜ್ಯಾಂಗವನ್ನು ಸ್ವಲ್ಪ ನೋಡುವುದಾದರೆ directive principles ಎನ್ನುವುದು ಬಹುಮಟ್ಟಿಗೆ ಹೆಚ್ಚು ವೈಶಿಷ್ಟ್ಯದಿಂದ ಕೂಡಿರುವುದು ಭಾರತಖಂಡದ ರಾಜ್ಯಾಂಗದಲ್ಲಿ ಎಂದು ಹೇಳಬಹುದು. ಈ ರೀತಿ ಹೇಳುವಾಗ ನನಗೆ ಅನ್ನಿಸುತ್ತದೆ, ನಿತ್ಯ ಜೀವನದ ವಿಚಾರಗಳು ಅಥವಾ ದೊಡ್ಡ ಕಾರ್ಯಕ್ರಮಗಳು ಇವುಗಳೆಲ್ಲವನ್ನೂ ಕೂಡ ಚರ್ಚೆ ಮಾಡಲಕ್ಕೆ ಬಜೆಟ್‌ನ್ನು ಮಂಡಿಸಿದಾಗ ಒಂದು ಅವಕಾಶವಿದ್ದೇ ಇರುತ್ತದೆ. ಅದಕ್ಕೆ ಪೂರ್ವಭಾವಿಯಾಗಿ ರಾಜಪ್ರಮುಖರ ಭಾಷಣದಲ್ಲಿ ಬರಬೇಕಾದ್ದು ಏನು ಎಂದರೆ ಈ ಅಧಿವೇಶನದಲ್ಲಿ ಮಾನ್ಯ ಸದಸ್ಯರು ಏನು ನಿರೀಕ್ಷಿಸಬಹುದು, ದೇಶ ಏನು ನಿರೀಕ್ಷಿಸಬಹುದು ಎಂಬ ದೃಷ್ಟಿಯಿಂದ ಒಂದು ಧ್ಯೇಯ, ಧೋರಣೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ರಾಜಪ್ರಮುಖರು ಭಾಷಣಮಾಡುತ್ತಾರೆ ಎಂದು ನಂಬುತ್ತೇನೆ. ಆ ದೃಷ್ಟಿಯಿಂದ ನೋಡುವುದಾದರೆ ಒಂದು ಕೊರತೆ ಬಹುಮಟ್ಟಿಗೆ ಬಾಧಿಸುತ್ತಾ ಇದೆ. ಈ ಭಾಷಣದಲ್ಲಿ ನೂತನ ಧ್ಯೇಯ ಧೋರಣೆ ಕಾಣುತ್ತಾ ಇಲ್ಲ. ನಾನು ಹೇಳುತ್ತೇನೆ ನಮ್ಮ ರಾಜ್ಯಾಂಗ.....(ನನಗೆ ಎಷ್ಟು ಕಾಲಾವಕಾಶ ವಿದೆ ಎಂಬುದನ್ನು ದಯವಿಟ್ಟು ಅಧ್ಯಕ್ಷರು ತಿಳಿಸಬೇಕು).

Mr. SPEAKER.—Fifteen minutes.

ಶ್ರೀ ಕೆ. ಪಟ್ಟಾಭಿರಾಮಿಕರವರು.—ನಾವು ಮುಖ್ಯವಾಗಿ ಗಮನಿಸಬೇಕಾದ್ದು ಈ ರೀತಿ ರಾಜಭಾಷಣ ಮಾಡತಕ್ಕದ್ದು ಒಂದು ಸಂಪ್ರದಾಯ. ಶ್ರೀಮಂತ ಮಹಾರಾಜರವರು ಈ ಒಂದು ಹಿನ್ನೆಲೆಯನ್ನು ಕೊಡಲಕ್ಕೆ ನಮ್ಮ ರಾಜ್ಯಾಂಗದಲ್ಲಿ ಅವಕಾಶವಿದೆ. ಇಂಗ್ಲೆಂಡಿನ ರಾಜ್ಯಾಂಗದಲ್ಲೂ ಸಹ Prime Minister's Speech ಎಂಬುದಾಗಿ ಅಮಾತ್ಯರ ಭಾಷಣವೇ ಇದು. ನಮ್ಮ ಮುಂದೆ ಇಂತಕ್ಕ: ರಾಜರ ಭಾಷಣದಲ್ಲಿ ಏನು ಕಾಣುತ್ತದೆ? ಅದರಲ್ಲಿ ನಮ್ಮ ಧ್ಯೇಯ ಧೋರಣೆ ಈ ದೃಷ್ಟಿಯಿಂದ ಒಂದು ಕೊರತೆ ನಮ್ಮ ಮುಂದೆ ಮುಖ್ಯವಾಗಿ ಕಾಣಿಸುತ್ತದೆ. ಭಾರತದ ರಾಜ್ಯಾಂಗದ IVನೆಯ ಭಾಗ ಬಹಳ ಮುಖ್ಯವಾದದ್ದು. ಅದರಲ್ಲಿ ಆಗಬೇಕಾದ ಕೆಲವು ಕೆಲಸ ಕಾರ್ಯಗಳಿಗೆ ಒಂದು ಕಾಲ ಪರಿಮಿತಿ ಕೊಟ್ಟಿದ್ದಾರೆ. ಇಲ್ಲಿ ಕೆಲವಕ್ಕೆ ಕಾಲ ಪರಿಮಿತಿ ಇಲ್ಲದೇ ಇರುವುದು ಒಂದು ಅಂಶ. ಇವುಗಳೆಲ್ಲವನ್ನು ದೃಷ್ಟಿಯಲ್ಲಿಟ್ಟು ವರ್ಷಕ್ಕೆ ಒಮ್ಮೆ ಶ್ರೀಮಂತ ಮಹಾರಾಜರವರ ಭಾಷಣ ಆಗುವಾಗ ತಮಗೆ ವಹಿಸಿರತಕ್ಕ ಜವಾಬ್ದಾರಿಯನ್ನು ಎಷ್ಟು ಮಟ್ಟಿಗೆ ಸರ್ಕಾರ ನಿರ್ವಹಿಸಿದೆ, ಎಷ್ಟುಮಟ್ಟಿಗೆ ನಿರ್ವಹಿಸಿಲ್ಲ, ಯಾವರೀತಿ ಮುಂದುವರಿಯುತ್ತಿದೆ, ಏನೇನು ತೊಡಕುಗಳಿವೆ ಎಂಬುದನ್ನೆಲ್ಲಾ ತೋರಿಸಿಕೊಡಬೇಕು. ಮೊದಲೇ ಅರಿಕೆ ಮಾಡುತ್ತಾ ಇದ್ದ ಹಾಗೆ ಬಹಳ ಮುಖ್ಯವಾದದ್ದು ಎಂದರೆ ರಾಜಭಾಷಣ, ರಾಜ್ಯಾಂಗದ IVನೆಯ ಭಾಗವನ್ನು ಯೋಚನೆಮಾಡೋಣ. ಆ ಹಿನ್ನೆಲೆಯನ್ನು ಯೋಚನೆಮಾಡೋಣ. ನನ್ನ ನಿರೀಕ್ಷಣೆ ಏನೆಂದರೆ ನಾನು ಪಕ್ಷ ಪ್ರತಿ ಪಕ್ಷಗಳ ಬೆಂಬಲಿಗನಲ್ಲ; ಪೂರ್ಣ ಸ್ವತಂತ್ರ ಆಲೋಚನೆಯಿಂದ ಮಾತನಾಡತಕ್ಕವನು. ಇದು ಪಾಶ್ಚಾತ್ಯರು ಹೊರಟುಹೋಗಿರತಕ್ಕ ಕಾಲ; ಪರರ ಆಳ್ವಿಕೆ ಹೋಗಿ ಆತ್ಮಹೀನತೆ ಅಳಿಯುತಕ್ಕ ಕಾಲ. ಇಂದು ಯಾವ ಮಹಾನುಭಾವರ ಕಣ್ಣೆದುರಿಗೆ ಕಾರ್ಯಕ್ರಮ ನಡೆಸುತ್ತಾ ಇದ್ದೇವೆಯೋ ಅವರು ಯಾವ ಕಾರ್ಯ ತಕ್ಷಣ ಮಾಡಬೇಕು, ಯಾವರೀತಿ ಜನಗಳ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಬಹುದು, ಯಾವ ರೀತಿ ಸಮಾಜ ಕಟ್ಟಬೇಕು ಎಂಬ ಎಲ್ಲಾ ಕಾರ್ಯಕ್ರಮಗಳನ್ನು ಕಾಕಿಕೊಟ್ಟಹಾಗೆ ರಾಜ್ಯಾಂಗದ IVನೆಯ ಭಾಗ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಕಾನೂನು ದೃಷ್ಟಿಯಿಂದ ಒಂದು ಮಾತು ಹೇಳುವುದಾದರೆ it is fundamental in the governance of the country. ಇದು ಬಹಳ ಮುಖ್ಯವಾದದ್ದು. ಕೇಂದ್ರ ಸರ್ಕಾರ, ಕೇಂದ್ರ ಶಾಸನ ಸಭೆ, ಪ್ರಾಂತೀಯ ಸರ್ಕಾರ ಪ್ರಾಂತೀಯ ಶಾಸನ ಸಭೆಗಳಿಗೂ ಸ್ಥಳೀಯ ಸಂಸ್ಥೆಗಳಿಗೂ ಕೂಡ ಅನ್ವಯವಾಗತಕ್ಕದ್ದು. ಇದಕ್ಕೆ ನಮ್ಮಲ್ಲಿ ಒಂದು ಬೆಲೆ, ವೈಶಿಷ್ಟ್ಯ ಇವೆ. ಇದನ್ನು ನಮ್ಮ ಮುಖ್ಯ ಮಂತ್ರಿಗಳು ಯೋಚನೆಮಾಡಬೇಕಾಗುತ್ತದೆ. ರಾಜ ಭಾಷಣಮಾಡುವ ಡೈರೆಕ್ಟಿವ್ ಪ್ರಿನ್ಸಿಪಲ್ಸ್, IVನೆಯ ಅಧ್ಯಾಯದ ದೃಷ್ಟಿಯಿಂದ ಎಷ್ಟು

(ಶ್ರೀ ಕೆ. ಪಟ್ಟಾಭಿರಾಮರೆಡ್ಡಿರವರು).

ಮುಟ್ಟಿಗೆ ಮಾಡಲಕ್ಕಾಗಿದೆ, ಎಷ್ಟುಮುಟ್ಟಿಗೆ ಅಗಿಲ್ಲ ಎಂಬುದನ್ನು ಯೋಚನೆಮಾಡಬೇಕು. ಇದರಲ್ಲಿ ಒಂದು ಕೊರತೆ ಬಾದಿಸುತ್ತಾ ಇದೆ. ಮೊದಲನಿಂದ ಕೊನೆಯ ವರೆಗೆ ನೋಡಿದರೂ ಜನಜೀವನದ ಹನ್ನೆರೆ ಏನೂ ಹೆಚ್ಚಾಗಿ ಕಾಣುತ್ತಿಲ್ಲ. ಈ ಒಂದು ಶಂಕೆಯನ್ನು ತಮ್ಮ ಮುಂದೆ ಇಡುತ್ತೇನೆ.

ಎರಡನೆಯದಾಗಿ ತಮ್ಮ ಗಮನಕ್ಕೆ ತರುವುದೇನೆಂದರೆ ಆಹಾರದ ವಿಚಾರ. ನಿಜವಾಗಿಯೂ ನನಗೆ ಪ್ರಸನ್ನವಾಗುತ್ತದೆ. ನಮ್ಮ ಮಿತ್ರರೊಬ್ಬರೂ ನಾನು ಕೇವಲ ವಿರೋಧಿನಬೇಕೆಂಬ ಉದ್ದೇಶದಿಂದ ಮಾತನಾಡುತ್ತಿದ್ದೇನೆಂದು ಭಾವಿಸಬಾರದು. ಕಂಟ್ರೋಲ್ ಎಂಬುದು ಹೋಗಬೇಕು. ಈ ಸಮಸ್ಯೆಯನ್ನು ನಾವು ಯಾವ ದೃಷ್ಟಿಯಿಂದ ಯೋಚನೆಮಾಡಬೇಕು ? ನಿತ್ಯ ಕ್ರಮಕ್ಕೆ ಸಂಬಂಧಪಟ್ಟಂತೆ ಕೆಲವು ಕಾರಣಗಳನ್ನು ಕೊಟ್ಟು ಮಾನ್ಯ ಸದಸ್ಯರು ಹೇಳಿದ್ದಾರೆ. ನನ್ನ ಅರ್ಥ ಒಂದು ದೇಶದಲ್ಲಿ ಪ್ರತಿಯೊಂದು ಜೀವನರಂಗದಲ್ಲೂ ಕೂಡ ಏಕೇಂದ್ರೀಕರಣ ಉಂಟುಮಾಡಬೇಕು ಎಂಬುದು. ಈ ಸಂಬಂಧದಲ್ಲಿ ಮಹಾತ್ಮರು ಹೇಳಿತ್ತಿದ್ದ ಒಂದು ಮಾತು ನೆನಪಿಗೆ ಬರುತ್ತದೆ : ನೂರು ಚೂರಿಪಿಗಳು ಕೇಂದ್ರೀಕೃತವಾದ ಒಂದು ರುಮಾಲಿನ ವಿಕೇಂದ್ರಿತ ಭಾಗಗಳು ; ನೂರು ಚೂರಿಪಿಗಳು ಸೇರಿದರೆ ಒಂದು ರುಮಾಲು ! ಮಹಾತ್ಮಾಗಾಂಧಿಯವರು ಈ ವಿಕೇಂದ್ರೀಕರಣ ತತ್ವವನ್ನು ಸಾರುವುದಕ್ಕಾಗಿಯೇ ಒಂದು ರೂಮಾಲನ್ನು ತೆಗೆದು ನೂರಾರು ಚೂರಿಪಿಗಳಾಗಿ ಮಾಡಿ ತಲೆಯಮೇಲೆ ಆ ವಿಕೇಂದ್ರೀಕರಣವ ಲಂಛನವನ್ನಿಟ್ಟರು. ಈ ದಿವಸ ತಮ್ಮ ದೃಷ್ಟಿ ಎಲ್ಲಿ ಹೋಗುತ್ತದೆ ! ವಿಕೇಂದ್ರೀಕರಣ ಹೋಗಿ ಕೇಂದ್ರೀಕರಣ ಮಾಡಬೇಕೆನ್ನುವ ಕಡೆಗೆ ಮುಖ್ಯಮಂತ್ರಿಗಳ ಗಮನ ಹೋದಂತೆ ಕಾಣುತ್ತದೆ. ತಲೆಯಮೇಲೆ ಹೊತ್ತಿರುವ ಆ ರುಮಾಲೆ ಅದನ್ನು ಸೂಚಿಸುತ್ತದೆ. ನಾನು ಏನಯದಿಂದ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಈ ಕೇಂದ್ರೀಕರಣ ಚಿಹ್ನೆಯಾದ ರುಮಾಲನ್ನು ದಯಮಾಡಿ ಬಿಟ್ಟುಬಿಡಿ. ನಾವು ಈವತ್ತು ಒಂದಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು. ಈ ಕಂಟ್ರೋಲ್ ಇರುವವರೆಗೂ ದೇಶದಲ್ಲಿ ವಿಕೇಂದ್ರೀಕರಣ ಮಾಡುವುದಕ್ಕಾಗುವುದಿಲ್ಲ, ಹೆಚ್ಚಿಗೆ ಆಹಾರವನ್ನು ಬೆಳೆಸುವುದಕ್ಕಾಗುವುದಿಲ್ಲ, ಇರತಕ್ಕಪ್ಪನ್ನು ತಿನ್ನುತ್ತೇವೆ. ಹೇಗೆ ಕೆಲಸ ನಡೆಸಬೇಕೋ ಅದನ್ನು ನಡೆಸುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಾದ ವೆಂಕಟಪ್ಪನವರಿಗೆ ಒಂದು ಮಾತು ಈ ಮೂಲಕ ಹೇಳುತ್ತೇನೆ. ರೈತನ ಕಷ್ಟವನ್ನು ಬಹಳವಾಗಿ ಅವರು ಹೇಳಿದರು. ಆದರೆ ಈ ಹತ್ತು ವರ್ಷಗಳಿಂದ ಎಷ್ಟು ಪ್ರಯತ್ನ ಆಗಿದೆಯೆಂಬುದನ್ನು ಹೇಳಲಿ. ಎರ್ನೆಲ್ಲೂ ನೀತಿಪತನವಾಗಿದೆ ಅಷ್ಟೆ ! ಈ ನೀತಿಯ ಪುನರುತ್ಥಾಪನೆ ಈಗ ಆಗಬೇಕಾಗಿದೆ. ಕ್ರಾಂತಿಕಾರಕವಾದ ಬದಲಾವಣೆಯಾಗಬೇಕಾಗಿದೆ. ಒಂದೆಡೆ ಜನರಲ್ಲಿರುವ ಜಡ ಪದ್ಧತಿ ಹೋಗಬೇಕು; ಸಮಾಜದ ಪುನರ್ವ್ಯವಸ್ಥೆಯಾಗಬೇಕು; ಭೂ ವ್ಯವಸ್ಥೆ ಸರಿಯಾಗಿ ಆಗಬೇಕು. ಈ ಎಲ್ಲ ವ್ಯವಸ್ಥೆಗಳನ್ನೂ ಏಕ ಕಾಲದಲ್ಲಿ ಮಾಡಲಿಹೋದರೆ ದೇಶ ಮುಂದುವರಿಯುವುದಿಲ್ಲ. ಅದಕ್ಕೇ ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದರು, ಆತ್ಯದ ಪುನರ್ವ್ಯವಸ್ಥೆಯಾಗಬೇಕು ಎಂದು. ಕಂಟ್ರೋಲ್ ಇರುವವರೆಗೆ ಇದೊಂದೂ ಸಾಧ್ಯವಿಲ್ಲ ಎಂಬುದನ್ನು ಎಲ್ಲರೂ ಒಪ್ಪುತ್ತಾರೆಂದು ನಂಬಿದ್ದೇನೆ.

ಶ್ರೀ ಎ. ಭೀಮಪ್ಪನಾಯಕರು.—ಕಂಟ್ರೋಲುಗಳು ಹೋಗಬಾರದೆಂದು ಯಾರೂ ಹೇಳಿಲ್ಲ. ಒಂದು ವಿಧದಲ್ಲಿ Controlled economy ಇರಬೇಕೆಂಬುದೇ ನಮ್ಮ ಅಭಿಪ್ರಾಯ.

ಶ್ರೀ ಕೆ. ಪಟ್ಟಾಭಿರಾಮರೆಡ್ಡಿರವರು.—ನನ್ನ ಮಿತ್ರರು ಇದು 'Controlled economy' ಎಂದು ಹೇಳಿದರು. 'Controlled economy' ಎಂಬ ಪದ ಅರ್ಥಶಾಸ್ತ್ರದ ಪದ. ಮಾನ್ಯ ಭೀಮಪ್ಪನಾಯಕರು ಅದರರ್ಥವನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಳ್ಳಬೇಕು. ಅರ್ಥಶಾಸ್ತ್ರದಲ್ಲಿ ಇದಕ್ಕೆ ಏನು ಅರ್ಥ ಮಾಡಿದೆ ! ನಮ್ಮ ಕೇಂದ್ರೀಕೃತ ಸಂಸ್ಥೆಗಳನ್ನೆರ್ಲಾ ಕತ್ತುಹಾಕಬೇಕು ಎಂದು. ಹೊಸ ಧ್ಯೇಯಗಳನ್ನು ರೂಪಿಸಬೇಕು ಎಂದು ಕಂಟ್ರೋಲ್ ಎಂಬುದು ಮಾನವನ ಸ್ವಾಭಾವಿಕವಾದ ನೈಜವಾದ ಗುಣಗಳನ್ನು ಹಾಳುಮಾಡುತ್ತದೆ. ಇಂಗ್ಲೆಂಡಿನ ಉದಾಹರಣೆಯನ್ನೇ ತೆಗೆದುಕೊಳ್ಳಿ ; ಅಮೆರಿಕಾದ ಉದಾಹರಣೆಯನ್ನೇ ತೆಗೆದುಕೊಳ್ಳಿ ; ಅವರು ತಮ್ಮ ಸಮಾಜ ಸಂಸ್ಕೃತಿ, ನಾಗರಿಕತೆಗಳ ಕಡೆ ಎಷ್ಟು ಗಮನ ಕೊಡುತ್ತಾರೆ. ಅದನ್ನು ನಾವು ಅಭ್ಯಾಸ ಮಾಡಬೇಕು. 'Controlled economy' ಎಂದು ಹೇಳುವವರು ಈ ಕಂಟ್ರೋಲು ಇರಬೇಕೆಂದು ಹೇಳುವುದನ್ನು ಕೇಳಿದರೆ ಆಶ್ಚರ್ಯವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಶ್ರೀಮಾನ್ ಹನುಮಂತಯ್ಯನವರು ತಮ್ಮ ರೇಡಿಯೋ ಭಾಷಣದಲ್ಲಿ ಒಂದು ಆಶ್ವಾಸನೆ ಕೊಟ್ಟಿದ್ದಾರೆ. ಅದನ್ನು ನಾನು ಬಹುಮಟ್ಟಿಗೆ ಸ್ವಾಗತಿಸುತ್ತೇನೆ. ಅಲ್ಲದೆ ಇನ್ನೂ ಹೆಚ್ಚಿಗೆ ನಿರೀಕ್ಷಿಸುತ್ತೇನೆ. ಶ್ರೀಮಾನ್ ಹನುಮಂತಯ್ಯನವರು ಈ ವಿಚಾರದಲ್ಲಿ ಧೈರ್ಯಮಾಡದೆ ಹೋದರೆ ಇನ್ಯಾರು ಮಾಡುತ್ತಾರೆ ? ಇಂದು ಬೀಹಾರ್ ಪ್ರಾಂತ ಮದ್ರಾಸ್ ಪ್ರಾಂತ ಹೇಗೆ ಮುಂದು ಹೋಗುತ್ತವೆ ! ಕಂಟ್ರೋಲ್ ಕೆಲವರಿಗೆ ಕೇವಲ ಹಂಚಿಕೆ ಮಾತ್ರ ಇರುವ ಹಾಗೆ ಕಾಣುತ್ತದೆ. ಅದಷ್ಟೇ ಅಲ್ಲ. ಇದು ನಿಮ್ಮ ಮನಸ್ಸಿನ ಧೋರಣೆಯನ್ನು ತೋರುತ್ತದೆ ; ಇದರ ಹಿಂದಿರತಕ್ಕ ಮನೋಭಾವವನ್ನು ತೋರುತ್ತದೆ. ಅದರಿಂದ ಎಲ್ಲರಿಗೂ ಕುಠಾರಪ್ರಾಯವಾದ ಮತ್ತು ಅನೇಕ ಕೆಡಕುಗಳಿಗೆ ಕಾರಣವಾದ ಈ ಕಂಟ್ರೋಲ್ ಪದ್ಧತಿಯು ಮೊದಲು ತೊಲಗಲಿ. ಮದ್ರಾಸ್ ಪ್ರಾಂತ, ಬೀಹಾರ್ ಪ್ರಾಂತಗಳಲ್ಲಿ ಧೈರ್ಯವಾಗಿ ಮಾಡಿಲ್ಲವೇ ! (Hear, Hear.) ಆ ಪ್ರಾಂತಗಳು ನಮ್ಮುಂದ ಎಷ್ಟು ವೇಗದಿಂದ ಮುಂದೆ ಹೋಗುತ್ತಿವೆ, ನೋಡಿ. ಆದ್ದರಿಂದ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳವರಿಗೆ ಒಂದು ಮಾತನ್ನು ಹೇಳುತ್ತೇನೆ. ಆಹಾರದ ವಿಚಾರದಲ್ಲಿ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ, ನಿಜವಾಗಿಯೂ ಬಹಳ ಧೈರ್ಯಮಾಡಿದ್ದಾರೆ. ಇದಕ್ಕಾಗಿ ಯಾರೇ ಅಗಲಿ ಅವರನ್ನು ಕೊಂಡಾಡುತ್ತೇವೆ. ಇಟ್ಟ ಹೆಜ್ಜೆಯನ್ನು ಮುಂದೆ ದಾರಿ ತೋರದೆ ತೆಗೆಯಬೇಕಾಗಿಲ್ಲ. ಅದೇ ದಿಟರತನ. ವಿಕೆ ಈ ಭಯ ! ಭಯ ಭ್ರಾಂತಿಗಳು ಅಡಳಿತಕ್ಕೆ ಸರಿಹೋಗುವುದಿಲ್ಲ; ಅಡಳಿತವನ್ನು ಅವು ನಾಶಪಡಿಸುತ್ತವೆ. ಅಂದು ಬೆಳಗ್ಗೆ 8-9 ಘಂಟೆಗೆ ತಾವು ಅಧಿಕಾರ ವಹಿಸಿದಿರಿ ; ಸಂಜೆ ರೇಡಿಯೋ ಭಾಷಣ ಮಾಡಿದಿರಿ, ಧೈರ್ಯ ಕಂದಿರಿ. ಅದರಂತೆ ಆಹಾರದ ನೀತಿಯನ್ನು ಬದಲಾವಣೆ ಮಾಡಿದಿರಿ. ಆ ತರುವಾಯ ಏಕೆ ನಿಮಗೆ ಭಯ ಬಂತು ! ಈಗ ನಡುಗುವುದಕ್ಕೆ ಅವಕಾಶವಿಲ್ಲ. ಮಹಾತ್ಮ ಗಾಂಧಿಯವರು ಕಂಟ್ರೋಲ್ ತಗೆಯಬೇಕೆಂದು ಹೇಳುವಾಗ ಕೇವಲ ಹಂಚಿಕೆಯ ವ್ಯವಸ್ಥೆ ಮಾತ್ರ ಅವರ ಮನಸ್ಸಿನಲ್ಲಿತ್ತೆಂದರೆ ನಾನು ನಂಬುವುದಿಲ್ಲ. ಒಂದು ನೈತಿಕ ತಳಹದಿಯ ಮೇಲೆ ಈ ದೇಶವನ್ನು ಕಟ್ಟಬೇಕು. ಭೂ

ಹಂಚಿಕೆಯರ್ನಾಗಲೀ ಜನ ಜೀವನದಲ್ಲಿರುವ ವ್ಯತ್ಯಾಸ ಗಳನ್ನಾಗಲೀ, ಯಾವುದರಲ್ಲಿಯೂ ಕೃತಕವಾದ ಪಾತಾವರಣ ಹೋಗಿ ಸ್ವಾಭಾವಿಕವಾದ ವಾತಾವರಣ ಬರುವ ವರೆಗೂ ದೇಶ ಮುಂದುವರಿಯುವುದಕ್ಕಾಗುವುದಿಲ್ಲ ವೆಂದು ಅವರ ಭಾವನೆಯಾಗಿತ್ತು.

ಮೂರನೆಯದಾಗಿ, ಕ್ಷಾಮದ ಪರಿಸ್ಥಿತಿಯ ವಿಚಾರವನ್ನು ಶ್ರೀಮಾನ್ ಲಿಂಗಾರೆಡ್ಡಿಯವರು ಅವರದೇ ಆದ ಒಂದು ಶೈಲಿಯಲ್ಲಿ ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ. ಅಲ್ಲಿ ಬಹಳ ಕೆಲಸ ಮಾಡಬೇಕಾದದ್ದಿದೆ. ಸರ್ಕಾರದವರೂ ತಕ್ಕಮಟ್ಟಿಗೆ ಕೆಲಸ ಮಾಡುತ್ತಿದ್ದಾರೆ; ಇಲ್ಲ ವೆಂದು ನಾನು ಹೇಳುವುದಿಲ್ಲ. ಇದರಲ್ಲೂ ಕೆಲವು ಅಧಿಕಾರಿ ವರ್ಗದವರು ಬಹಳ ವಿಶೇಷತೆಯಿಂದಲೂ ಉತ್ಸಾಹದಿಂದಲೂ ಕೆಲಸ ನಡೆಸಿದ್ದಾರೆ. ಅವೆಲ್ಲಾ ಸರಿಯೇ; ಆದರೆ ತಾವಿದನ್ನು ಇನ್ನೊಂದು ದೃಷ್ಟಿಯಿಂದ ನೋಡಬೇಕು. ಈ ಕ್ಷಾಮಕ್ಕೆ ಮೂಲಭೂತವಾದ ಕಾರಣ ವೇನೆಂಬುದನ್ನು ತಾವು ಗಮನಿಸಬೇಕೆಂದು ನಾನು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ಕ್ಷಾಮ ಏಕೆ ಬಂತು? ಯಾವ ನೀತಿಯನ್ನು ನೀವು ಆ ಪ್ರದೇಶದ ವಿಷಯದಲ್ಲಿ ಇದುವರೆಗೂ ಪಾಲಿಸಿಕೊಂಡು ಬಂದಿರೋ ಅದರಿಂದ ಬಂತು. ಮಳೆ ಬಂದರೆ ಕ್ಷಾಮ ಹೋಗುತ್ತದೆ ಅನ್ನುವುದಲ್ಲ. ಕ್ಷಾಮ ಯಾವಾಗ ಬರುತ್ತದೆಂದು ಜ್ಞಾನಿಗಳು, ವಿಭೂತಿ ಪುರುಷರು ಹೇಳುವುದನ್ನು ನಾವೆಲ್ಲರೂ ಕೇಳಿದ್ದೇವೆ. ನೀತಿ ಹೋಯಿತು ಕ್ಷಾಮ ಬಂತು ಎಂದು ಹೇಳಿತ್ತಾರೆ. ಇದು ಸತ್ಯವಾದ ಮಾತು. ಕ್ಷಾಮವನ್ನು ಬೆಳೆಸಿಕೊಂಡು ಹೋಗುವ ಯಾವ Centralised economy ಕೇಂದ್ರೀಕೃತವಾದ ಆರ್ಥಿಕ ವ್ಯವಸ್ಥೆ ನಮ್ಮ ದೇಶದಲ್ಲಿ ಬೇರೂರಿಕೋ ಅದೇ ಇದಕ್ಕೆ ಕಾರಣವಾಗಿದೆ. ಸ್ವದೇಶೀ ಸ್ವದೇಶೀ ಎಂದು ನಾವು ಸಾರಿದ್ದು 1906ರಷ್ಟು ಹಿಂದೆಯೇ. ಈ ಸ್ವದೇಶಿ ಮಂತ್ರವನ್ನೇ ಚೆಂದ್ಯಾಯುಧವಾಗಿ ಉಪಯೋಗಿಸಿ ರಾಜ್ಯ ಕಟ್ಟಿದೆವು. ಆದರೆ ಈಗ ಅದೆಲ್ಲವನ್ನೂ ಬಿಟ್ಟು ಬೇರೆ ಕಡೆ ಸಾಗಿಸಿದ್ದೇವೆ. ನಮ್ಮ ಹನುಮಂತಯ್ಯನವರ ಸುತ್ತ ನಾವೇನು ಕಾಣುತ್ತಿದ್ದೇವೆ? ಒಂದೆಡೆ ಸ್ವೀಡನ್ನಿನಿಂದ ಬಂದಿರತಕ್ಕ ರೆಟರ್ ವ್ಯಾಡ್. ಇನ್ನೊಂದೆಡೆ ಇಂಗ್ಲೆಂಡಿನಿಂದ ಬಂದದ್ದು ಮತ್ತೊಂದು ವಸ್ತು ಕಾಣುತ್ತದೆ. ಆಸ್ಟ್ರಿಯಾದಿಂದ ಬಂದ ಪೆನ್ಸಿಲ್ ಇನ್ನೊಂದು ಕಡೆ ಕಾಣುತ್ತಿದೆ. ಈ ತೆರನಾಗಿ ಎಲ್ಲೆಲ್ಲೂ ಪರದೇಶೀಯ ವಸ್ತುಗಳೇ ಕಣ್ಣಿಗೆ ಬೀಳುತ್ತಿದ್ದರೆ, ಇವುಗಳನ್ನೇ ನೋಡುವ ನಮ್ಮ ಅಧಿಕಾರಿಗಳ ಮನೋಭಾವ ಸ್ವದೇಶೀ ವಸ್ತುಗಳ ಕಡೆ ಹೇಗೆ ಹೋಗಬೇಕು? ನಮ್ಮ ಮೈಸೂರು ದೇಶದ ಆಡಳಿತ ವರ್ಗದವರೇನೋ ಎಷ್ಟೋ ಮಟ್ಟಿಗೆ ದಕ್ಷತೆಯಿಂದ ಇಡೀ ಇಂಡಿಯಾ ದೇಶಕ್ಕೇ ಆದರ್ಶಪ್ರಾಯವಾಗಿ ಕೆಲಸಮಾಡುತ್ತಿದ್ದಾರೆ. ಉದಾಹರಣೆಗೆ; ನಮ್ಮ ಸಕ್ಕರೆಯಿಯವರು ಬಂದ ತಕ್ಷಣ ಸುತ್ತಲೂ ಬರಿ ಇಂಗ್ಲೆಂಡ್, ಸ್ವೀಡನ್, ಆಸ್ಟ್ರಿಯಾ ದೇಶಗಳ ಸಾಮಾನುಗಳೇ ಅವರ ಕಣ್ಣಿಗೆ ಬೀಳುತ್ತಿದ್ದರೆ, ಅವರ ಮನಸ್ಸು ಹೇಗೆ ಸ್ವದೇಶದ ಕಡೆಗೆ ಏರಿ ವರ್ತನೆಯಾದೀತು. ಆದ್ದರಿಂದ ತಾವು ಮನಗಾಣಬೇಕು, ತಾವೀಗ ಈ ಸ್ವದೇಶೀ ನೀತಿಯನ್ನು ಬಿಟ್ಟು ಬಿಟ್ಟದ್ದೇ ಈಗಿನ ಕೋರಾದಲ್ಲಿನ ಭೀಕರ ಕ್ಷಾಮಕ್ಕೆ ಕಾರಣ ಎಂಬುದನ್ನು. ನಿಜವಾಗಿಯೂ ಅಲ್ಲಿಯ ಜನರು ನೀರಿಗಾಗಿ ಬಹಳ ಕಷ್ಟಪಡುತ್ತಿದ್ದಾರೆ. ಆ ಪರಿಸ್ಥಿತಿ ನೋಡಿದರೆ ಗಾಬರಿಯಾಗುತ್ತದೆ. ಮಳೆಗೆ ಮೇಲಿಂದ ಬರುವುದನ್ನು ಕಾದುಕೊಂಡಿರುವ ನೀತಿಯೇ ಇಂದು ಈ ಪ್ರದೇಶಕ್ಕೆ ಕ್ಷಾಮವನ್ನು ತಂದಿತು! ಅದು ಬಿಟ್ಟು ಭೂಗರ್ಭದಲ್ಲಿ ಹರಿಯುವ ಪಾತಾಳ ಗಂಗೆಯನ್ನು ಮೇಲಕ್ಕೆತ್ತುವ ಪ್ರಯತ್ನ ಮಾಡಿದ್ದರೆ ಈ ಕಷ್ಟವಿರುತ್ತಿತ್ತೆ? ಈಗ ಅಲ್ಲಿನ ಪಾರಾರ್ ನದಿ, ಪಿನಾಕಿನಿ ಮುಂತಾದ ನದಿಗಳು ಸದಾ ತುಂಬಿ ಹರಿಯದಿದ್ದರೂ ಭೂತಳದಲ್ಲಿ ಯಥೇಷ್ಟವಾಗಿ ದೇವಗಂಗೆ ಹರಿದು ತಾನೇತಾನಾಗಿ ಸಮುದ್ರಕ್ಕೆ ಹರಿದು ಹೋಗುತ್ತಿದೆ. ಭಗೀರಥನು ಹೇಗೆ ಸ್ವರ್ಗಕ್ಕೆ ಹೋಗಿ ದೇವಗಂಗೆಯನ್ನು ತಂದನೋ ಹಾಗೆಯೇ ಭೂಗರ್ಭದಿಂದ ನೀರನ್ನು ಮೇಲಕ್ಕೆತ್ತುವ ಭಗೀರಥ ಪ್ರಯತ್ನವಾಡಿ ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

11-30 A.M.

ಕೋರಾರಾ ಜಿಲ್ಲೆಯ ವಿಷಯ ಯೋಚನೆ ಮಾಡೋಣ. ರಾಯಲು ಸೀಮೆಯಲ್ಲಿ ತುಂಗಭದ್ರಾ ಪ್ರಾಜೆಕ್ಟಿನ ವಿಚಾರವಾಗಿ ನಲವತ್ತು ವರ್ಷಗಳಿಂದಲೂ ಒಂದೇ ಸಮನಾಗಿ ಯೋಚನೆ ಮಾಡುತ್ತಿದ್ದಾರೆ. ಕೋರಾರಾ ಜಿಲ್ಲೆಯಲ್ಲಿ ಮಳೆ ಸರಿಯಾಗಿ ಬರುತ್ತಿಲ್ಲ. ಜನರು ಜೀವನ ಮಾಡುವುದು ಬಹಳ ಕಷ್ಟವಾಗಿದೆ. ಹಣವಾದರೂ ಇದೆಯೇ ಎಂದರೆ ಅವರಿಗೆ ಸಂಪಾದನೆ ಆಗುತ್ತಿಲ್ಲ. ಹೀಗೆ ವರ್ಷ ವರ್ಷವೂ ಆಗುತ್ತಿದೆ. ಸರ್ಕಾರದ ದೃಷ್ಟಿಯಿಂದ ನೋಡುವುದಾದರೆ, ಮೈಸೂರು ದೇಶಕ್ಕೆ ಒರತಕ್ಕ ವರಮಾನದಲ್ಲಿ ಶೇಕಡ 50 ರಷ್ಟು ಕೋರಾರ ಜಿಲ್ಲೆಯಿಂದ ಬರುತ್ತಿತ್ತು ಎಂದು ಹೇಳಿದರೆ ತಪ್ಪಾಗಲಾರದು. ಗೋರ್ಡ್ ಡ್ಯೂಟಿಯನ್ನೂ ಇತರ ವರಮಾನಗಳನ್ನೂ ಸೇರಿಸಿಕೊಂಡು ಹೀಗೆ ಹೇಳುತ್ತಿದ್ದೇನೆ. ಈಗ ನಾನು ಹೇಳುತ್ತಿರುವ ಯೋಜನೆಯನ್ನು ತಾವು ಆದಷ್ಟಬೇಗನ್ನು ಮಹಿಸಿಕೊಂಡ ಮೇಲೆ ಮಾಡಲಲ್ಲವೆಂದು ಅಕ್ಷೇಪಿಸುತ್ತಿಲ್ಲ. ಅಲ್ಲಿ ಈ ಕ್ಷಾಮ ಎನ್ನುವುದು ಹತ್ತಾರು ವರ್ಷಗಳಿಂದ ಸರ್ಕಾರ ಯಾವ ನೀತಿಯನ್ನನುಸರಿಸಿಕೊಂಡು ಬಂದಿದೆಯೋ ಆ ನೀತಿಯ ಪರಿಣಾಮವೆಂದು ಹೇಳಬಹುದು. ಪಾರಾರ್ ನದಿ ಜೀವನದಿಯಲ್ಲದೇ ಇರುವುದರಿಂದ ಮಳೆಯ ನೀರನ್ನೇ ನಂಬಿಕೊಂಡಿರಬೇಕಾಗಿದೆ. ಕೇವಲ ಮಳೆ ಬಂದರೆ, ಕೆರೆ ಕಟ್ಟೆ, ತುಂಬಿದರೆ, ರೈತರು ವ್ಯವಸಾಯ ಮಾಡುವುದು. ಬಾವಿ ನೀರು ಒದಗುವುದಾದರೆ ಮಾಡಬಹುದು. ಶ್ರೀಮಾನ್ ನಾಗಯ್ಯ ರೆಡ್ಡಿಯವರ ಜಪಾನನ್ನು ಯಾರಾದರೂ ಬಂದು ನೋಡಲಿ. ಅವರು ಅಲ್ಲಿ ಬಾವಿಯನ್ನು ತೆಗೆಸಿದ್ದಾರೆ, ಕೇವಲ ಅರೇಳು ಅಡಿಯಲ್ಲಿ ಬೇಕಾದಷ್ಟು ನೀರು ಬಂದಿದೆ. ಅದಕ್ಕೆ ಪಂಪು ಹಾಕಿಸಿದ್ದಾರೆ. ಮುಖ್ಯ ಮಂತ್ರಿಗಳಿಗೂ ಮತ್ತು ಇತರ ಅನೇಕರಿಗೂ ಗೊತ್ತಿರುವಂತೆ, ವಿಮೋರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಆ ಸ್ಥಳದಲ್ಲಿ ಸೇರುವ ಸಾವಿರಾರು ಜನರಿಗೂ ಶ್ರೀಮಾನ್ ನಾಗಯ್ಯರೆಡ್ಡಿಯವರ ಬಾವಿ ನೀರನ್ನೊದಗಿಸಿ ತೃಪ್ತಿಪಡಿಸಿತು. ಹಾಗೆ ಭೂಮಿಯ ಒಳಗಡೆ ಇರುವ ಜಲವನ್ನು ಹೊರಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು. ಎದುರು ಪಕ್ಷದವರು ಮಾತನಾಡುತ್ತಿದ್ದಾರೆ, ಅವರು ಏನನ್ನು ಹೇಳಿದರೂ ನಂಬಬಾರದೆಂಬ ಮನೋಭಾವವಿರಬಾರದು. ನಾನು ಸುಮ್ಮನೆ ವಿರೋಧಿಸಬೇಕೆಂಬ ಉದ್ದೇಶದಿಂದ ಸಭೆಗೆ ಬಂದಿಲ್ಲ.

ಇನ್ನೊಂದು ವಿಷಯ. ಸ್ವದೇಶಿ ಸ್ವದೇಶಿ ಎಂದು ಹೇಳುತ್ತಿರುವ ನಾವು, ಸ್ವದೇಶಿ ತತ್ವವನ್ನು ಪಾಲಿಸದೇ ಇರುವ ನಾವು, ಜನರಿಗೆ ಅನ್ನವಿಲ್ಲ ಎಂದು ಹೇಳಿದರೆ ಅನ್ನ ಹೇಗೆ ಬರುತ್ತದೆ? ಈ ರೀತಿ ಜನರಿಗೆ ಅನ್ನವಿಲ್ಲದಂತೆ ಮಾಡಿರುವವರು ನಾವೇ ಅಲ್ಲವೆ! ಕಾಂಗ್ರೆಸ್ಸಿನ ಪ್ರಧಾನ ತತ್ವವಾದ ಈ ಸ್ವದೇಶಿ ತತ್ವವನ್ನು ಪಾಲಿಸಿಕೊಂಡು ಬರುತ್ತಿದ್ದರೆ ಹೀಗೇಕಾಗುತ್ತಿತ್ತು? ಜನರಿಗೆ ಉದ್ಯೋಗವಿಲ್ಲ, ಬಡವರಿಗೆ ಹೊಟ್ಟೆಗೆ ಅನ್ನವಿಲ್ಲ ಎಂದು ಹೇಳಿದರೆ

(ಶ್ರೀ ಕೆ. ಪಟ್ಟಾಭಿರಾಮಿರೆಡ್ಡಿಯವರು.)

ಪ್ರಯೋಜನವೇನು? ಸಭಾಧ್ಯಕ್ಷರಲ್ಲಿ ನಾನು ಇಷ್ಟು ನಿವೇದನೆ ಮಾಡಿಕೊಳ್ಳುತ್ತಿದ್ದೇನೆ, ಮುಖ್ಯವಾಗಿ ನನ್ನ ದೃಷ್ಟಿಯಲ್ಲಿ ಇಷ್ಟು ಕಾಣುತ್ತದೆ—ರಾಜಪ್ರಮುಖರಿಗೂ ನಮಗೂ ಇರುವ ಸಂಬಂಧವೇನು? ಅವರು ರಾಜರು ಹೌದೇ ಅಲ್ಲವೆ ಎನ್ನುವ ಪ್ರಶ್ನೆಯಲ್ಲ. ರಾಜ್ಯಾಂಗ ಸಂವಿಧಾನದ 176ನೆಯ ವಿಧಿಯ ಪ್ರಕಾರ ರಾಜಪ್ರಮುಖರು ಭಾಷಣ ಮಾಡಿದ್ದಾರೆ. ಇದು ಬಹಳ ಜವಾಬ್ದಾರಿಯಿಂದ ಕೂಡಿ, matter of fact ನಂತಿರಬೇಕು. ಜನಾಬ್ ಇಮಾಂರವರು ಹೇಳಿದ ಹಾಗೆ, ಏನೋ ಬುದ್ಧಿವಾದ ಹೇಳುತ್ತೇವೆ ಎನ್ನುವ ಹಾಗಿರಬಾರದು.

ಕಡೆಯದಾಗಿ, ಶ್ರೀಮಾನ್ ಎಚ್. ಎಸ್. ರುದ್ರಪ್ಪನವರು ರಾಜಪ್ರಮುಖರ ಭಾಷಣವನ್ನು ಸ್ವಾಗತಿಸುವುದಕ್ಕೆ ಒಂದು ನಿರ್ಣಯವನ್ನು ನಮ್ಮ ಮುಂದಿಟ್ಟಿದ್ದಾರೆ. ಅದನ್ನು ನಾವು ಚರ್ಚೆ ಮಾಡುತ್ತಿದ್ದೇವೆ. ಅವರ ಭಾಷಣದಲ್ಲಿ ಎರಡು ಮಾತುಗಳನ್ನು ಹೇಳಿದ್ದಾರೆ. ಅದನ್ನು ಹೇಳಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ. ಭಾಷಣದಲ್ಲಿರುವ ಎರಡು ವಾಕ್ಯಗಳನ್ನು ಪಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಈ ಭಾಷಣಕ್ಕೆ ಸರ್ಕಾರದ ಜವಾಬ್ದಾರಿ ಇದೆ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಭಾಷಣದ ಮೊದಲನೆಯ ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ.

> " Its dissolution marks the close of a chapter in the history of this State and of India. The Constitution framed by the people of India, through a Constituent Assembly brought into being the Sovereign Democratic Republic.....

ಮಹಾರಾಜರವರು ಮಾಡಿರುವ ಭಾಷಣವೆಂದರೆ ಬಹಳ ಜವಾಬ್ದಾರಿಯುತವಾದುದು. Republic ಎಂದರೆ, ಒಂದು ಸ್ವತಂತ್ರ ಗಣರಾಜ್ಯ. ಇದು ಬಹಳ ಮುಖ್ಯವಾದುದು, ಮಹತ್ವದಿಂದ ಕೂಡಿದುದು. ಎರಡು ಸಾವಿರ ವರ್ಷಗಳ ಹಿಂದೆ ಬುದ್ಧನ ಕಾಲದಲ್ಲಿದ್ದ ಈ ಒಂದು ವ್ಯವಸ್ಥೆಯನ್ನು, ಪದ್ಧತಿಯನ್ನು ನಾವು ಕಳೆದುಕೊಂಡಿದ್ದೇವೆ. ಈಗ ಜನರಲ್ಲಿ ನಾವು ಗಣರಾಜ್ಯದ ಭಾವನೆಯನ್ನು ಬೆಳೆಸಬೇಕು. ಸತ್ಸಂಪ್ರದಾಯವನ್ನು ಬೆಳೆಸುವುದು ಬಹಳ ಕಷ್ಟ. ರಾಜ ಮಹಾರಾಜರುಗಳಲ್ಲಿ ಈ ರೀತಿಯ ಒಂದು ಮನೋಭಾವವನ್ನು ಬೆಳೆಸುವುದು ಕಷ್ಟ. ನಾನು ರಾಜ್ಯಾಂಗದ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈ ದೃಷ್ಟಿ ಈ ಮನೋಭಾವ ದೇಶದಲ್ಲಿ ಹೇಗೆ ಬೆಳೆಯುತ್ತಿದೆಯೋ ಗೊತ್ತಿಲ್ಲ. ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಹುಡುಗರು ರಾಷ್ಟ್ರಗೀತೆ ಹೇಳಬೇಕಾದರೆ, 'ಜನಗಣ ಮನ' ಹೇಳಿದ ಮೇಲೆ ಅವರಿಂದ 'ಕಾಯಾ ಶ್ರೀಗೌರಿ' ಹೇಳಿಸುತ್ತಿದ್ದೇವೆ. ಇದನ್ನು ನೋಡಿದರೆ ಇದು ವಿಭಿನ್ನನಿಷ್ಠೆಯಾಗಿ ಹಾಗೂ ರಾಜ್ಯಾಂಗ ದೃಷ್ಟಿಗೆ ವಿರುದ್ಧವಾಗುವುದಿಲ್ಲವೆ ಎಂದು ಹೆದರಿಕೆಯಾಗುತ್ತದೆ. ಹುಡುಗರಲ್ಲಿ, ವಿದ್ಯಾರ್ಥಿಗಳಲ್ಲಿರುವ ಈಗಿನ ಭಾವನೆಯನ್ನು ಬದಲಾಯಿಸಿ ಗಣರಾಜ್ಯದ ದೃಷ್ಟಿಯನ್ನು ಅವರಲ್ಲಿ ಬೆಳೆಸುವಂತೆ ಮಾಡಬೇಕು. ವಿದ್ಯಾಭ್ಯಾಸ ಕ್ರಮವನ್ನೂ ಬದಲಾಯಿಸಬೇಕು.

ಅವರ ಭಾಷಣದಲ್ಲಿ ಮತ್ತೊಂದು ವಾಕ್ಯವಿದೆ. ಎರಡನೆಯ ಪ್ಯಾರಾದಲ್ಲಿ

> " The two Houses of Legislature, which I am meeting to day, are the first to come into being under the Constitution. A special responsibility therefore rests on your shoulders to make the Constitution function in its true spirit."

ಎಂದು ಹೇಳಿರುವುದನ್ನು ಸಂತೋಷದಿಂದ ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಕೇಳಿಕೊಳ್ಳುತ್ತೇನೆ. ಸತ್ಸಂಪ್ರದಾಯಗಳ ಪ್ರಕಾರ ಇದು ಶ್ರೀಮನ್ಮಹಾರಾಜರವರ ಭಾಷಣವೆಂದಾಗಬಾರದು; ನಿಜವಾಗಿ ಇದು ಮುಖ್ಯ ಮಂತ್ರಿಗಳ ಭಾಷಣವಾಗಬೇಕು. ಇದು ಇಂಗ್ಲೀಷರ ಸಂಪ್ರದಾಯ. ನಿಜವಾಗಿ ಈ ದೃಷ್ಟಿ ಅವರಲ್ಲಿದ್ದು ಈ ಎರಡು ವಾಕ್ಯಗಳನ್ನು ಮುಖ್ಯಮಂತ್ರಿಗಳು ಸೇರಿಸಿದ್ದು ಬಹಳ ಸಂತೋಷ. ಈ ದೃಷ್ಟಿಯಿಂದ ಕೆಲಸಮಾಡಿ ರಾಜ್ಯಾಂಗವನ್ನು ಯಶಸ್ವಿಯಾಗಿ ನಡೆಸುವ ಜವಾಬ್ದಾರಿ ಇದೆಯೆಂದು ಹೇಳಿದ್ದಾರೆ. ಇಂತಹ ಕೆಲಸವನ್ನು ಯಶಸ್ವಿಯಾಗಿ ನಡೆಸಲು ಸಹಾಯಕವಾಗಬೇಕಾದರೆ, ಮುಖ್ಯ ಮಂತ್ರಿಗಳು ವಿಶ್ವಾಸಪೂರ್ವಕವಾಗಿ ಗಣರಾಜ್ಯದ ಆದರ್ಶದ ಅಧ್ಯಾಸದ ಬಗ್ಗೆ ಪೂರ್ಣ ಭರವಸೆಯನ್ನು ತಮ್ಮ ಭಾಷಣದಲ್ಲಿ ಕೊಟ್ಟು ತೃಪ್ತಿಪಡಿಸಬೇಕು. ಹೀಗೆ ಮಾಡಿದರೆ ಜನರಿಗೆ ತೃಪ್ತಿಯಾಗುತ್ತದೆ. ನಾವು ಮಾಡಿದ ಪ್ರಮಾಣಕ್ಕೆ ಸರಿಹೋಗುತ್ತದೆ. ಇಂಗ್ಲಿಷ್ ಪಾರ್ಲಮೆಂಟರಿ ಪದ್ಧತಿಗೆ ನಾನು ಅಷ್ಟು ಬೆಲೆ ಕೊಡುವುದಿಲ್ಲ. ಹಿಂಸಾಯುತವಾದ ಸಾಧನದಿಂದ ಅಹಿಂಸಾಯುತವಾದ ಸಮಾಜವನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಇಂದು ನಮ್ಮ ಕೈಗೆ ಸಿಕ್ಕಿರುವ ಇದೊಂದು ಸಾಧನವನ್ನು ಯಶಸ್ವಿಯಾಗಿ ಉಪಯೋಗಿಸಿ ಜಯಪ್ರದ ಮಾಡುವುದಕ್ಕೆ ಅಶ್ವಾಸನ ತಮ್ಮಿಂದ ಬರಲಿ ಎಂದು ಹೇಳಿ, ನನ್ನ ಮನಸ್ಸಿನಲ್ಲಿರುವ ಕೊರತೆಯನ್ನು ಸಭಾಧ್ಯಕ್ಷರ ಮೂಲಕವಾಗಿ ನಿವೇದನೆ ಮಾಡಿ, ಈ ತಿದ್ದುಪಡಿಗಳನ್ನು ನುಮೋದಿಸುವುದರ ಮೂಲಕ ಈ ಧ್ಯೇಯ ಧೋರಣೆಗಳಿಗೆ ಪೂರ್ಣ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Amendment moved.—

"Add the words at the end of the Address.

> "but regret that your Highness's Ministers have not either taken or held out, therein, any definite assurance that they would take steps to bring into line with the States of Madras and Bihar their food policy and embark upon a policy of decontrol or taken effective steps to give relief, adequate to the people in the distress areas of the State or adopt measures to carry out the directions given in Part IV of the Indian Constitution."

The remaining amendments stand in the names of Members belonging to one and the same Party. I would like to know the views of the Members regarding the desirability of so many amendments being moved by the members of the same Opposition Party.

Janab J. MOHAMED IMAM.—I agree that there must be only one amendment for the Party. Here the main amendment is the one standing in my name. But this year these amendments have been tabled by my friends on account of the special conditions existing in Kolar District just to bring home some facts regarding the distress prevailing in those districts. However, they will speak on that subject only and they will withdraw. It is only the first amendment which stands in my name that will be pressed.

Sri K. HANUMANTHAIYA.—In view of the Leader of the Opposition having taken up the responsibility of leading the rest of the members of the party in order to establish a good tradition, I would request him to confine only to one amendment. Of course, during the speeches, I have no objection if they make reference to distress conditions wherever there are. That will bring greater discipline behind him and also it will be helpful for discussion in the House.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್ ಅವರು (ಟಿ. ನರಸೀಪುರ)—ಸ್ವಾಮಿ, ಈಗತಾನೆ ನಮ್ಮ ಪಕ್ಷದ ಅಧ್ಯಕ್ಷರು ಅಪ್ಪಣೆ ಕೊಡಿಸಿರುವ ಪ್ರಕಾರ, ನಾನೀಗಾಗಲೇ ನೂಚಿಸಿರತಕ್ಕ ತಿದ್ದುಪಡಿ ನೂಚನೆಯನ್ನು ನಾನು ಸಭೆಯ ಮುಂದೆ ಮಂಡಿಸುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವು ವಿಷಯಗಳನ್ನು ಮಾತ್ರ ಈಗ ಸಭೆಯ ಮುಂದಿಡಲು ನಾನು ತಮ್ಮ ಅಪ್ಪಣೆ ಬೇಡುತ್ತೇನೆ.

ಶ್ರೀಮನ್ಮಹಾರಾಜರವರು ಈ ಸಭೆಯ ಸದಸ್ಯರುಗಳನ್ನುದ್ದೇಶಿಸಿ ಅಪ್ಪಣೆಕೊಡಿಸಿರತಕ್ಕ ಭಾಷಣದ ವಿಷಯವಾಗಿ ಈಗಾಗಲೇ ನಮ್ಮ ನಾಯಕರು ನಮ್ಮ ಪಕ್ಷದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮೊಟ್ಟಮೊದಲನೆಯದಾಗಿ ಚುನಾವಣೆಗಳ ವಿಷಯವನ್ನು ಪ್ರಸ್ತಾಪಿಸುತ್ತಾ, "ಮೈಸೂರು ಸಂಸ್ಥಾನದಲ್ಲೂ, ಭಾರತದ ಇತರ ಪ್ರದೇಶಗಳಲ್ಲೂ ಭಾರತದ ಸಂವಿಧಾನದ ನಿಯಮಗಳ ಮೇರೆಗೆ ಸಾರ್ವತ್ರಿಕ ಚುನಾವಣೆಗಳು ನಡೆದುವು. ಆ ಚುನಾವಣೆಗಳ ಮಹತ್ತರ ಪ್ರಮಾಣವೂ, ಪ್ರಾಧಾನ್ಯವೂ, ಪ್ರಪಂಚದ ಇತರ ಸಮಸ್ತ ದೇಶಗಳವರ ಮನಸ್ಸನ್ನೂ, ಆಕರ್ಷಿಸಿ ಅವರು ಅವುಗಳನ್ನು ತೀಕ್ಷ್ಣಾಸಕ್ತಿಯಿಂದ ಗಮನವಿಟ್ಟು ಪರಿಶೀಲಿಸುವಂತೆ ಮಾಡಿದವು" ಎಂದು ತಿಳಿಸಿದ್ದಾರೆ. ಈ ಸಂಬಂಧವಾಗಿ ಮೊನ್ನೆ ನಡೆದ ಚುನಾವಣೆಗಳ ಕಾಲದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಎದುರಾಳುಗಳಾಗಿ ನಿಂತು ಹೋರಾಡಿದವರು ಪಟ್ಟ ಕಷ್ಟ ನಷ್ಟಗಳ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕೆಂಬ ಬಯಕೆ ನನಗಿದೆ. ಆದರೆ ಆಗ ಏನೇನು ಅನ್ಯಾಯಗಳು ನಡೆದವು, ಏನೇನು ತೊಂದರೆಗಳುಂಟಾದುವು ಎನ್ನುವ ಬಗ್ಗೆ ಎಲ್ಲವನ್ನೂ ಸಾಂಗೋಪಾಂಗವಾಗಿ ಹೇಳಲಿಚ್ಛಿಸುವುದಿಲ್ಲ. ಆದರೂ ವಿವರಗಳು ಬೇಕೆಂದು ಕೇಳುವ ಪಕ್ಷಕ್ಕೆ ಏನನ್ನು ಬೇಕಾದರೂ ಉದಾಹರಣೆ ಸಮೇತ ತಿಳಿಸಬಲ್ಲೆ.

ಮತ್ತೊಂದು ಕಡೆ ವಿಧಾನಮಂಡಲದಲ್ಲಿಯ ಸದಸ್ಯರುಗಳೆಲ್ಲರೂ ಪರಸ್ಪರ ಸೌಹಾರ್ದ, ಅನ್ಯೋನ್ಯತೆಗಳಿಂದ ಕೂಡಿ, ಒಂದು ಸಹಕಾರ ಮನೋಭಾವದಿಂದ ಕೆಲಸಮಾಡಬೇಕೆಂದು ಹೇಳಿದ್ದಾರೆ. ನಿಜ, ಆದರೆ ಅಂಥ ಒಂದು ಸಹಕಾರ ಮನೋಭಾವ ಉಂಟಾಗುವಂತೆ ಮಾಡುವುದು ನಮ್ಮೆಲ್ಲರ ಆದ್ಯಕರ್ತವ್ಯ. ಈಗ ತಾವೇನು ಒಂದು ಸಹಕಾರಮನೋಭಾವವನ್ನು ತೋರಿಸಬೇಕೆಂದು ಹೇಳಿದ್ದೀರೋ, ಅದೇ ರೀತಿಯಲ್ಲಿ ಮುಂದೆ ಒಟಿನ ಚುನಾವಣೆಗಳು ಬಂದಾಗ, ಅವುಗಳು ನಿಯಮಕ್ಕನುಸಾರವಾಗಿ ನಡೆಯುವಂಥ ಒಂದು ಅವಕಾಶವಿರಲಿ ಎಂಬ ಒಂದು ಉದಾರ ಮನೋಭಾವನೆಯಿಂದಲೇ ನಾನು ಕೆಲವು ಅಂಶಗಳನ್ನು ಈ ಸಭೆಯ ಮುಂದಿಡಲು ಅಪೇಕ್ಷಿಸುತ್ತೇನೆ. ಕಳೆದು ಹೋದ ಚುನಾವಣೆಗಳು ನಡೆದ ಕಾಲದಲ್ಲಿ ಸರ್ಕಾರದವರ ಹತೋಟಿಯಲ್ಲಿದ್ದ ಅಧಿಕಾರಿಗಳೂ ಮತ್ತು ವಿವಿಧೋದ್ದೇಶ ಸಹಕಾರ ಸಂಘಗಳೂ ಕಾಂಗ್ರೆಸ್ ಪಕ್ಷದ ಬೆಂಬಲಕ್ಕೆ ನಿಂತು, ಆ ಚುನಾವಣೆಗಳಲ್ಲಿ ಭಾಗವಹಿಸಿ ಕೆಲಸಮಾಡಿದವು. ಆದರೆ ನಿನ್ನೆಯ ದಿವಸ ನಮ್ಮ ಪಕ್ಷದ ಸದಸ್ಯರು ಕೆಲವರು ಭಾಷಣಮಾಡುತ್ತಿದ್ದ ಕಾಲದಲ್ಲಿ ಎದುರು ಪಾರ್ಟಿಯಲ್ಲಿರತಕ್ಕ ಕೆಲವು ಮಾನ್ಯ ಸದಸ್ಯರು ಅದಕ್ಕೆ ಉದಾಹರಣೆಗಳೇನಾದರೂ ಇದ್ದರೆ ಕೊಡಿ ಎಂಬ ಒಂದು ಕೂಗನ್ನೇ ಎಬ್ಬಿಸಿದರು. ಅಧ್ಯಕ್ಷರು ನನಗೆ ಅಪ್ಪಣೆ ಕೊಡುವುದಾದರೆ ನಾನು ಅಂಕಿ ಅಂಶಗಳ ಬಗ್ಗೆ ಸಾಕಷ್ಟು ದಾಖಲಾತಿಗಳ ಮುಖೇನ ಹಾಗೆ ನಡೆದಿರುವ ನಿದರ್ಶನಗಳನ್ನು ಹೇಳಬಲ್ಲೆನು. ಅಂಥಾದ್ದಕ್ಕೆಲ್ಲಾ ಬೇಕಾದಷ್ಟು ನಿದರ್ಶನಗಳಿವೆ. ಆ ಬಗ್ಗೆ ದಾಖಲೆಗಳೂ ಇವೆ. ಉದಾಹರಣೆಗಾಗಿ ಒಂದು ಅಂಶವನ್ನು ಸೂಚನೆಮಾಡಬೇಕೆಂದರೆ—ಎದುರು ಪಾರ್ಟಿಯ ನಾಯಕರಾದ ಶ್ರೀಯುತ ಕೆ. ಹನುಮಂತಯ್ಯನವರು ಚುನಾವಣೆಯ ಬಗ್ಗೆ ಅವರು ಮಾಡಿಕೊಂಡಿದ್ದ ಒಂದು ಅಡ್ಜಸ್ಟ್‌ಮೆಂಟ್ ಸಮಿತಿಯವರೊಡನೆ ಪ್ರವಾಸ ಬಂದಿದ್ದವರೆಲ್ಲಿಯಲ್ಲಿ ಹೇಗೆ ಈ ಬಿರ್ಲಾ ಮತ್ತು ತಾಲ್ಲೂಕು ವಿವಿಧೋದ್ದೇಶ ಸಹಕಾರ ಸಂಘಗಳು ಏಕಾ ಏಕಿ ತಾಲ್ಲೂಕಾಮಳೆ ಕಾಂಗ್ರೆಸ್ ಪ್ರಚಾರದಲ್ಲಿ ಪ್ರವೇಶಿಸಿದ್ದವೆಂಬುದು ಅವರಿಗೆ ಗೊತ್ತಾಗಿದೆ. ಹೀಗೆ ರಾಜಕೀಯದಲ್ಲಿ ತಗ್ಗುದಿಬ್ಬಗಳಿರಬಾರದು. ಇದಕ್ಕಾಗಿ ನನ್ನ ದೊಂದು ಸಲಹೆ ಏನೆಂದರೆ: ಆ ರೀತಿ ಚುನಾವಣೆಗಳು ನಡೆಯತಕ್ಕ ಕಾಲದಲ್ಲಿ, ಚುನಾವಣೆಗೆ ನಿಲ್ಲತಕ್ಕ ಪಕ್ಷ ಅದು ಯಾವ ಪಕ್ಷವೇ ಆಗಿರಲಿ, ಅಥವಾ ಆ ಸದಸ್ಯರು ಯಾವ ಪಕ್ಷಕ್ಕೇ ಸೇರಿರಲಿ, ಅವರಿಗೆ ಆ ಬಗ್ಗೆ ಒಂದು ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಓಟುದಾರರ ಮೇಲಾಗಲೀ ಅಥವಾ ಉಮೇದುವಾರರ ಮೇಲಾಗಲೀ ಸರ್ಕಾರದ ಒತ್ತಡವೇನೂ ಇರಬಾರದು ಎಂಬುದು ನನ್ನ ಅಭಿಪ್ರಾಯ. ನನ್ನನ್ನೆ ಚುನಾವಣೆಮಾಡಿದ ಸ್ಥಾನದಲ್ಲಿ ಕೆಲವು ಅಕ್ರಮಗಳನ್ನು ನಡೆಸಿದ್ದವರ ಮೇಲೆ ದೂರನ್ನು ಕೊಡಲಾಗಿತ್ತು. ನಾನು ಈ ವಿಷಯವನ್ನು ಉದಾಹರಣೆಗಾಗಿ ಹೇಳುತ್ತಿಲ್ಲ, ಆದರೆ

(ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್).

ಆದು ಯಾವ ರೀತಿ ವಿಚಾರಣೆಯಾಯಿತು ಆ ಬಗ್ಗೆ ಏನು ತೀರ್ಮಾನವಾಯಿತು ಎಂಬ ಬಗ್ಗೆ ಈ ವರೆಗೂ ನನಗೆ ಏನೂ ತಿಳಿಯಲಿಲ್ಲ. ಹೀಗೆ ತಾವು ನನಗೆ ಆ ತೀರ್ಮಾನವನ್ನು ತಿಳಿಸಲೇಬೇಕೆಂದು ನಾನೇನೂ ತಮ್ಮನ್ನು ಒತ್ತಾಯಪಡಿಸಬೇಕೆಂಬ ಇರಾದೆಯುಳ್ಳವನಾಗಿ ಇದನ್ನು ತಿಳಿಸುತ್ತಿಲ್ಲ. ಇಂದು ನಮ್ಮ ಪಕ್ಷದಲ್ಲಿ ಸದಸ್ಯರ ಸಂಖ್ಯಾಬಲ ಕಡಮೆ, ಎದುರು ಪಕ್ಷ ಬಹು ಮತವುಳ್ಳದ್ದು. ಆದರೆ ತಾವು ನಮಗೆ ಇಷ್ಟು ಮಾತ್ರವಾದರೂ ಒಂದು ಭರವಸೆ ಕೊಡಬೇಕು. ಏನೆಂದರೆ ಕೇವಲ ಬಹುಮತವನ್ನುಳ್ಳ ಪಕ್ಷದ ಸದಸ್ಯರ ಅಭಿಪ್ರಾಯಗಳಿಗೇ ಸಂಖ್ಯಾಬಲದ ಮೇರೆ ಬೆಲೆಯನ್ನು ಕೊಡದೆ ಸಂಖ್ಯಾಬಲ ಕಡಮೆ ಇರತಕ್ಕ ಪಕ್ಷದ ಸದ್ಯರುಗಳ ಅಭಿಪ್ರಾಯಕ್ಕೂ ತಾವು ಮನ್ನಣೆಕೊಡಬೇಕೆಂಬುದೇ ಆ ಭರವಸೆ. ಇಲ್ಲ ನಾವು ಈ ದಿವಸ ಬಂದು ಕುಳಿತು ಮಾತನಾಡುತ್ತಿರುವುದು 20 ಲಕ್ಷ ಪ್ರಜೆಗಳ ಪರವಾಗಿ. ನಾವು 90 ಲಕ್ಷ ಪ್ರಜೆಗಳುಳ್ಳ ದೇಶದಲ್ಲಿ 20 ಲಕ್ಷ ಪ್ರಜೆಗಳ ಬೆಂಬಲ ಪಡೆದು ಬಂದಿರತಕ್ಕ ಸದಸ್ಯರುಗಳಾಗಿದ್ದೇವೆ. ಇಂಥಾ ಸದಸ್ಯರು ಸೂಚಿಸತಕ್ಕ ವಿಷಯಗಳಲ್ಲೂ ಸಂಪೂರ್ಣ ಮಹತ್ವವಿರುತ್ತದೆಂಬ ಅಂಶವನ್ನು ತಾವು ಮನಗಂಡು, ಅದನ್ನು ತಮ್ಮ ಗಮನಕ್ಕೆ ತೆಗೆದು ಕೊಂಡು, ವಿರೋಧ ಪಕ್ಷಗಳ ಮಾತಿಗೆ ಬೆಲೆಯನ್ನು ತಾವು ಕೊಡುವ ಪಕ್ಷಕ್ಕೆ, ಅವರ ಅಭಿಪ್ರಾಯಗಳಿಗೆ ತಾವು ಒಂದು ಪ್ರಾಧಾನ್ಯತೆ ಕೊಡುವ ಭಾಗಕ್ಕೆ ಸಾಮರಸ್ಯಗಳೂ, ಸೌಹಾರ್ದ ಭಾವನೆಗಳೂ, ಸಂಯಮಶೀಲತೆಗಳೂ, ಅನ್ಯೋನ್ಯಭಾವಗಳೂ ಉಂಟಾಗುವುದರಲ್ಲಿ ಸಂದೇಹವೂ ಇಲ್ಲ ಮತ್ತು ಹೀಗೆ ನಡೆದರೆದೇಶಕ್ಕೆ ಇಂಥಾ ಸಭೆಗಳಿಂದ ಯಾವ ಅನಾನುಕೂಲವೂ ಆಗುವುದಿಲ್ಲವೆಂದು ನನ್ನ ಭಾವನೆ. ಇನ್ನು ಮುಂದಕ್ಕಾದರೂ ಚುನಾವಣೆಗಳು ನಡೆಯುವ ಕಾಲಕ್ಕೆ ಹಿಂದಿನಂತೆ ಆಗದಿರಲೆಂಬುದೇ ನನ್ನ ಆಶಯ.

ಮತ್ತೊಂದು ವಿಷಯವೇನೆಂದರೆ, ಶ್ರೀಮನ್ಮಹಾರಾಜರವರು ಸಂಸ್ಥಾನದ ಆದಾಯ ವೆಚ್ಚಗಳ ಬಗ್ಗೆ ಕೆಲವು ಅಂಶಗಳನ್ನು ಸೂಚಿಸಿದ್ದಾರೆ. ಆದರೆ ಮೊನ್ನೆ ಪ್ರಶ್ನೋತ್ತರಗಳ ಕಾಲದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರು ಮಂತ್ರಿಮಂಡಲವನ್ನು ಹೆಚ್ಚುಮಾಡಬೇಕೆಂಬ ವಿಚಾರ ಬಂದಾಗ ಆದೂ ಕೂಡ ಪರ್ಯಾಲೋಚನೆಯಲ್ಲಿದೆಯೆಂದು ಹೇಳಿದರು. ಆದರೆ ಇಂಥ ಬೋತಾ ಬಡ್ಜೆಟ್ ಇರತಕ್ಕ ಕಾಲದಲ್ಲೂ ಹಾಗೆ ಹೆಚ್ಚು ಮಂತ್ರಿಗಳ ನೇಮಕದ ಅಗತ್ಯ, ಅವಶ್ಯಕತೆ ಇದೆಯೇ ! ಹೀಗೆ ಖರ್ಚನ್ನು ಹೆಚ್ಚಿಸುತ್ತಾ ಹೋಗುವುದು, ಅದರಲ್ಲೂ ವೆಚ್ಚಕ್ಕೆ ಸಾಕಷ್ಟು ಉತ್ಪತ್ತಿ ಇಲ್ಲದಿರುವಾಗ, ಚೆನ್ನಾಗಿಲ್ಲ ಮತ್ತು ಇದರಿಂದ ದೇಶ ಮುಂದುವರಿಯರಾರದೆಂದು ನನ್ನ ಭಾವನೆ.

ಇನ್ನು ಮೂರನೆಯದಾಗಿ ಆಹಾರ ಹತೋಟಿ ವಿಷಯ. ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಇದರ ಪರವಾಗಿ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದುದರಿಂದ ನಾನು ಅವರೆಲ್ಲರೂ ಹೇಳಿರತಕ್ಕದ್ದನ್ನೇ ಪುನಃ ಹೇಳಿದರೆ ಸಭೆಗೆ ಅದರಿಂದ ಬೇಸರವುಂಟಾಗಬಹುದು. ಆದರೆ ನಾನು ಒಂದೆರಡು ಹೊಸ ವಿಚಾರಗಳನ್ನು ಮಾತ್ರ ತಿಳಿಸಲಿಚ್ಛಿಸುತ್ತೇನೆ. ಈ ಆಹಾರ ನಿಯಂತ್ರಣ ಆಜ್ಞೆಗಳು ಜಾರಿಗೆ ಬಂದ ಮೇಲೆ ರೈತರು ಎಷ್ಟು ದವಸ ಧಾನ್ಯಗಳನ್ನು ಬೆಳೆಯುತ್ತಿದ್ದಾರೆಯೋ ಅಷ್ಟೇ ಪ್ರಮಾಣದಲ್ಲಿ ದವಸ ಧಾನ್ಯಗಳನ್ನು ಅವರು ಈ ಹತೋಟಿಗಳಿಲ್ಲದ ಕಾಲದಲ್ಲೂ ಬೆಳೆಯುತ್ತಲೇ ಇದ್ದರು. ಅಂದ ಮೇಲೆ ಹಿಂದೆ ಬಾರದಿದ್ದಂಥ ಆಹಾರಾಭಾವವು ಇಂದು ತಲೆದೋರಲು ಕಾರಣವೇನೆಂದು ತಾವು ಕೇಳಬಹುದು. ಹಾಗೆ ಆಗುವುದಕ್ಕೆ ಕಾರಣವಿದೆ. ಅದೇನೆಂದರೆ—ರೈತನು ಬೆಳೆದಂಥ ದವಸ ಧಾನ್ಯಗಳನ್ನು ಸರ್ಕಾರದವರು ವಶಪಡಿಸಿಕೊಂಡು ಅದನ್ನು ಇತರರಿಗೆ ಹಂಚುತ್ತಿರುವ ರೀತಿ ನೀತಿಯಲ್ಲಿ ದೋಷವಿರುವುದರಿಂದ ನಮಗೆರ್ಪಟ್ಟ ಈ ತೊಂದರೆಗಳುಂಟಾಗಿವೆ. ಈಗೇನೋ ಆಹಾರ ಧಾನ್ಯಗಳ ಸಾಗಾಣಿಕೆಯ ಆಜ್ಞೆಯನ್ನು ನಡಿಲುಮಾಡಿದ್ದೀರಿ. ಅದಾಗ್ಯೂ ಇದರಲ್ಲಿ ಇನ್ನೂ ಅನೇಕ ತೊಂದರೆಗಳು ಇದ್ದೇ ಇವೆ. ಆ ಕಾನೂನನ್ನು ನಾನು ಓದಿನೋಡಿದ್ದೇನೆ. ಯಾವ ಮನುಷ್ಯನೇ ಆಗಲಿ ಆತನ ಸ್ವಂತ ಉಪಯೋಗಕ್ಕೆ ಎಷ್ಟು ಬೇಕೋ ಅಷ್ಟನ್ನು ಅವನು ಸಾಗಿಸಿಕೊಂಡು ಹೋಗಬಹುದೆಂದು ಅದರಲ್ಲಿ ತಿಳಿಸಲಾಗಿದೆ. ಆದರೆ ಈ ಹತೋಟಿ ಆಜ್ಞೆಗಳನ್ನೆರ್ಪಟ್ಟ ಎಷ್ಟು ಬೇಗ ತೆಗೆದುಹಾಕಿದರೆ ಸರ್ಕಾರಕ್ಕೆ ಅಷ್ಟು ಒಳ್ಳೆಯ ಹೆಸರು ಬರುತ್ತದೆ. ಆದ್ದರಿಂದ ಇದನ್ನೆರ್ಪಟ್ಟ ತಾವು ಬೇಗ ಸರಿಪಡಿಸಬೇಕು. ಆದರೆ ಇದರ ಬಗ್ಗೆ ಹೆಚ್ಚು ವಿವರಗಳನ್ನು ಪ್ರಸ್ತಾಪಿಸಲು ಈಗ ಕಾರಣವಕಾಶವಿಲ್ಲ. ಮುಂದೆ ಬಾಕಿ ವಿಚಾರಗಳನ್ನು ತಿಳಿಸುತ್ತೇನೆ. ಆದರೆ ಒಂದು ಅಂಶವನ್ನು ಮಾತ್ರ ನಾನು ಈಗ ಸ್ಪಷ್ಟಪಡಿಸಬೇಕಾಗಿದೆ. ಈ ಹತೋಟಿ ಆಜ್ಞೆಗಳನ್ನು ಕೇವಲ ಗ್ರಾಮಾಂತರ ಪ್ರದೇಶಗಳಲ್ಲಿ ತೆಗೆದು, ಬಾಕಿ ಪಟ್ಟಣಗಳಿಗೆ ಮಾತ್ರ ಇದನ್ನು ಅನ್ವಯಿಸುವಂತೆ ಇಟ್ಟುಕೊಂಡರೆ ಅದರಿಂದ ಅನುಕೂಲವಾಗುತ್ತದೆಂದು ತಾವು ಭಾವಿಸಿದ್ದೀರಿ. ಆದರೆ ಎಂದಿನ ತನಕ ತಾವು ಈ ಕಂಟ್ರೋಲನ್ನು ಜಾರಿಯಲ್ಲಿಟ್ಟಿರುತ್ತೀರೋ ಅಂದಿನ ತನಕವೂ ಅಭಯವಿದ್ದೇ ಇರುತ್ತೆ. ಇದರಿಂದ ದೇಶಕ್ಕೆ ಆಗುವ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗಿರುತ್ತೆ. ಆದುದರಿಂದ ಈಗ ಸಾಗಾಣಿಕೆಯ ಹತೋಟಿಯನ್ನು ನಡಿಲುಮಾಡಿರುವುದಕ್ಕೆ ಬದಲಾಗಿ ಈ ಹತೋಟಿ ಆಜ್ಞೆಗಳನ್ನೇ ತೆಗೆದುಹಾಕಿದರೆ ಇದರಿಂದ ಯಾರಿಗೂ ಏನೂ ತೊಂದರೆಯಾಗುವುದಿಲ್ಲ. ಆದರೆ ಬೆಳೆಯಾಗತಕ್ಕ ಮತ್ತು ಹೆಚ್ಚು ಬೆಳೆಯಬೇಕೆಂದು ಹೇಳತಕ್ಕ ನೀತಿಯಲ್ಲಿ ಬಹಳ ದೋಷವಿರುತ್ತದೆ. ಇದಕ್ಕೆ ಒಂದರ್ಪಟ್ಟ ಎರಡರ್ಪಟ್ಟ ಎಷ್ಟು ಬೇಕಾದರೂ ನಿದರ್ಶನಗಳಿವೆ. ನಿನ್ನೆ ತಾನೆ ನನ್ನ ಕಚೇರಿಯಿಂದ ನನಗೊಂದು ತಂತಿ ಬಂದಿದೆ. ಆದರಲ್ಲಿ ಏನು ತಿಳಿಸಿದ್ದಾರೆಂದರೆ—ಈಗ ರೈತರು ಬತ್ತನೆಗಾಗಿ ಬೀಜದ ಭತ್ತವನ್ನು ಕೊಡಬೇಕೆಂದು ಕೇಳಿದರೆ, ಅಲ್ಲಿ ವ್ಯವಸಾಯದ ಇರಾಖೆಯವರು, ಪರ್ಪಟ್ಟ ಒಂದಕ್ಕೆ (ಎಂದರೆ ಒಂದೂನೂರು ಸೇರಿಗೆ) 22 ರೂಪಾಯಿ ದರದಲ್ಲಿ ಕೊಂಡಿಟ್ಟಿರುವುದನ್ನು ಈಗ ಕೇಳಿದರೆ ಪರ್ಪಟ್ಟ ಒಂದಕ್ಕೆ $31\frac{1}{4}$ ರೂಪಾಯಿಗಳಾಗುತ್ತೆಂದು ಹೇಳುವುದರಲ್ಲಿ ಅರ್ಥವಿಲ್ಲ. ಹೀಗೆ ವ್ಯವಸಾಯದ ಇರಾಖೆಯವರೇ 22 ರೂ.ಗೆ ರೈತನಿಂದ ಕೊಂಡಿದ್ದನ್ನು, ಪುನಃ ಅದೇ ರೈತನಿಗೆ ಮಾರುವಾಗ $31\frac{1}{4}$ ರೂಪಾಯಿಗಳ ಬೆಲೆ ಕೊಡಬೇಕೆಂದು ಮಾಡಿ ಏತಕ್ಕಾಗಿ ಅಷ್ಟೊಂದು ಅವರು ಲಾಭ ಸಂಪಾದಿಸಬೇಕೆಂದಿದ್ದಾರೋ ಗೊತ್ತಾಗುವುದಿಲ್ಲ. ಡಿಸೆಂಬರ್ ತಿಂಗಳಲ್ಲಿ ಕೊಂಡಿದ್ದಾರೆ; ಜೂಲೈ ತಿಂಗಳಲ್ಲಿ ಮಾರಾಟಮಾಡಬೇಕಾದರೆ ಕೇವಲ 5—6 ತಿಂಗಳ ಕಾಲ ಶೇಖರಣೆ ಮಾಡಿಟ್ಟಿದ್ದಕ್ಕೆ ಇಷ್ಟೊಂದು ಬೆಲೆಯನ್ನು ಹೆಚ್ಚುಪಡಿಸಬೇಕೇ? ಹೀಗೆ ಅವರು ಮಾಡುತ್ತಿರುವುದರ ಅರ್ಥ ನನಗೊಂದೂ ಗೊತ್ತಾಗುತ್ತಿಲ್ಲ. ಹೀಗೆ ದುಬಾರಿ ರೇಟಿಗೆ ಮಾರಾಟ ಮಾಡತಕ್ಕದ್ದನ್ನು ಕೂಡ ರದ್ದುಪಡಿಸಬೇಕೆಂದು ಹೇಳುತ್ತೇನೆ. ಹೀಗೆ ಮಾಡುತ್ತಿರುವುದರಿಂದಲೇ ಅನೇಕ ಜಮೀನುಗಳು ಪಾಳು ಬಿದ್ದುಹೋಗಿ ಆಹಾರಧಾನ್ಯಗಳ ಬೆಳೆಯು ದಿನೇ ದಿನೇ ಕಡಿಮೆಯಾಗುತ್ತಿದೆ.

ಮತ್ತೊಂದು ವಿಷಯ, ಅನೇಕ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಾಲುವೆ ತೋಡಿಸಿ ಅನೇಕ ಕಡೆ ಸಹಾಯಮಾಡಿದ್ದಾರೆ. ಹಾಗೆ ಮಾಡುವಾಗ ನನ್ನ ಕ್ಷೇತ್ರದಲ್ಲಿ ತುರುವನೂರು ಹಲವಾರ ಬ್ಯಾಂಚಿನಲ್ಲಿ 6 ಸಾವಿರ ಎಕರೆ ಜಮೀನಿಗೆ ನೀರು ಒದಗಿಸದೆ ಬಂಜರು ಬಿಟ್ಟಿದ್ದಾರೆ. ಅದಕ್ಕೂ ಕೂಡ ನೀರಿನ ವಸತಿ ಮಾಡಿಕೊಟ್ಟರೆ ಹೆಚ್ಚು ಆಹಾರಧಾನ್ಯ ಬೆಳೆಯಲು ಅನುಕೂಲವಾಗುತ್ತದೆ. ಆದ್ದರಿಂದ ಅಂಥ ಸಂದರ್ಭಗಳನ್ನು ಕೂಡಲೆ ವಿಮರ್ಶೆಮಾಡಿ ತಕ್ಕ ಕಾರ್ಯಕ್ರಮ ಕೈಕೊಳ್ಳುವುದರಿಂದ ಆಹಾರದ ಅಭಾವ ಸಂಪೂರ್ಣವಾಗಿ ಹೋಗುವುದರಲ್ಲಿ ಯಾವ ವಿಧವಾದ ಅನುಮಾನವೂ ಇರುವುದಿಲ್ಲ.

ವಿದ್ಯಾಭ್ಯಾಸದ ಸುಧಾರಣೆ ವಿಷಯದಲ್ಲಿ ಶ್ರೀಮನ್ಮಹಾರಾಜರು ಕೆಲವು ಮಾತುಗಳನ್ನು ಮತ್ತು ಬುದ್ಧಿವಾದವನ್ನು ಹೇಳಿರುತ್ತಾರೆ. ಅವರು ವಿದ್ಯಾರ್ಥಿಗಳು ಜ್ಞಾನಾರ್ಜನೆಗಾಗಿ ಬಹಳವಾಗಿ ದುಡಿಯಬೇಕೆಂದು ಹೇಳಿದ್ದಾರೆ. ಆದರೆ ಹಾಗೆ ಮಾಡುವುದು ವಿದ್ಯಾರ್ಥಿಯೊಬ್ಬನ ಕರ್ತವ್ಯವಲ್ಲ, ಅವನ ಜೊತೆಗೆ ಉಪಾಧ್ಯಾಯರ ಕರ್ತವ್ಯವೂ ಸಹ ಇದೆ ; ಅದನ್ನು ನಿರ್ವಹಿಸುತ್ತಾರೆಯೇ ಎಂಬುದನ್ನು ನೋಡಬೇಕು. ಅವರ ಮಟ್ಟ, ಅಂತಸ್ತು ಯಾವ ರೀತಿಯಿದೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈ ದಿವಸ ಏನು ಸ್ಟ್ಯಾಂಡರ್ಡ್ ಇದೆ ಎಂಬುದು ನನಗೆ ಗೊತ್ತು. ಅದನ್ನು ಸ್ವಲ್ಪ ವಿಮರ್ಶೆಮಾಡಬೇಕು. ವಿಶ್ವವಿದ್ಯಾನಿಲಯದಲ್ಲಿ ಕೆಳದರ್ಜೆ ನೌಕರರನ್ನು ಮೇಲಕ್ಕೂ, ಮೇಲಿರುವವರನ್ನು ಕೆಳದರ್ಜೆಗೂ ಹಾಕುತ್ತಿರುವ ಸಂದರ್ಭಗಳು ಬಹಳ ಇವೆ. ಆ ಕಾರಣದಿಂದ ಒಂದು ಅಶಾಂತಿಯಿದೆ. ಆದ್ದರಿಂದ ವಿದ್ಯಾಭ್ಯಾಸದಲ್ಲಿ ಸ್ಟ್ಯಾಂಡರ್ಡ್ ಬಹಳ ಕಡಮೆಯಾಗಿದೆ ಮಂಡ್ಯ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ 120 ಹುಡುಗರು ಪರೀಕ್ಷೆಗೆ ಕುಳಿತಿದ್ದರಲ್ಲಿ ಕೇವಲ 12 ಜನರು ತೇರ್ಗಡೆಯಾಗಿದ್ದಾರೆ. ಹೀಗಾಗಿರುವುದು ಎಷ್ಟು ಶೋಚನೀಯವಾದ ಸಂಗತಿ ! ಇದಕ್ಕೆ ಕಾರಣ ಕೇವಲ ವಿದ್ಯಾರ್ಥಿ ಒಬ್ಬನೋ ಅಥವಾ ಅಧ್ಯಾಪಕವೃಂದವೂ ಸೇರಿದೆಯೋ! ಇಂಥ ವಿಷಯಕ್ಕೆ ಸರ್ಕಾರದವರು ಕೂಡಲೇ ಗಮನ ಕೊಟ್ಟು ಕೈಲಾದಮಟ್ಟಿಗೆ ಸರಿಪಡಿಸಬೇಕೆಂದು ಕೋರಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಅಧ್ಯಕ್ಷರು.—ತಿದ್ದುಪಡಿಗಳನ್ನು ಕಳುಹಿಸಿರುವವರಿಗೆ ಸ್ವಲ್ಪ ಪ್ರಿಫರೆನ್ಸ್ ಕೊಡುವುದು ಒಳ್ಳೆಯದೆಂದು ನನಗೆ ಕಾಣುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯವೇನು ?

Sri K. HANUMANTHAIYA.—No, Sir. When on behalf of the members of the party—united front party—their leader moves, the position as they concede is that it is not necessary for every member of that party to speak. On the other hand they will also profit by way of debate. As soon as the leader speaks, the other independent members or Government party members may be allowed to speak, every member of the party who has tabled an amendment being however given a chance, though that may not be necessary,

*ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—On a point of order, Sir. ತಿದ್ದುಪಡಿಗಳನ್ನು ಕೆಲವು ಸದಸ್ಯರು ಕಳುಹಿಸಿರುತ್ತಾರೆ. ಅದನ್ನು ಕಳುಹಿಸಿರುವ ಸದಸ್ಯರು ಅವುಗಳ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶಕೊಡದಿದ್ದರೆ ಅದು ನಿಬಂಧನೆಗಳಿಗನುಸಾರವಾಗಿರುವುದಿಲ್ಲ. ಆದ್ದರಿಂದ ಅವರಿಗೆ ಅವಕಾಶಕೊಟ್ಟು ಅವರು ಮಾತನಾಡಿದ ಮೇಲೆ ಬೇರೆಯವರಿಗೆ ಅವಕಾಶಕೊಡುವುದು ನ್ಯಾಯ.

Sri K. HANUMANTHAIYA.—Opportunities will be given.

Mr. SPEAKER.—Sri Shanker Linge Gowda may go on.

Sri Mulka GOVINDA REDDY.—You have not given any ruling, Sir.

Mr. SPEAKER.—That does not require any ruling.

Sri Mulka GOVINDA REDDY.—When the member wants to move his amendment.....

Mr. SPEAKER.—He will not move it.

Sri Mulka GOVINDA REDDY.—The member must say that he is not moving the amendment.

Mr. SPEAKER.—The leader of the party has made that statement on their behalf.

*ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಅಧ್ಯಕ್ಷರೇ, ತಿದ್ದುಪಡಿಗಳನ್ನು ಕಳುಹಿಸಿರುವವರೆಲ್ಲರೂ ಶ್ರೀಮನ್ಮಹಾರಾಜರವರ ಭಾಷಣದ ವಿಚಾರವಾಗಿ regret ಎಂಬ ಪದವನ್ನು ಉಪಯೋಗಿಸಿ ಭಾಷಣ ಮಾಡಿದ್ದಾರೆ.

> 'failure to mention the acute distress caused to the people, due to the increase in food prices.'

ಎಂದು ಒಂದು ತರದ ಅರ್ಥಬರುವಹಾಗೆ ಒಂದು ತಿದ್ದುಪಡಿಯಲ್ಲಿ ಸೂಚಿಸಿದ್ದಾರೆ. ಇನ್ನೊಂದು ತಿದ್ದುಪಡಿಯಲ್ಲಿ,

> "Makes no mention of the distress conditions still prevailing in certain parts of Mysore district."

ಎಂದು ಹೇಳಿದ್ದಾರೆ. ನಮ್ಮ ಸರ್ಕಾರದವರು ಹಾಗೆ ಮಾಡುತ್ತಾರೆ, ಹೀಗೆಮಾಡುತ್ತಾರೆ ಎಂದು ಹೇಳುತ್ತಾರೆ. ಈ ರೀತಿಯಾಗಿ ಇಂಥ ತಿದ್ದುಪಡಿಗಳನ್ನು ಕಾರಣವಿಲ್ಲದೆ ಕೊಟ್ಟು ಮಹಾರಾಜರು ಅದನ್ನು ಹೇಳಿಲ್ಲ. ಇದನ್ನು ಹೇಳಿಲ್ಲ ಎಂದು ಹೇಳುತ್ತಾ ಹೋದರೆ ಮಹಾರಾಜರು ನನ್ನಹಾಗೆ ಒಂದು ದೊಡ್ಡ ಪುಸ್ತಕವನ್ನು ಬರೆಯುವುದಕ್ಕೆ ಸಾಧ್ಯವೆ ?

Sri K. S. VASAN (Kolar Gold Fields).—In His Highness Address, mention is made about some distress conditions, But in the amendment, it is

(Sri K. S. VASAN).

put as 'famine conditions.' That is all the difference.

ಶ್ರೀ ಎಂ. ಶಂಕರಲಿಂಗೇಗೌಡರು.—ತಿಮ್ಮಪಡಿಯು ಚೆನ್ನಾಗಿದ್ದರೆ ನಾನೇಕೆ ಹಾಗೆ ಹೇಳುತ್ತಿದ್ದೆ. ಎಲ್ಲರೂ failure to mention ಎಂದು ಹೇಳುತ್ತಾರೆ. ಕಾಂಗ್ರೆಸೇತರ ಪಕ್ಷದ ನಾಯಕರು ಇರಿಗೇಷ್ಷ್, ಕೈಗಾರಿಕೆಗಳು, ವ್ಯವಸಾಯ, 'ಪೆಡ್ಯೂರ್ಡ್' ಪಂಗಡಗಳಿಗೆ ಸಂಬಂಧಪಟ್ಟ ಸಮಸ್ಯೆಗಳು—ಇವೇ ಮುಂತಾದ ದೇಶಾಭಿವೃದ್ಧಿ ಸಾಧನೆಗೆ ಸಂಬಂಧಪಟ್ಟ ವಿಚಾರಗಳಲ್ಲಿ ಶ್ರೀಮನ್ಮಹಾರಾಜರ ಸರ್ಕಾರ ಏನೂ ಮಾಡಿಲ್ಲವೆಂದು ಹೇಳುತ್ತಾರೆ. ಈಗ ಹಿಂದಿನ ಸರ್ಕಾರ ಹೋಯಿತು. ಈಗ ಮುಂದೇನು ಮಾಡಬೇಕೆಂದು ನೋಡಿ ತಾನೆ ಹೊಸ ಸರ್ಕಾರ ಮಾಡುವುದು! ಈಗಿನ ಸರ್ಕಾರ ಏನೇನು ಮಾಡಿದ್ದಾರೆಂದು ಕೇಳಿದರೆ; ಬಡ್ಜೆಟ್ ಮಂಡಿಸುವಾಗ ಇನ್ನು ಮುಂದೆ ಮಾಡುವುದನ್ನು ಹೇಳುತ್ತಾರೆ. ಮಹಾರಾಜರು ಹೇಳುವಷ್ಟು ಹೇಳುತ್ತಾರೆ. ಅದಕ್ಕಿಂತ ಜಾಸ್ತಿಯಾಗಿ ಹೇಳರಾರರು. ಮಹಾರಾಜರು ತಿಳಿಸಿದ ಹಾಗೆ ಸರ್ಕಾರದವರು ಮಾಡುತ್ತಾರೆ. ಸದಸ್ಯರು ಕೇಳುವುದೆಲ್ಲಾ ಹೇಳುವುದಕ್ಕೆ ಇದು ಹಣಕಾಸಿಗೆ ಸಂಬಂಧಪಟ್ಟ ಭಾಷಣವೇನು? ಈ ದಿವಸದವರೆಗೆ ಹಿಂದಿದ್ದ ಹಣದಲ್ಲಿ ಕೈಗಾರಿಕೆಗಳಿಗಾಗಿ 5 ಕೋಟಿ ರೂಪಾಯಿಗಳವರೆಗೆ ಖರ್ಚಾಗಿದೆ. ವಿದ್ಯಾಭ್ಯಾಸಕ್ಕಾಗಿ 130 ಲಕ್ಷ ರೂಪಾಯಿಗಳು ಖರ್ಚಾಗುತ್ತಿದ್ದುದನ್ನು ಹೆಚ್ಚುಮಾಡಿದ್ದಾರೆ. ವೈದ್ಯಕ್ಕಿ, ಮುಂತಾದ ಸೌಕರ್ಯಗಳಿಗಾಗಿ ಬೇಕಾದಷ್ಟು ಖರ್ಚಾಗಿದೆ. ಇನ್ನೆಷ್ಟು ಮಾಡುವುದಕ್ಕೆ ಸಾಧ್ಯ! ಇರಿಗೇಷ್ಷ್‌ಗೆ ಖರ್ಚುಮಾಡಿರುವುದು ಸಾಲದು, ಕೆರೆ ಕಟ್ಟಿಸಿಲ್ಲ ಎಂದು ಇನ್ನೂ ಹೆಚ್ಚಾಗಿ ಆಗಬೇಕಾದ್ದನ್ನು ಹೇಳಿದರೆ ಮಾಡುತ್ತಾರೆ. ಈಗಾಗಲೇ ಎಷ್ಟೋ ಉಪಕಾರ ಮಾಡಿದ್ದಾರೆ. ಇರಿಗೇಷ್ಷ್ ಕೆಲಸ ಸಾಲದೆಂದು ಸದಸ್ಯರು ಹೇಳುವುದನ್ನು ನಾನು ಟೀಕೆ ಮಾಡಬಲ್ಲೆ. ಇಲ್ಲದಿರುವುದನ್ನು ಹೇಳಿ ಟೀಕಿಸುವುದು ಸರಿಯಲ್ಲ. ಮಹಾರಾಜರ ಭಾಷಣದಲ್ಲಿ ಅಸಮಾಧಾನ ಕೋರಿಸುವುದು ಉಚಿತವಲ್ಲ. ರಾಜಪ್ರಮುಖರು ಇನ್ನೇನು ಹೇಳುತ್ತಾರೆ? ಮುಖ್ಯವಾಗಿ 5 ವಿಷಯಗಳನ್ನು ತಿಳಿಸಿದ್ದಾರೆ. ಇವನ್ನೆಲ್ಲದೆ ಎಲ್ಲಾ ಹೇಳಬೇಕೆಂದರೆ ಒಂದು ದೊಡ್ಡ ಪುಸ್ತಕವನ್ನೇ ಬರೆಯಬೇಕಾಗುತ್ತದೆ. ಹಾಗೆ ಬರೆದರೆ ಅದನ್ನು ಓದುವುದಕ್ಕೆ ಸಾಧ್ಯವೆ? ಹಾಗೆ ಬರೆದಿದ್ದೇ ಆದರೆ 11ರಿಂದ 5 ಗಂಟೆಯವರೆಗೆ ಓದಬೇಕು. ಅದು ಹಾಗಾಗಬಾರದು. ತಿದ್ದುಪಡಿ ಕಳುಹಿಸುವವರಿಗೆ ಬಹಳ ಬುದ್ಧಿಯಿರಬೇಕು. ಮೈಸೂರು ದೇಶ ದೈವವೃಷ್ಟಿಯಲ್ಲಿ ಬಹಳ ಉನ್ನತಮಟ್ಟದಲ್ಲಿದೆ. 9 ಲಕ್ಷ ಪ್ರಜೆಗಳು artificially protected area ದಲ್ಲಿದ್ದಾರೆ. protected area ಎನ್ನುವುದು ಮನುಷ್ಯ ಸೃಷ್ಟಿ. 8 ಲಕ್ಷ ಜನರು ಬಹಳ ಸುಖವಾಗಿ ಶಾಂತಿಯಿಂದ ಜೀವನ ಮಾಡುತ್ತಿದ್ದಾರೆ. ಅರವತ್ತು ಲಕ್ಷ ಜನರು ವ್ಯವಸಾಯ ಮಾಡಿಕೊಂಡು ಹತ್ತು ವರ್ಷಗಳಿಗೊಂದು ಸಲ ಕ್ಷಾಮ ಬರುವ ಕಡೆ ಇದ್ದಾರೆ. Artificially protected area ಅಂದರೆ ಕೆರೆ, ಜೀವನದಿಗಳಿಗೆ ಕಟ್ಟೆಹಾಕಿರುವ ಕಡೆ—ಇಂಥ ಪ್ರದೇಶಗಳಲ್ಲಿರುವವರನ್ನು ಬಿಟ್ಟರೆ ಮಿಕ್ಕವರು ಕ್ಷಾಮಪ್ರದೇಶದಲ್ಲಿದ್ದಾರೆ. ಕೋಲಾರ, ಚಿತ್ರದುರ್ಗ, ನಾಗಮಂಗಲ ಇವೆಲ್ಲಾ ಸೇರಿ 60 ಲಕ್ಷ ಜನರಿದ್ದಾರೆ. They are living in a place extremely liable to famine. ಅದಕ್ಕಾಗಿ ಅಲ್ಲಿ ಕೆರೆ ಕಟ್ಟಬೇಕೆಂದು ಒಂದು ಪಟ್ಟಿ ಮಾಡಿದ್ದೇನೆ. ಎಷ್ಟು ಕೆರೆಗಳು ಎಲ್ಲೆಲ್ಲವೆ ಎಂದು ಪ್ರಶ್ನೆಗಳು ಅನೇಕ ಬಂದಿವೆ. ಅವುಗಳಿಗೆ ಉತ್ತರ ಹೇಳಿದಾಗ ವಿಚಾರ ಗೊತ್ತಾಗುತ್ತದೆ. ಮಹಾರಾಜರು ಬಡ್ಜೆಟ್ಟನಲ್ಲಿ ಸೇರಿರುವುದೆಲ್ಲ ವನ್ನೂ ಭಾಷಣದಲ್ಲಿ ಹೇಳುವುದಕ್ಕೆ ಸಾಧ್ಯವೇನು? ಮಹಾರಾಜರ ಭಾಷಣಕ್ಕೆ ಅಸಮಾಧಾನ ಸೂಚಿಸಕೂಡದು ಎಂಬುದು ಒಂದೇ ನನ್ನ ಅಭಿಪ್ರಾಯ. ಪ್ರತಿಯೊಬ್ಬರಿಗೂ ತಮ್ಮ ತಮ್ಮ ತಾಲ್ಲೂಕಿನಲ್ಲಿ ಇರುವ ಕಷ್ಟ ನಷ್ಟಗಳನ್ನು ಹೇಳಿಕೊಳ್ಳುವುದಕ್ಕೆ ಹಕ್ಕು ಇದ್ದೇ ಇದೆ. ಆದರೆ 60 ಲಕ್ಷ ಜನರು ಮೈಸೂರು ಸೀಮೆಯ ಕ್ಷಾಮ ಪ್ರದೇಶದಲ್ಲಿ ವಾಸಮಾಡುವಾಗ ಮಹಾರಾಜರು ಅವರ ವಿಚಾರವನ್ನೆಲ್ಲಾ ಪ್ರತ್ಯೇಕವಾಗಿ ತಿಳಿದು ಸಂರಕ್ಷಣೆ ಮಾಡಲು ಸಾಧ್ಯವೆ! ಹಿಂದೆ ಧಾತು ಈಶ್ವರ ಸಂವತ್ಸರದಲ್ಲಿ ಕ್ಷಾಮ ಬಂದಿತ್ತು. ಈಗ ನಂದನ ಸಂವತ್ಸರದಲ್ಲಿ ಕ್ಷಾಮ ಬಂತು.

12 NOON

ದೇಶದಲ್ಲೆಲ್ಲಾ ಕ್ಷಾಮ ಆಗಿಹೋಯಿತು ಎಂದರೆ ಅದಕ್ಕೆ ಮಹಾಸ್ವಾಮಿಯವರು ಹೇಳತಕ್ಕದ್ದೇನು! ಮಹಾಸ್ವಾಮಿಯವರು ಹೇಳಿರುವುದರಲ್ಲಿ ಏನು ಅಸಮಾಧಾನಕರವಾದದ್ದು ಇದೆಯೋ ಏನೋ ಒಂದೂ ನನಗೆ ಕಾಣುವುದಿಲ್ಲ. ಹೀಗೆ ಮಹಾರಾಜರವರ ಸರ್ಕಾರ ಮಾಡಬೇಕಾಗಿತ್ತು, ಮಾಡುತ್ತಾ ಇಲ್ಲವರ್ಲಾ ಎಂದು ನಾವು ಕೇಳಬಹುದು. ಆದರೆ ಅದು ಬಡ್ಜೆಟ್ ಭಾಷಣವಾಯಿತು. ಮಹಾರಾಜರವರ ಭಾಷಣದಿಂದ ಅಸಮಾಧಾನವಾಗಿದೆ ಎಂಬ ತಿದ್ದುಪಡಿಯನ್ನು ನಮ್ಮ ಸ್ನೇಹಿತರು ತಂದಿದ್ದಾರೆ. ಅವರೇನೋ ಇಂಗ್ಲೆಂಡಿಗೆ ಹೋಗಿದ್ದರಂತೆ. ಅಲ್ಲೂ ಕೂಡ ಪಾರ್ಲಿಮೆಂಟಿನಲ್ಲಿ ಈ ರೀತಿ ತಿದ್ದುಪಡಿ ಬರುವುದಿಲ್ಲ. ಅವರ ತರವೇ ಬೇರೆ. ಇಲ್ಲಿ ಇರುವ ತಿದ್ದುಪಡಿ ಎಂಥಾದ್ದು! ಇಲ್ಲಿ ನೋಡಿ 'acute distress' ಎಂದು ಹೇಳುತ್ತಾರೆ. ಮಹಾಸ್ವಾಮಿಯವರು ಈ ವಿಷಯ ಹೇಳಿಲ್ಲವೇ! ಯಾವುದನ್ನೇ ಆಗಲೀ ರಚನಾತ್ಮಕ ದೃಷ್ಟಿಯಿಂದ ಸಲಹೆ ಕೊಡಬೇಕಾದದ್ದು ನಮ್ಮ ಧರ್ಮ. ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಟ್ಟಿಲ್ಲ ಎಂದು ಹೇಳುತ್ತಾರೆ. 130 ಲಕ್ಷ ರೂಪಾಯಿ ಇದ್ದದ್ದನ್ನು 1951-52ರಲ್ಲಿ 306 ಲಕ್ಷ ರೂಪಾಯಿಗಳ ತನಕ ಏರಿಸಿದ್ದಾರೆ. ಆರೋಗ್ಯಕ್ಕೂ ಕೂಡ ಅದೇ ರೀತಿ ಹೆಚ್ಚುಮಾಡಿದ್ದಾರೆ. ಹೀಗೆರ್ಲಾ ಮಾಡಿರುವಾಗ ದುಡ್ಡು ಎಲ್ಲರುತ್ತದೆ! ಜಿಪ್ಪಣರು 20 ಕೋಟಿ ರೂಪಾಯಿ ಇಟ್ಟಿದ್ದರು. ಅದೂ ಹೋಯಿತು. ಆ ದುಡ್ಡನ್ನು ಏನಾದರೂ ಹಿಂದಿನ ಮಂತ್ರಿಗಳು ನೀರಾವರಿ ಕಾಂಗಾರಿಗಳಿಗೆ ಹಾಕಿ ಕೆರೆಗಳನ್ನು ಕಟ್ಟಿಸಿದ್ದಿದ್ದರೆ ಈ ದಿನ ರೂಪಾಯಿಗೆ ನಾಲ್ಕು ಸೇರು ಅಕ್ಕಿ ಸಿಕ್ಕುತ್ತಾ ಇತ್ತು. ಮಹಾರಾಜರವರು ಏನು ಹೇಳುತ್ತಾರೆ! ನೀವು ಒಳ್ಳೆಯ ಬುದ್ಧಿವಂತರು, ಸದ್ಗುಣಸಂಪನ್ನರು ಜವಾಬ್ದಾರಿಯಿಂದ ಸರ್ಕಾರ ನಡೆಸಿ ಎಂದು ಹೇಳುತ್ತಾರೆ. ಎಲ್ಲರೂ ನಮಗೂ ಸ್ಕೂಲು ಕೊಡಿ, ಹಳ್ಳಿಹಳ್ಳಿಗೂ ಮಾತುಮಾತಿಗೂ ಸ್ಕೂಲು ಕೊಡಿ ಎಂದರೆ ಮಂತ್ರಿಗಳು ಇನ್ನೇನು ಮಾಡುತ್ತಾರೆ! ಇದ್ದ 20 ಕೋಟಿ ರೂಪಾಯಿಗಳನ್ನು ಕಳೆದುಕೊಂಡರು. ನಾವು, ಅದು ಹಾಗಲ್ಲ ಈ ಹಣವನ್ನು ಇಂಥಾದ್ದಕ್ಕೇ ಖರ್ಚುಮಾಡಿ, ಇಪ್ಪತ್ತೈದೇ ಕೊಡಬೇಕೆಂದು ನಿಗದಿ ಮಾಡಿ ಎಂಬುದನ್ನು ಹೇಳದೆ, ನಮಗೆ 10 ಪ್ರಶ್ನೆ, 2 ನಿರ್ಣಯ ಕಳುಹಿಸುವುದಕ್ಕೆ ಅವಕಾಶ ಏಕೆಯೆಂದು ಪ್ರಶ್ನೆಗಳನ್ನು ಹಾಕಿದರೆ ಉತ್ತರ ಹೇಳುವವರು ಯಾರು? ಆದ್ದರಿಂದ ನಾನು ಹೇಳುವುದೇನೆಂದರೆ ನಮ್ಮ ದೇಶದಲ್ಲಿ ಈಗ 60 ಲಕ್ಷ ಪ್ರಜೆಗಳು ಕ್ಷಾಮ ಪ್ರದೇಶದಲ್ಲಿದ್ದಾರೆ—ನಮ್ಮ ಸ್ನೇಹಿತರು ಹೇಳಿ

ದಂತೆ ಮರಳಿನಲ್ಲಿ ಸಮುದ್ರದಂಥಾದ್ದು ಯಾವುದನ್ನಾದರೂ ಕಂಡುಹಿಡಿಯುವುದಕ್ಕೆ ಹೋದರೆ ಕಾಸೇ ಮುಗಿದುಹೋಗುತ್ತದೆ—ಅದಕ್ಕೆ ಬದಲಾಗಿ ಕೆರೆಗಳನ್ನು ಕಟ್ಟಿ. ಅದಕ್ಕೆ ಏನು ಬೇಕೋ ಅದನ್ನು ಪ್ಯಾಕ್ ಮಾಡಿ ಇರಿಗೇಷನ್ ಅಭಿವೃದ್ಧಿ ಮಾಡಿದ ಪಕ್ಷದಲ್ಲಿ ಒಳ್ಳೆಯದು. ಅದಕ್ಕೆ ನಾನು ಮುಖ್ಯ ಮಂತ್ರಿಗಳಿಗೆ ಈಗ ಈ ಸಭೆಯ ಭವನಕ್ಕೆ 30 ಲಕ್ಷ ರೂಪಾಯಿ ಖರ್ಚು ಮಾಡುವುದು ಬೇಡಿ. ಮರದ ಕೆಳಗಾದರೂ ಮೀಟಿಂಗ್ ಮಾಡೋಣ ಅಂತ ಹೇಳಿದೆ. ಈ ಸಭೆಯನ್ನು ಯಾವುದಾದರೂ ಇರುವ ಒಂದು ಕಟ್ಟಡದಲ್ಲಿ ಮಾಡೋಣ. ಅದೇ 30 ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಕೆರೆ ಕಟ್ಟಿ.

ಇನ್ನು ಅಡಲ್ಟ್ ಎಜ್ಯುಕೇಷನ್ ವಿಚಾರ. ಅದಂತೂ ಹೇಳತೀರದು. ಅನೇಕರು ಸ್ಲೇಟು ಪುಸ್ತಕಗಳನ್ನು ಮಾರಿಕೊಂಡಿದ್ದಾರೆ. ಈವತ್ತು ನನ್ನ ಜೊತೆಯಲ್ಲಿ ಬರಲಿ, ಪುಸ್ತಕ ಮಾರುತ್ತಾ, ಇರುವುದನ್ನು ತೋರಿಸುತ್ತೇನೆ. ಆದ್ದರಿಂದ ಅಡಲ್ಟ್ ಎಜ್ಯುಕೇಷನ್ ಮೊದಲು ತೆಗೆದು ಹಾಕಿ. 5 ಲಕ್ಷ ರೂಪಾಯಿ ಉಳಿಯುತ್ತದೆ. ಇದರಿಂದ ಕೆರೆಗಳನ್ನು ಕಟ್ಟಿಸಿ. ಇಂಥವನ್ನು ಮಾಡುವುದು ಬಿಟ್ಟು ನಮ್ಮನೆ ಮಹಾರಾಜರನ್ನು ದೂರಿಗೆ ಎಳೆಯುವುದು, Regret ಅನ್ನುವುದು, ಇದರಿಂದ ಏನು ಪ್ರಯೋಜನ? ಅವರು ಏನು ಮಾಡುತ್ತಾರೆ? ಹಿಂಸೆ ಮಾಡಿದ್ದೀರಿ. ಅವರಿಗೆ ಇದ್ದದ್ದನ್ನೆಲ್ಲಾ ಕಿತ್ತುಕೊಂಡು ಬಿಟ್ಟಿರಿ. ಅವರು ಒಂದು ಓದಿದ್ದಕ್ಕೂ ಬೆರೆ ಬೇಡವೇ? ಹೀಗೆ ಮಾಡಬಾರದು. ಸಿಂಹಾಸನದಲ್ಲಿ ಕೂಡತಕ್ಕ ನಮ್ಮ ಶ್ರೀಮನ್ಮಹಾರಾಜರು ಇತರ ಮಹಾರಾಜರುಗಳ ಹಾಗಲ್ಲ. 9 ದಿನ ಸಿಂಹಾಸದಲ್ಲಿ ಕುಳಿತು ಕೊಂಡು ಪೂಜೆ ಮಾಡಿಸಿಕೊಳ್ಳತಕ್ಕಂಥ ಮಹಾರಾಜರು ಇಂಡಿಯಾ ದೇಶದಲ್ಲಿ ಎಲ್ಲೂ ಇಲ್ಲ.

Sri Mulka GOVINDA REDDY.—On a point order, Sir. Is it relevant to this?

Mr. SPEAKER.—The member has already understood your point of order.

ಶ್ರೀ ಎಂ. ಶಂಕರಲಿಂಗೇಗೌಡರು.—ನಿಮ್ಮ ಇರಾಜಯ್ಯನವರು ಒಂದು ಮ್ಯಾಪ್ ಮಾಡಿದ್ದಾರೆ. ನಾನೂ ಒಂದು ಮ್ಯಾಪ್ ಮಾಡಿದ್ದೇನೆ. ಅವರು ಮಾಡಿರುವುದರಲ್ಲಿ They have not prepared a map about the part of the country that is practically safe from famine, the part liable to famine, the part extremely liable to famine, the part artifically protected from famine. ನಾನು ಮಾಡಿರುವುದರಲ್ಲಿ ಐದು ಡಿವಿಜ಼ನ್‌ಗಳಾಗಿ ಮಾಡಿದ್ದೇನೆ. ನಮ್ಮ ಮುಖ್ಯ ಮಂತ್ರಿಗಳು ಈ ಮ್ಯಾಪ್‌ನ್ನು ಮಾಡಿಸಿದರೆ ನಾನು ಅವರಿಗೆ ಬಹಳವಾಗಿ ವಂದಿಸುತ್ತೇನೆ. ಇದಕ್ಕೆ 15 ಸಾವಿರ ರೂಪಾಯಿಗೆ ಮೇಲ್ಪಟ್ಟು ಖರ್ಚಾಗುತ್ತದೆ. ಬೇಕಾದರೆ ನಾನೇ ಇಸ್ಟಿಮೇಟ್ ಕೊಡುತ್ತೇನೆ. ಬರೆಯುವುದು ಯಾವುದೂ ನನ್ನಿಂದ ಆಗುವುದಿಲ್ಲ. ನಿಂತುಕೊಂಡು ಮಾತನಾಡುವುದೂ ಕಷ್ಟ (ಸಭೆಯಲ್ಲಿ ನಗು ;)

Mr. SPEAKER.—The member has two minutes more.

ಶ್ರೀ ಎಂ. ಶಂಕರಲಿಂಗೇಗೌಡರು.—ನನಗೆ ಹೆಚ್ಚು ಕಾಲ ಬೇಕಾಗಿಲ್ಲ. ಮಹಾರಾಜರವರ ಭಾಷಣಕ್ಕೆ regret ಎಂಬ ಒಂದು ಮಾತನ್ನು ಉಪಯೋಗಿಸಿ ಇರಿಗೇಷನ್ ವಿಚಾರದಲ್ಲಿ ಏನೂ ಹೇಳಿಲ್ಲ ಎಂದು ತಪ್ಪು ಆಪಾದನೆ ಮಾಡಿ ತಿದ್ದುಪಡಿ ಹಾಕಿರುವುದನ್ನು ಅವರ ವಿರೋಧ ಪಕ್ಷಕ್ಕೆ ಶುದ್ಧ ಅನಂಬದ್ಧವಾಗಿದೆ. ನಾನು ಸ್ವತಂತ್ರ ಸದಸ್ಯ; ಅವರಿಗೂ ಸಹಾಯ ಮಾಡುತ್ತೇನೆ. ಮೊನ್ನೆ ಓಟು ಅವರಿಗೇ ಕೊಟ್ಟೆ. ಆದರೂ 9 ಓಟೂ ಸಿಕ್ಕಲಿಲ್ಲ. ಆದ್ದರಿಂದ ಈ ತರದ ತಿದ್ದುಪಡಿಯನ್ನು ಆ ಪಾರ್ಟಿಯ ನಾಯಕರಾಗಿರತಕ್ಕವರು ಎಂದಿಗೂ ಕಳುಹಿಸಬಾರದು, ಎಂದು ಹೇಳಿ ಮುಗಿಸುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್‌ರವರು (ಬೆಂಗಳೂರು ದಕ್ಷಿಣ–ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಈ ದಿವಸ ಶ್ರೀಮನ್ಮಹಾರಾಜರವರು ಮಾಡಿದಂಥಾ ಭಾಷಣಕ್ಕೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸುತ್ತಾ, ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಶ್ರೀಮನ್ಮಹಾರಾಜರವರು...

ಶ್ರೀ ಎಸ್. ಗೋಪಾಲಗೌಡರು (ಸಾಗರ–ಹೊಸನಗರ).—ಶ್ರೀಮನ್ಮಹಾರಾಜರು ಎಂಬ ಶಬ್ದವನ್ನು ಪದೇ ಪದೇ ಉಪಯೋಗಿಸುವುದು ಕಂಡು ಬರುತ್ತದೆ. ಇದು ರಾಜ್ಯಾಂಗದಲ್ಲಿ ಇಲ್ಲ. ಆದ್ದರಿಂದ ರಾಜಪ್ರಮುಖರು ಎಂಬುದಾಗಿ ಉಪಯೋಗಿಸಬೇಕು.

Sri A. G. RAMACHANDRA RAO.—We may use both the terms.

ಶ್ರೀ ಬಿ. ಟಿ. ಕೆಂಪರಾಜ್‌ರವರು.—ಎರಡು ಶಬ್ದಗಳನ್ನು ಸಹ ಪ್ರಯೋಗ ಮಾಡಬಹುದು. ಇದುವರೆಗೂ ಭಾಷಣ ಮಾಡಿದಂಥಾ ವಿರೋಧ ಪಕ್ಷದಲ್ಲಿರುವ ಕೆಲವು ಮಾನ್ಯ ಸದಸ್ಯರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರೆ, ಶ್ರೀಮನ್ಮಹಾರಾಜರವರು ಮಾಡಿರುವ ಭಾಷಣವನ್ನು ನಾವು ಕೂಲಂಕಷವಾಗಿ ಪರಿಶೀಲಿಸಿದ ಪಕ್ಷಕ್ಕೆ ಈ ರೀತಿಯಾದ ತಿದ್ದುಪಡಿ ಸೂಚನೆಗಳು ಕೇವಲ ಅನಂಬದ್ಧವಾಗಿವೆಯೆಂದು ವ್ಯಕ್ತವಾಗುತ್ತದೆ. ಏಕೆಂದರೆ ವಯಸ್ಕರ ಮತದಾನದ ಮೇರೆಗೆ ಚುನಾವಣೆ ನಡೆದು ಆ ಚುನಾವಣೆಯಲ್ಲಿ ಜಯವನ್ನು ಗಳಿಸಿದ ಸದಸ್ಯರು ಸೇರಿರುವ ಸಭೆ ಇದು. ಈ ಸಭೆಗೆ ರಾಜಪ್ರಮುಖರು ಕೊಟ್ಟಿರುವ ಭಾಷಣದಲ್ಲಿ ಒಂದು ಅತ್ಯಮೂಲ್ಯವಾದ ಸೂಚನೆ ಕೊಟ್ಟಿದ್ದಾರೆ. ನಾವುಗಳು ವಯಸ್ಕರ ಮತದಾನದ ಪದ್ಧತಿಯ ಮೇರೆಗೆ ಚುನಾಯಿಸಿ ಬಂದವರಾಗಿ ಪ್ರತಿಯೊಂದು ವಿಚಾರದಲ್ಲೂ ಕೂಲಂಕಷವಾಗಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ದೇಶಕ್ಕೆ ಒಳ್ಳೆಯದಾಗುವಂತೆ ಸಹಕರಿಸಬೇಕೆಂಬುದು ಅವರ ಸೂಚನೆಯಲ್ಲಿ ಅಡಕವಾಗಿದೆ.

Janab J. MOHAMED IMAM.—Uncalled for.

ಶ್ರೀ ಬಿ. ಟಿ. ಕೆಂಪರಾಜ್‌ರವರು.—ಅಂದ ಮೇರೆ ವಿರೋಧ ಪಕ್ಷದವರು ಕೇವಲವಾಗಿ ಸರ್ಕಾರದವರು ಹೇಳುವ ಮಾತುಗಳಿಗೆರ್ಲಾ ಟೀಕೆ ಟಿಪ್ಪಣಿಗಳನ್ನು ಮಾಡುವುದೇ ತಮ್ಮ ನೀತಿಯೆಂದು ಭಾವಿಸಿ ಮಾಡಿರುವುದನ್ನು ನೋಡಿದರೆ ವಿಷಾದವಾಗುತ್ತದೆ. ಹಾಗೆ ನಮ್ಮನೆ ಯಾವುದಕ್ಕೂ ಟೀಕಿಸಬಾರದು. ಅವರ ಮಾರ್ಗ ಸತ್ಯದಿಂದ ಕೂಡಿರಬೇಕು, ರುಜುವಾಗಿರಬೇಕು.

Janab J. MOHAMED IMAM.—Is he delivering a lecture to the Opposition? It looks as if he is delivering a lecture or giving advice to the Opposition party. He need not dwell on the activities of the "ವಿರೋಧ ಪಕ್ಷ" but let

(JANAB MOHAMED IMAM.)

him confine his remarks to his own ಪಕ್ಷ.

ಶ್ರೀ ಬಿ. ಟಿ. ಕೆಂಪರಾಜ್‌ರವರು.—I am not advising. ಅವರು ಮಾಡುತ್ತಿರುವ ಟೀಕೆಗೆ ನನ್ನ ವಿಷಾದವನ್ನು ಸೂಚಿಸಿದೆ. ಜುನಾವಣಾ ಕಾಲದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿತ್ತು, ಇದರಿಂದ ಅನೇಕ ಅಕೃತ್ಯಗಳು ನಡೆಯುವುದಕ್ಕೆ ಅವಕಾಶವಾಯಿತೆಂದು ವಿರೋಧ ಪಕ್ಷದವರು ಅಭಿಪ್ರಾಯ ಪಟ್ಟರು. ಅದನ್ನು ನಾನು ಒಪ್ಪಲಾರೆ. ಹಾಗೊಂದು ವೇಳೆ ಅದು ನಿಜವಾಗಿದ್ದ ಪಕ್ಷದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೊಬ್ಬರೂ ಜಯಗಳಿಸಿ ಬರುತ್ತಲೇ ಇರಲಿಲ್ಲ. ಇದೊಂದು ಉದಾಹರಣೆಯನ್ನು ತೆಗೆದುಕೊಂಡರೇ ಸಾಕು, ಕಾಂಗ್ರೆಸ್ ಸರ್ಕಾರದ ನೀತಿ, ಕಾಂಗ್ರೆಸ್ ಸರ್ಕಾರದ ವರ್ತನೆ ವಿಶಾಲ ಮನೋಭಾವನೆಯಿಂದ ಕೂಡಿತ್ತೆಂಬುದು ಚೆನ್ನಾಗಿ ವ್ಯಕ್ತಪಡುತ್ತದೆ.

ಇಡೀ ಮೈಸೂರು ದೇಶದಲ್ಲಿ ಕ್ಷಾಮ ಪರಿಸ್ಥಿತಿಯಿದೆಯೆಂದು ಒಂದು ಉತ್ಪ್ರೇಕ್ಷೆಯ ಪಾದವನ್ನು ಹೂಡಿದ್ದಾರೆ; ಕಂಟ್ರೋಲ್‌ಗಳಿರುವುದೇ ಕ್ಷಾಮ ಪರಿಸ್ಥಿತಿಯ ಸೂಚನೆಯೆಂದು ಅವರ ಅಭಿಪ್ರಾಯ. ಆದರೆ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ಈ ಕಂಟ್ರೋಲುಗಳು ಬಂದದ್ದು ಕಾಂಗ್ರೆಸ್ ಸರ್ಕಾರ ಬಂದ ಮೇಲಲ್ಲ; ವಿರೋಧಪಕ್ಷದ ಮುಖಂಡರುಗಳೇ ಅಧಿಕಾರದಲ್ಲಿದ್ದಾಗ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ, ಕಂಟ್ರೋಲ್ ವಿಷಯದಲ್ಲಿ ಅತಿ ತೀವ್ರ ಗಮನ ಕೊಟ್ಟು ದಿಟ್ಟತನದಿಂದ ಹಳ್ಳಿಗಾಡಿನ ಕಡೆಗಳಲ್ಲೆಲ್ಲಾ ಡಿ-ಕಂಟ್ರೋಲ್ ಮಾಡಿಲ್ಲವೇ! ಹೆದರದೆ, ಎಷ್ಟು ದೂರ ಬದಲಾವಣೆ ಮಾಡಬಹುದೋ ಅಷ್ಟೂ ಮಾಡಿ ಇಡೀ ಭಾರತದಲ್ಲೇ ಮೊದಲನೆಯ ಬಾರಿ ಈ ಹೊಸ ವಿಧಾನ ಮಾಡಲಲ್ಲವೇ!

ಶ್ರೀ ಬಿ. ಹುಚ್ಚೇಗೌಡರು.—ಹಿಂದಿದ್ದ ಸರ್ಕಾರ ಕಾಂಗ್ರೆಸ್ ಸರ್ಕಾರವಲ್ಲವೋ?

ಶ್ರೀ ಬಿ. ಟಿ. ಕೆಂಪರಾಜ್‌ರವರು.—ಅಂತೂ ಈ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಕಂಟ್ರೋಲುಗಳನ್ನು ತೆಗೆಯಲು ಹೆಚ್ಚಿನ ದಿಟ್ಟತನದ ಕಾರ್ಯಕ್ರಮವನ್ನು ಕೈಕೊಂಡಿದೆಯೆಂಬುದನ್ನು ಎಲ್ಲರೂ ಒಪ್ಪಲೇಬೇಕು.

ಇನ್ನು ವಿದ್ಯಾವ್ಯಾಸನದ ವಿಚಾರವಾಗಿ ಒಂದು ಮಾತು ಹೇಳಬೇಕಾಗಿದೆ. 150 ವರ್ಷ-200ವರ್ಷಗಳಿಂದ ಸಾಂಪ್ರದಾಯಿಕವಾಗಿ ನಮ್ಮ ಮೇಲೆ ಹೇರಲ್ಪಟ್ಟಂಥ ಒಂದು ವಿದ್ಯಾಭ್ಯಾಸ ಪದ್ಧತಿಯನ್ನು ಇಂದು ಒಂದೇ ಬಾರಿಗೆ ಬದಲಾವಣೆ ಮಾಡಬೇಕೆಂದು ವಾದಿಸುವುದರಲ್ಲಿ ತಿರುಳಿಲ್ಲ. Rome was not built in one day ಎಂಬ ಮಾತನ್ನು ಮಾನ್ಯಸದಸ್ಯರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಯಾವ ಕಾರ್ಯವನ್ನು ಕೈಕೊಂಡರೂ ಅದನ್ನು ಮಾಡಬೇಕಾದರೆ ಕಾಲ ಹಿಡಿಯುತ್ತದೆ.-ಪ್ರತಿಯೊಂದು ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೂ ಕಾಲಬೇಕು. ಯಾವುದನ್ನೇ ಆಗಲಿ ಒಂದೇ ಬಾರಿಗೆ ಮಾಡಿಬಿಡಬೇಕೆಂದರೆ ಆಯಕ್ಷಣಿಗೆ ಅರ್ಥಾವುದ್ದೀನನ ಅದ್ಭುತದೀಪ ತರಬೇಕು ಅಷ್ಟೆ. ಯಾವುದರ ಮೇಲೂ ಹೆಜ್ಜೆಯಮೇಲೆ ಹೆಜ್ಜೆಯಾಗಿ ಮುಂದಡಿ ಯಿಡಬೇಕು. ಇದನ್ನೇ ಈಗ ಕಾಂಗ್ರೆಸ್ ಸರ್ಕಾರವು ಮಾಡುತ್ತಾ ಬಂದಿರುವುದು. ಅವರು ಅನೇಕ. ಮಸೂದೆಗಳನ್ನು ಈ ಸಭೆಯ ಮುಂದೆ ಮಂಡಿಸುವವರಾಗಿದ್ದಾರೆ. ಅದಕ್ಕೆ ಪ್ರತಿಯೊಂದಕ್ಕೂ ಮಾನ್ಯ ಸದಸ್ಯರು ಸಹಕರಿಸಿ ಸಹಾಯಮಾಡಬೇಕಾದ್ದು ಅವಶ್ಯಕ.

ಕೈಗಾರಿಕೆಗಳ ವಿಚಾರದಲ್ಲೂ ಮೈಸೂರುದೇಶ ಬಹಳ ಮುಂದುವರಿದಿದೆ. ಕೈಗಾರಿಕಾ ಸಂಸ್ಥೆಗಳಲ್ಲಿ ಸರ್ಕಾರದವರ ಕೈ ವಾಡುವಿದೆ. ಅನೇಕ ಸಂಸ್ಥೆಗಳಲ್ಲಿ ಸರ್ಕಾರದವರು ತಮ್ಮ ಕೈವಾಡವನ್ನು ನಡೆಸುವುದಕ್ಕೆ ಸರಿಯಾದ ಅಧಿಕಾರಿಗಳನ್ನು ನೇಮಿಸುತ್ತಿದ್ದಾರೆ. ಲೇಬರ್ ಅಸೋಸಿಯೇಷನ್‌ಗಳಿಗೆ, ಲೇಬರ್ ಸಂಸ್ಥೆಗಳಿಗೆ ಕಾರ್ಮಿಕರ ಹಿತಸಾಧನೆಗೆ ಸರ್ಕಾರದವರು ಎಷ್ಟರಮಟ್ಟಿಗೆ ಗಮನ ಕೊಟ್ಟು ಅವರ ಅಭಿವೃದ್ಧಿಗೆ, ಅವರ ಆರೋಗ್ಯಕ್ಕೆ, ಅವರ ಎಲ್ಲ ವಿಷಯಗಳಲ್ಲೂ ಮುಂದುವರಿಯುವುದಕ್ಕೆ ಎಷ್ಟು ಸಹಾಯ ಮಾಡುತ್ತಿದ್ದಾರೆಂಬುದಕ್ಕೆ ಲೇಬರ್ ಇಲಾಖೆ, ಲೇಬರ್ ವೆಲ್‌ಫೇರ್ ಅಸೋಸಿಯೇಷನ್‌ಗಳು ಮತ್ತು ಇನ್ನೂ ಅನೇಕ ಸಂಸ್ಥೆಗಳೂ ಇರುವುದೇ ಉದಾಹರಣೆಯಾಗಿದೆ. ಅಂದವೇಲೆ ಕಾರ್ಮಿಕರಲ್ಲೂ ಬಂಡವಾಳಗಾರರಲ್ಲೂ ಸೌಹಾರ್ದಯುತವಾದ ಸಂಬಂಧವನ್ನು ಕುದುರಿಸಿ ತಲ್ಲೂಲಕ ಇಬ್ಬರಿಗೂ ಸಮಾಧಾನಕರವಾದ ವಾತಾವರಣವನ್ನು ಏರ್ಪಡಿಸಿ ಬಡಜನರಿಗೂ ಕೂಲಿಗಾರರಿಗೂ ಒಂದು ಸುಖದ ಜೀವನ ಲಭಿಸುವಂತೆ ಪ್ರಯತ್ನಿಸುವುದೇ ಸರ್ಕಾರದ ನೀತಿಯಾಗಿದೆಯೆಂದು ಹೇಳಬಯಸುತ್ತೇನೆ.

ಎರಡನೆಯದಾಗಿ, ಕ್ಷಾಮ ಪ್ರದೇಶಗಳ ವಿಚಾರ. ಈ ವಿಷಯದಲ್ಲಿ ಕೆಲವು ಸದಸ್ಯರು ಬಹಳ ಉತ್ಪ್ರೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಅನೇಕವರ್ಷಗಳಿಂದ ಮಳೆ ದಾಂಡೆಯಿದ್ದಕಾರಣದಿಂದ ಜನರು ಬಹಳ ತೊಂದರೆಗಳಿಗೆ ಈಡಾಗಬೇಕಾಗಿ ಬರುವುದು ಪ್ರಕೃತಿಯ ಲಕ್ಷಣ. ಈ ರೀತಿಯ ಕ್ಷಾಮವನ್ನು ನಿವಾರಿಸಬೇಕಾದರೆ ಒಂದೇ ಬಾರಿಗೆ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. ಅಲ್ಲದೇ, ಕ್ಷಾಮ ಪ್ರದೇಶಗಳಲ್ಲಿ ಜನರಿದ್ದಾರೆ ಎಂದು ವಾದಿಸುವುದಾದರೆ, ಕ್ಷಾಮ ಎಂಬ ಪದದ ಅರ್ಥವಾದರೂ ಏನು? ಇದೇ ನಮ್ಮ ಪಕ್ಕದ ಮದ್ರಾಸ್ ಪ್ರಾಂತ್ಯದ ಮತ್ತು ಬಿಹಾರಿನ ಕ್ಷಾಮ ಪ್ರದೇಶದಲ್ಲಿ ಜನರು ಯಾವರೀತಿಯ ಕಷ್ಟವನ್ನನುಭವಿಸಿದರು ಎಂಥಾ ದುರವಸ್ಥೆ ಬಂದಿತ್ತು ಎಂಬುದನ್ನು ನೋಡುವುದಾದರೆ ನಮ್ಮಲ್ಲಿ ದೇವರ ದಯೆಯಿಂದ ಅಂಥ ಪರಿಸ್ಥಿತಿ ಉಂಟಾಗಿಲ್ಲ. ಅಂದಮೇಲೆ ಇಲ್ಲಿ ಕ್ಷಾಮವಿದೆ, ನಮ್ಮ ಸರ್ಕಾರದವರು ಸರಿಯಾದ ಗಮನ ಕೊಡುತ್ತಿಲ್ಲವೆಂದು ವಾದಿಸುವುದು ಸರ್ವಥಾ ಒಪ್ಪತಕ್ಕಮಾತಲ್ಲ. ಕಾಲಕ್ಕೆತಕ್ಕಂತೆ ಸರ್ಕಾರದವರು ಎಷ್ಟರಮಟ್ಟಿಗೆ ಸಹಾಯ ಮಾಡಬೇಕೋ ಅದಕ್ಕಿಂತಲೂ ಹೆಚ್ಚಿನ ಸಹಾಯ ನೀಡುತ್ತಿದ್ದಾರೆ. ಈ ಬಗ್ಗೆ ನಮ್ಮ ವಿರೋಧಪಕ್ಷದ ಸದಸ್ಯರು ಖಂಡತವಾಗಿಯೂ ಭಯಪಡಬೇಕಾಗಿಲ್ಲ. ಅದೂ ಅಲ್ಲದೆ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಬಹಳ ಅರ್ಥಗರ್ಭಿತವಾದ ಸೂಚನೆಯನ್ನು ಕೊಟ್ಟಿದ್ದಾರೆ ಏನೆಂದರೆ. ನಾವುಗಳೆಲ್ಲರೂ ಬಹಳ ಜವಾದ್ದಾರಿಯುತವಾದ ಒಂದು ಹಕ್ಕನ್ನು ಹೊಂದಿದ್ದೇವೆ. ಆದ್ದರಿಂದಲೇ ಶ್ರೀಮನ್ಮಹಾರಾಜರವರು ಯಾವ ವಿಚಾರದಲ್ಲೂ ಕೂಲಂಕಷವಾಗಿ ವಿಮರ್ಶಿಸಿ ಮಾಡಲಕ್ಕೆ ಪ್ರವೇಶ ಮಾಡದೆ ಎಲ್ಲ ಜವಾಬ್ದಾರಿಯನ್ನೂ ಈ ಸಭೆಯವರ ಮೇಲೆ ಹಾಕಿದ್ದಾರೆ. ನಾವುಗಳೆಲ್ಲರೂ ಸಹಕರಿಸಿ ವರ್ತಿಸಿ ಈ ಗುರುತರದ ಜವಾಬ್ದಾರಿಯನ್ನು ನಿರ್ವಹಿಸಬೇಕೆಂಬ ಸೂಚನೆ ಅವರ ಭಾಷಣದಲ್ಲಿ ಎದ್ದು ಕಾಣುತ್ತದೆ. ಹೀಗೆ ಇಂಥ ಸಮಯೋಚಿತವಾದ ಭಾಷಣವನ್ನು ಮಾಡಿ ನಮಗೊಂದು ಸೂಚನೆ ಕೊಟ್ಟಿರುವುದಕ್ಕೂ, ಮತ್ತು ಈ ವಿಷಯವನ್ನು ನಮ್ಮ ಸ್ವಂತ ಜವಾಬ್ದಾರಿಗೆ ಬಿಟ್ಟು ನಮ್ಮ ಮೇಲೆ ಯಾವ ವಿಧವಾದ ಒತ್ತಡವನ್ನೂ ಹೊರಿಸದಿರುವುದಕ್ಕೂ ನಾವು ಅವರಿಗೆ ಸರ್ವತೋಮುಖವಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾದದ್ದು ನಮ್ಮಗಳ ಕರ್ತವ್ಯ

ವಾಗಿದೆ. ಮಾನ್ಯಸದಸ್ಯರೆಲ್ಲರೂ ಅದನ್ನು ಒಪ್ಪುತ್ತಾರೆಂದು ಭಾವಿಸಿನನ್ನಭಾಷಣವನ್ನು ಮುಗಿಸುತ್ತೇನೆ.

Janab J. MOHAMED IMAM.—Before proceeding further, I would like to know how long we are to continue and what is the future programme for the day?

Mr. SPEAKER.—I would like to know the view of the Hon'ble Leader of the House.

Sri K. HANUMANTHAIYA.—Discussion can proceed till one of the clock and after that I will reply.

Janab J. MOHAMED IMAM.—It will be very late. Can we not break for one hour in the middle and meet again? I am afraid discussion will prolong beyond 2 or 3 O'Clock. I suggest that we break for one hour for lunch and then meet again and continue till the business of the House is over. The previous experience is that on the last day of the debate, we have sat till 9 or 10 in the night. It is therefore my suggestion that we break in the middle for one hour, finish lunch and again come back and sit if necessary till late in the night.

Mr. SPEAKER.—I do not think there is any necessity to sit late in the night. Hon'ble Members will have further opportunities of offering suggestions during the course of the Budget Discussion. I think one or two more Members may take part in the present debate and give chance to the Leader of the House and other Ministers, if any, to reply and close the debate by about 1 or 1-15 P.M.

Janab J. MOHAMED IMAM.—I am afraid it will not be over by 1 or 1-15.

Sri Mulka GOVINDA REDDY.—In that case opportunities may be given to the Opposition Members.

Mr. SPEAKER.—Opposition Members have had plenty of opportunities.

Sri Mulka GOVINDA REDDY.—I am sorry, Sir. When the Leader of the House is there and when so many Congress Members have already spoken on the motion, it is better that opportunities be given to Members of the Opposition so that they will be in a position to express a different point of view. Members on the Congress benches will be merely repeating the same arguments over and again, and I therefore submit that it may be better that a different viewpoint is allowed to be expressed also.

Sri A. BHEEMAPPA NAIK.—The Opposition members also go on saying stereo-typed arguments, Sir. The same thing is being repeated again and again. Probably they have had enough chances.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ಬೇರೆ view point ಏನಿದೆ ಎಂಬುದನ್ನು ಹೇಳುವುದಕ್ಕೆ ಅವಕಾಶವಿರಬೇಕು. ಪ್ರತಿಪಕ್ಷದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ತಯಾರಾಗಿದ್ದಾರೆ. ಈಗ ಇದುವರೆಗೆ ಮಾತನಾಡಿರುವ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ಧೋರಣೆಯನ್ನೇ ಎತ್ತಿಹಿಡಿದು ಮಾತನಾಡುತ್ತಾರೆ. ಅವರಿಗೆ ಸಾಕಷ್ಟು ಅವಕಾಶ ಕೊಟ್ಟಿದ್ದೀರಿ. ಈಗ ಮಾತನಾಡುವವರು ಪ್ರತಿಪಕ್ಷದ ಕಡೆಯಿಂದ ಮಾತನಾಡಿದರೆ ಒಳ್ಳೆಯದು. ಇದರಿಂದ ಹೊಸಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು.—ನಿನ್ನೆಯ ದಿವಸ ಪ್ರತಿಪಕ್ಷದ ಸದಸ್ಯರು ಮಾತನಾಡಲು ಅವಕಾಶ ಕೊಡಲಾಯಿತು, ಆದರೆ ಕೆಲವರು ಈ ದಿವಸ ಮಾತನಾಡಬೇಕೆಂಬ ಉದ್ದೇಶದಿಂದ ನಿಧಾನ ಮಾಡಿದರೆಂದು ನನ್ನ ಭಾವನೆ. ಈ ದಿವಸವೂ ಕೂಡ ಅವಕಾಶಕೊಟ್ಟಿದೆ. ಮೆಜಾರಿಟಿ ಪಕ್ಷದಲ್ಲಿ ಇನ್ನೂ ಬಹಳ ಜನರಿಗೆ ಮಾತನಾಡುವುದಕ್ಕೆ ಇಷ್ಟವಿರುವಂತೆ ನನಗೆ ಕಾಣುತ್ತದೆ.

You please leave it to my discretion. We will continue till one O'clock and then see. Sri Y. M. Chandrasekharaiya may speak

*ಶ್ರೀ ವೈ. ಎಂ. ಚಂದ್ರಶೇಖರಯ್ಯನವರು (ಕಡೂರು).—ಸ್ವಾಮಿ, ಶ್ರೀಮನ್ಮಹಾರಾಜರವರು ಬಹಳ ಅಮೂಲ್ಯವಾದ, ಸ್ವಾರಸ್ಯವಾದ ಮತ್ತು ಅರ್ಥ ಗರ್ಭಿತವಾದ ಭಾಷಣವನ್ನು ಮಾಡಿದ್ದಾರೆ. ಇದನ್ನು ಶ್ರೀಮಾನ್ ರುದ್ರಪ್ಪನವರು ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ. ಇದನ್ನು ಮನಸ್ಸು ತಡೆಯದಿರಾರದ ಎಧುರು ಪಕ್ಷದವರು ಟೀಕೆಮಾಡಿದ್ದಾರೆ. ಈ ಭಾಷಣವನ್ನು ಸಂತೋಷದಿಂದ ಸ್ವಾಗತಿಸಬೇಕಾಗಿದೆ. ನಮ್ಮ ಶ್ರೀಮನ್ಮಹಾರಾಜರವರು ಇಡೀ ಇಂಡಿಯಾ ದೇಶದಲ್ಲಿನ 560 ಸಂಸ್ಥಾನಗಳ ರಾಜರ ಪೈಕಿ ಉನ್ನತಮಟ್ಟದಲ್ಲಿದ್ದು ಒಂದು ಗಣ್ಯಸ್ಥಾನವನ್ನು ಪಡೆದಿರುವವರು ಎಂದರೆ ಅದು ತಪ್ಪಲ್ಲ. ಇವರು ಮೊನ್ನೆ ತಾನೆ ಕರ್ನಾಟಕದಲ್ಲಿ ಪ್ರವಾಸ ಮಾಡಿದ ಕಾಲದಲ್ಲಿ ಇವರಿಗೆ ದೊರೆತಿರುವ ಸ್ವಾಗತವನ್ನು ನೋಡಿದರೆ, ಇಂಡಿಯಾ ದೇಶದಲ್ಲಿ ಇನ್ನಾವೀಗೂ ಇಂತಹ ಸ್ವಾಗತ ದೊರೆತಿಲ್ಲವೆಂದು ಹೇಳಿದರೆ ತಪ್ಪಾಗಲಾರದು.....

ಅಧ್ಯಕ್ಷರು.—ಅವರ ಭಾಷಣದ ವಿಷಯದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಸಾಕು.

*ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಸ್ವಾಮಿ ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ. ಇಲ್ಲಿರುವ ಸದಸ್ಯರಲ್ಲಿ ಅನೇಕರು ವಯಸ್ಕರ ಮತದಾನದ ವಿಷಯವಾಗಿ ಮಾತನಾಡಿದರು. ಅನೇಕ ಟೀಕೆಗಳನ್ನು ಮಾಡಿದರು. ವಯಸ್ಕರ ಮತದಾನ ಪದ್ಧತಿಯ ಮೇರೆ ನಡೆದ ಈ ಚುನಾವಣೆಯಲ್ಲಿ ಯಾರಾರು ಜನರ ಪ್ರೀತಿಯನ್ನು ಗಳಿಸಿದ್ದರೋ. ಯಾರಾರು ಜನರ ವಿಶ್ವಾಸ ಪಡೆದಿದ್ದರೋ ಅವರು ಮಾತ್ರ ಚುನಾಯಿತರಾಗಿ ಬಂ

(ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.)

ದರು. ಸರ್ಕಾರ ಅಥವಾ ಇತರರ ಕೈವಾಡ ಇದರ ಲ್ಲೇನೂ ನಡೆಯಲಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಮೈಸೂರಿನಲ್ಲಿ ನಡೆದ ಈ ಚುನಾವಣೆಯನ್ನು ಇಂಡಿಯಾ ದೇಶದವರೂ ಹೊರಗಿನವರೂನೋಡಿ ಬಹಳ ಚೆನ್ನಾಗಿ ನಡೆದಿದೆಯೆಂದು ತಮ್ಮ ಮೆಚ್ಚುಗೆಯನ್ನು ಕೋರಿಸಿದ್ದಾರೆ. ಕೆಲವರು ಟೀಕೆ ಮಾಡುತ್ತಾ, ಕೆಲವು ನೌಕರರು ಹೀಗೆ ಮಾಡಿದರು, ಹಾಗೆ ಮಾಡಿದರು ಸರ್ಕಾರದವರು ಹೀಗೆ ಮಾಡಿದರು, ಹಾಗೆ ಮಾಡಿದರು ಎಂದು ಹೇಳಿದರು; ಇದು ಸರಿಯಲ್ಲ. ಕೆಲವರು ಚುನಾಯಿತರಾಗಿ ಬಾರದಿರಬಹುದು. ಒಟ್ಟಿನಲ್ಲಿ ಯಾರು ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದರೋ, ಯಾರು ಜನರಿಗಾಗಿ ಕೆಲಸ ಕಾರ್ಯಗಳನ್ನು ಮಾಡಿದ್ದರೋ, ಯಾರು ದೇಶಕ್ಕಾಗಿ ದುಡಿದಿದ್ದರೋ ಅವರು ಚುನಾಯಿತರಾಗಿ ಬಂದ್ದಾರೆ. ಅವರು ಯಾವ ಪಕ್ಷದವರಾಗಲಿ, ಅಂಥವರು ಮಾತ್ರ ಚುನಾಯಿತರಾಗಿ ಬಂದಿದ್ದಾರೆ. ಈಗ ಅವರು ಹೇಳಿದಂತೆ ಸರ್ಕಾರವನ್ನು ಟೀಕೆ ಮಾಡತಕ್ಕದ್ದು ಅವರ ಕರ್ತವ್ಯವೆಂದು, ಮಾಡಲಿ. ಚುನಾವಣೆಯಲ್ಲಿ ಸರ್ಕಾರದ ಕೈವಾಡವಿತ್ತೆಂದು ಹೇಳಿದರು. ಖಂಡಿತವಾಗಿ ಇದು ಸರಿಯಲ್ಲ. ಚುನಾವಣೆ ನಡೆಯಬೇಕಾದರೆ ಇಷ್ಟೊಂದು ಬಂದೋಬಸ್ತು ಮಾಡಿದ್ದುದನ್ನು ಅವರ ಜೀವಮಾನದಲ್ಲೇ ಅವರು ನೋಡಿರಲಾರರೆಂದು ನಾನು ಎದೆ ಮುಟ್ಟಿಹೇಳಬಲ್ಲೆ. ನಮ್ಮಾರು ಇಪ್ಪತ್ತು ವರ್ಷಗಳ ಕಾಲ ನಾನು ಚುನಾವಣೆಗಳಲ್ಲಿ ಭಾಗವಹಿಸಿದ್ದೇನೆ; ಚುನಾವಣೆಯಲ್ಲಿ ಇಷ್ಟು ಬಂದೋಬಸ್ತು ಇಷ್ಟು ಚೆನ್ನಾಗಿ ಯಾವ ಕಾಲದಲ್ಲಿಯೂ ನಡೆದಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಚುನಾವಣೆಗಳು ಸರಿಯಾಗಿ ನಡೆಯಬೇಕು, ಹೀಗೆಯೇ ನಡೆಯಬೇಕು, ಅಧಿಕಾರಿಗಳಾರೂ ಭಾಗವಹಿಸಕೂಡದು ಎಂದು ಕಟ್ಟುಮಾಡಿ, ಬಹಳ ಚೆನ್ನಾಗಿ, ಸುವ್ಯವಸ್ಥೆಯಿಂದ ನಡೆಸಿದ್ದಾರೆ. ಏನೋ ವಿರೋಧಿಸಬೇಕೆಂದು ಟೀಕೆ ಮಾಡುತ್ತಾರೆಯೇ ಹೊರತು ಬೇರೇನೂ ಅಲ್ಲ.

ಇನ್ನೊಂದು ವಿಚಾರ ಹೇಳಿದರು. ಸರ್ಕಾರದವರು ಕೆಲಸ ಕಾರ್ಯಗಳನ್ನು ಚೆನ್ನಾಗಿ ಮಾಡಿಲ್ಲ ಎಂದು ಹೇಳಿದರು. ಯಾವ ದೇಶದ ಇತಿಹಾಸವನ್ನು ನೋಡಿದರೂ ಕೂಡ ಒಂದು ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಯಾವ ಒಂದು ಕೆಲಸವನ್ನೂ ಪೂರ್ತಿಯಾಗಿ ಮಾಡುವುದಕ್ಕಾಗುವುದಿಲ್ಲವೆಂದು ಗೊತ್ತಾಗುತ್ತದೆ. ಚಕ್ರವರ್ತಿ ರಾಜಗೋಪಾಲಾಚಾರ್ಯರು ಹೇಳಿದಮಾತು ಜ್ಞಾಪಕಕ್ಕೆ ಬರುತ್ತದೆ. ತಂದೆ ಮಗ ಇದ್ದರಂತೆ: ಅವರು ಮಾವಿನ ಗಿಡ ಹಾಕಿದರು. ಪ್ರತಿದಿನವೂ ಬೆಳಿಗ್ಗೆ ನೀರು ಹಾಕುವುದು ಮತ್ತು ಅದನ್ನು ಎತ್ತಿ ಅದು ಬೇರು ಬಿಟ್ಟಿದಿಯೋ ಇಲ್ಲವೋ ಎಂದು ನೋಡುವುದು. ಹೀಗೆ ಮಾಡುತ್ತಿದ್ದರಂತೆ. ಸರ್ಕಾರ ಬಂದ ಕೂಡಲೇ ಏಮ ಕೆಲಸ ಮಾಡಬಹುದು? ಇದಕ್ಕೆ ಕಾರಾವಕಾಶ ಬೇಕು. ಹತ್ತಾರುವರ್ಷಬೇಕು. ನಾಲ್ಕಾರು ಚುನಾವಣೆಗಳು ಕಳೆದ ಮೇಲೆ, ಇಂತಿಂತಹ ಕೆಲಸ ಮಾಡಿಲ್ಲ ಸರ್ಕಾರ ಎಂದು ಟೀಕೆ ಮಾಡಬಹುದೇ ಹೊರತು ನಾಲ್ಕೈದು ವರ್ಷದಲ್ಲೇ ಸರ್ಕಾರ ಏನೂ ದೊಡ್ಡ ಕಾರ್ಯ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ.

12-30 P.M.

ಅನೇಕ ಜನರು ಈ ರೀತಿಯಾಗಿ ಒಂದು ಒಳ್ಳೆಯ ಅಭಿಪ್ರಾಯ ಪಟ್ಟಿದ್ದಾರೆ. ನಮ್ಮ ಮಂತ್ರಿಮಂಡಲ ಬಂದನಂತರ ಅನೇಕ ಕೆಲಸಕಾರ್ಯಗಳು ಬಹಳ ಯಶಸ್ವಿಯಾಗಿ ನಡೆದುಕೊಂಡು ಬಂದಿರುತ್ತವೆಂದು ನಾನು ಹೇಳಬೇಕಾದದ್ದೇ ಇಲ್ಲ. ಈ ವಿಚಾರ ಅನೇಕ ಪತ್ರಿಕೆಗಳಲ್ಲೆಲ್ಲಾ ಬರುತ್ತಲೇ ಇದೆ. ಅದನ್ನು ನಾನೂ ಓದಿದ್ದೇನೆ. ಹಿಂದಿನ ಸರ್ಕಾರ 10—15 ವರ್ಷಗಳಲ್ಲಿ ಕೂಡ ಮಾಡಲಾಗದಿದ್ದಂಥ ಕೆಲಸ ಕಾರ್ಯಗಳನ್ನು ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರ ಬಂದ ಕೇವಲ 4—5 ವರ್ಷಗಳಲ್ಲೇ ಅವುಗಳನ್ನು ಮಾಡಿರುತ್ತದೆ. ಇದನ್ನು ನಾನೊಂದು ಹೆಮ್ಮೆಯಿಂದ ಹೇಳಬೇಕಾಗಿದೆ.

ಇನ್ನು ಈಗ ಅಧಿಕಾರದಲ್ಲಿರತಕ್ಕ ಸರ್ಕಾರದವರು ವಿದ್ಯಾ ಪ್ರಗತಿಗಾಗಿ ಹೆಚ್ಚಿನ ದುಡ್ಡನ್ನು ಖರ್ಚುಮಾಡಿ, ಬಹಳ ಶ್ಲಾಘನೀಯವಾದ ಕೆಲಸಗಳನ್ನು ಮಾಡಿದ್ದಾರೆ. ಇದು ಅನೇಕರಿಗೆ ಮನಪಟ್ಟಾಗಿರುವ ವಿಚಾರವಾಗಿದೆ. ಅದರೆ ಯಾವ ಸರ್ಕಾರವೇ ಅಧಿಕಾರಕ್ಕೆ ಬರಲಿ ಎಲ್ಲ ಜನರನ್ನೂ ಮತ್ತು ಎಲ್ಲ ರೀತಿಯಿಂದ ಇಡೀ ದೇಶವನ್ನೇ ತೃಪ್ತಿಪಡಿಸಿಹೊಂದುವಂತೆ ಮಾಡಲು ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಅಂತೂ ಇಂದಿನ ವಿದ್ಯಾಭ್ಯಾಸದಲ್ಲಿ ಅನೇಕ ಬದಲಾವಣೆಗಳಾಗಬೇಕು. ಆ ಬಗ್ಗೆ ಈಗಾಗಲೇ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಆದರೆ ಹಿಂದಿನ ಕಾಲದ ಎಸ್. ಎಸ್. ಎಲ್. ಸಿ. ಪಾಸ್ ಮಾಡಿರತಕ್ಕ ಒಬ್ಬ ಮನುಷ್ಯನಿಗಿರುವ ಜ್ಞಾನಾರ್ಜನೆ ಇಂದು ಬಿ.ಎ. ಪಾಸ್ ಮಾಡಿರತಕ್ಕ ಮನುಷ್ಯನಿಗಿರುವುದಿಲ್ಲ. ಎಂದರೆ ಇಂದಿನ ವಿದ್ಯಾಭ್ಯಾಸಕ್ರಮ ಅಷ್ಟು ಕೆಳಮಟ್ಟಕ್ಕೆ ಬಂದಿದೆ. ಆದುದರಿಂದ—ಈಗಿನ ಸರ್ಕಾರ ಈ ಅಂಶಗಳನ್ನೆಲ್ಲಾ ಆಲೋಚನೆ ಮಾಡಿದುದರಿಂದಲೇ, ಇದನ್ನು ಸೂಕ್ತರೀತಿಯಲ್ಲಿ ಬದಲಾಯಿಸಬೇಕೆಂಬ ಆಲೋಚನೆ ಮಾಡಿದ್ದಾರೆ; ಸದ್ಯದಲ್ಲೇ ಬದಲಾವಣೆ ಆಗುತ್ತದೆ.

ಇನ್ನು ಕೈಗಾರಿಕೆಗಳ ವಿಚಾರ: ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿರುವಂತೆ ಇಲ್ಲಿಯೂ ಇನ್ನು ಮುಂದಕ್ಕೆ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ಮುಂದುವರಿಸಿ, ಜನರಿಗೆ ಹೆಚ್ಚಿನ ಜೀವನೋಪಾಯದ ಸೌಲಭ್ಯಗಳನ್ನು ಕಲ್ಪಿಸಬೇಕಾದದ್ದು ಬಹು ಮುಖ್ಯ ವಿಚಾರ. ಬರಿಯ ಬಿ.ಎ., ಎಲ್.ಎಲ್.ಬಿ., ಇತ್ಯಾದಿಗಳನ್ನು ಮಾಡಿದವರಿಗೆ ಸ್ವತಂತ್ರವಾಗಿ ಜೀವನ ಮಾಡತಕ್ಕ ಚೈತನ್ಯವಿರುವುದಿಲ್ಲ. ಆದುದರಿಂದ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಕೈಗಾರಿಕಾ ಪಾಠಶಾಲೆಗಳನ್ನು ತೆರೆದು, ವಿದ್ಯಾರ್ಥಿಗಳಿಗೆ ನಾನಾ ಉಪಕಸಬುಗಳ ತಿಳುವಳಿಕೆಯನ್ನು ಹುಟುಮಾಡಿ, ತನ್ಮೂಲಕ ಅವರು ಸುಲಭವಾಗಿ ಜೀವನೋಪಾಯಗಳನ್ನು ನಡೆಸಿಕ್ಕೊಂಡು ಹೋಗುವಂತೆ ಮಾಡಬೇಕೆಂದು ಸೂಚಿಲಿಚ್ಚಿಸುತ್ತೇನೆ. ಈ ವಿಚಾರವಾಗಿ ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಒಂದು ಕೈಗಾರಿಕಾ ಪಾಠಶಾಲೆಯನ್ನು ತೆರೆಯತಕ್ಕ ಬಗ್ಗೆ ಜಿಲ್ಲಾ ಬೋರ್ಡಿನವರಿಂದ 25 ಸಾವಿರ ರೂಪಾಯಿಗಳನ್ನು ಗ್ರಾಮಸ್ಥರುಗಳಿಂದ 25 ಸಾವಿರ ರೂಪಾಯಿಗಳನ್ನು ವಸೂಲುಮಾಡಿಕೊಡರಾಗಿದೆ. ಇದರಿಂದ ಮೂರು ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುತ್ತದೆ. ಈ ಸಂಬಂಧವಾಗಿ ನಮ್ಮ ಸರ್ಕಾರದವರು ಬಹಳ ತೀವ್ರಾಸಕ್ತಿಯುಳ್ಳವರಾಗಿರುವುದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ.

ಇನ್ನು ವಯಸ್ಕರ ವಿದ್ಯಾಶಿಕ್ಷಣದ ಬಗ್ಗೆ ಈಗಾಗಲೇ ಟೀಕೆಗಳು ಸುರಿಮಳೆಯಾಗಿದೆ. ಆದರೆ ನಾನು ಹೆಚ್ಚಾಗಿ ಈ ಬಗ್ಗೆ ಏನನ್ನೂ ಹೇಳದೆ, ಯಾವ ಊರಿನ ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಅಂಥ ಅನುಮಾನವಿದೆಯೋ, ಅವರು ನನ್ನ ಜೊತೆಯಲ್ಲಿ ಬರಲಿ, ನಾನು ನಮ್ಮ ಜಿಲ್ಲೆಯಲ್ಲಿ

ಇದು ಎಷ್ಟರಮಟ್ಟಿಗೆ ಯಶಸ್ವಿಯಾಗಿ ನಡೆಯುತ್ತಿದೆ ಮತ್ತು ಇದರಿಂದ ಎಷ್ಟರಮಟ್ಟಿನ ಉಪಕಾರ ದೇಶಕ್ಕೆ ಆಗಿದೆ ಎಂಬುದನ್ನು ಅವರಿಗೆ ಕಣ್ಣಾರ ತೋರಿಸುತ್ತೇನೆ. ವಾನ್ಪ್ರವಾಂಶ ಹೀಗಿರುವಾಗ ಸುಮ್ಮನೆ ಟೀಕೆ ಮಾಡಿದರೆ ಅದನ್ನು ಯಾರೂ ಒಪ್ಪುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ನಮಗೆ ಅಲ್ಲೊಂದು ಆಕ್ಯುಪೇಷನರ್ ಸ್ಕೂಲು ಬೇಕು, ಇಲ್ಲೊಂದು ಆಕ್ಯುಪೇಷನರ್ ಸ್ಕೂಲು ಬೇಕು; ಎಂಬ ಈ ವಿಚಾರಗಳನ್ನೆಲ್ಲಾ ಈಗ ಹೇಳುವುದು ಅನುಚಿತವೆಂಬ ಅಂಶವನ್ನು ನಾನು ಅಧ್ಯಕ್ಷರ ಗಮನಕ್ಕೆ ತರುತ್ತೇನೆ.

ಶ್ರೀ ವೈ.ಯಂ. ಚಂದ್ರಶೇಖರಯ್ಯನವರು.—ಸ್ವಾಮಿ ಇನ್ನು ಅನೇಕರು ವಯಸ್ಕರ ಮತದಾನದ ಮೇಲೆ ವಿಶೇಷವಾಗಿ ಟೀಕೆಗಳನ್ನು ಮಾಡಿದ್ದಾರೆ. ಆದರೆ ಟೀಕೆಗಳನ್ನೇನೋ ಮಾಡಬೇಕಾದದ್ದೇ ಸರಿ. ಅದು ಎಂಥ ಕೆಲಸವೇ ಆಗಿರಲಿ, ಒಂದು ದೊಡ್ಡ ಕೆಲಸ ನಡೆಯುವಾಗ ಅದರಲ್ಲಿ ಅಲ್ಪ ಸ್ವಲ್ಪ ದೋಷದೋಷಗಳಿದ್ದೇ ಇರುತ್ತವೆ ಆದರೆ, ಅದನ್ನು ನಾವು ಅಷ್ಟೊಂದು ಅಗಾಧವಾಗಿ ದೊಡ್ಡದೆಂದೇನೂ ಭಾವಿಸಬೇಕಾಗಿಲ್ಲ.

ಆದರೆ ಒಂಭತ್ತು ಜಿಲ್ಲೆಗಳಲ್ಲಿಯೂ ವಯಸ್ಕರ ಶಿಕ್ಷಣ ಸಮಿತಿಗಳಿದ್ದೇ ಇವೆ. ಆ ಪೈಕಿ ನನಗೆ ಗೊತ್ತಿರುವಂತೆ ಮೈಸೂರು ಜಿಲ್ಲೆಯ ಕೆಲವು ಸಮಿತಿಗಳೂ ಮತ್ತು ನಮ್ಮ ಜಿಲ್ಲೆಯಲ್ಲಿರತಕ್ಕ ವಯಸ್ಕರ ಶಿಕ್ಷಣ ಸಮಿತಿಗಳೂ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಇದು ಸರಿಯಿಲ್ಲ ಎಂದು ಸವಾಲ್ ಹಾಕತಕ್ಕವರು ಯಾರಾದರೂ ಇದ್ದರೆ ಅವರು ಮುಂದೆ ಬರಲಿ ಎಂದು ನಾನು ಸವಾಲ್ ಹಾಕುತ್ತೇನೆ. ಹಾಗೆ ಅವು ಯಶಸ್ವಿಯಾಗಿ ಅಲ್ಲಿ ಕೆಲಸ ನಡೆಸುತ್ತಿವೆಯೆಂದು ಅವರಿಗೆ ತೃಪ್ತಿಯಾದರೆ, ಆಗ ಅವರೂ ಇದಕ್ಕೆ ಅವರ ಬೆಂಬಲ ನೀಡಲಿ, ತೃಪ್ತಿಯಾಗದಿದ್ದರೆ ಬೇಡ. ಈ ವಯಸ್ಕರ ಶಿಕ್ಷಣ ಪದ್ಧತಿ ಜಾರಿಗೆ ಬಂದ ಮೇಲೆ ನಮ್ಮ ಗ್ರಾಮಾಂತರದ ಜನರಿಗೆ ಬಹಳ ಅನುಕೂಲವಾಗಿದೆ. ಇದಕ್ಕೆ ನಮ್ಮ ಮೈಸೂರು ಸರ್ಕಾರದವರು ಬಹಳ ಸಹಾಯಮಾಡಿದ್ದಾರೆ, ಮಾಡುತ್ತಲೂ ಇದ್ದಾರೆ. ಈ ನಮ್ಮ ವಯಸ್ಕರ ಶಿಕ್ಷಣ ಪದ್ಧತಿಯು ಇಲ್ಲಿ ಕಾರ್ಯಾಚರಣೆ ಮಾಡುತ್ತಿರುವುದರ ಬಗ್ಗೆ ಇಂಡಿಯಾದೇಶದ ಇತರ ಪ್ರಾಂತಗಳವರು, ಇಲ್ಲಿಗೆ ಬಂದಿದ್ದಾಗ್ಗೆ, ಇದರ ಬಗ್ಗೆ ಅವರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಹೈದರಾಬಾದಿನವರೂ ಕೂಡ ಇಲ್ಲಿಗೆ ಬಂದು ನಮ್ಮ ವಯಸ್ಕರ ಶಿಕ್ಷಣ ಪದ್ಧತಿಯನ್ನು ನೋಡಿ, ಬಹಳವಾಗಿ ಮೆಚ್ಚಿಕೊಂಡು, ಇದೇ ಮಾದರಿಯಲ್ಲಿ ಅವರು ಅಲ್ಲಿಯೂ ಜಾರಿಗೆ ತರಬೇಕೆಂಬ ಅಭಿಪ್ರಾಯವನ್ನೂ ಕೂಡ ವ್ಯಕ್ತಪಡಿಸಿದ್ದಾರೆ. ಕೆಲವು ಹಳ್ಳಿಗಳಲ್ಲಿ ಪುಸ್ತಕ ಭಂಡಾರಗಳನ್ನು ಏರ್ಪಡಿಸಲಾಗಿದೆ. ಇದರಿಂದ ಹಳ್ಳಿಯ ಜನರು ತಮ್ಮ ಕೆಲಸಕಾರ್ಯಗಳು ಮುಗಿದಮೇಲೆ, ಆ ಪುಸ್ತಕಭಂಡಾರಗಳಿಗೆ ಹೋಗಿ ತಮ್ಮ ಕಾಲವನ್ನು ಸಂತೋಷವಾಗಿ ಕಳೆಯಲು ಒಂದು ಸದವಕಾಶವುಂಟಾದುದಕ್ಕಾಗಿ ಬಹಳ ಸಂತೋಷಭರಿತರಾಗಿದ್ದಾರೆ.

ಅಧ್ಯಕ್ಷರು.—ನೀವು ವಿಷಯಗಳನ್ನು ಬಹಳ ಲಂಬಿಸುವುದಕ್ಕೆ ಹೋಗುತ್ತಿದ್ದೀರಿ. ಇನ್ನು ನಿಮಗೆ ಎರಡು ನಿಮಿಷ ಮಾತ್ರ ಮಾತನಾಡುವ ಅವಕಾಶವಿದೆ. ಅಷ್ಟರಲ್ಲಿ ನಿಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ನಾನು ಈಗ ತಿಳಿಸಬೇಕೆಂದಿದ್ದ ವಿಚಾರಗಳು ಇನ್ನೂ ಬಹಳವಾಗಿದ್ದವು. ಆದರೆ ಅದಕ್ಕೆ ಸಾಕಷ್ಟು ಕಾಲಾವಕಾಶವಿಲ್ಲ.

ನಮ್ಮ ಮೈಸೂರು ದೇಶದಲ್ಲಿ ಅತಿ ಜರೂರಾಗಿ ನಡೆಯಬೇಕಾಗಿರತಕ್ಕ ಕೆಲಸಗಳು ಅನೇಕವಾಗಿವೆ. ಅದರ ಬಗ್ಗೆ ನಮ್ಮ ಸರ್ಕಾರದವರೂ ಬಹಳ ತೀವ್ರಾಸಕ್ತಿಯುಳ್ಳವರಾಗಿದ್ದಾರೆ.

ಈಗಾಗಲೇ ಆಹಾರ ಸಾಮಗ್ರಿಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಲು ಇದ್ದ ನಿರ್ಬಂಧವನ್ನು ತೆಗೆದುಹಾಕಿದ್ದಾರೆ. ಇದರಿಂದ ಅನೇಕರಿಗೆ ಅನುಕೂಲವಾಗಿದೆ. ಈಗ ನಮ್ಮ ಕಡೂರು ತಾಲ್ಲೂಕಿನಲ್ಲಿ ಅನೇಕ ಸಂತೆಗಳಿಗೆ ಅಕ್ಕಿ ಗಾಡಿಗಟ್ಟರೆ ಬಂದು ಬೀಳುತ್ತದೆ. ಮೊನ್ನೆ ಕಡೂರು ಸಂತೆಗೆ 50 ಗಾಡಿ ಅಕ್ಕಿ ಬಂದಿತ್ತು. ಒಂದು ನಿದರ್ಶನ ನನ್ನ ಕಣ್ಣೆದುರಿಗೆ ನಡೆದಿದ್ದನ್ನು ಈಗ ತಮ್ಮೆಲ್ಲರಿಗೂ ತಿಳಿಸಲಿಚ್ಛಿಸುತ್ತೇನೆ. ಒಬ್ಬ 50-60 ವರ್ಷದ ಮುದುಕ ಹಾಗೆ ಸಂತೆಯಲ್ಲಿ ದೊಡ್ಡದಾಗಿ ಬಿದ್ದಿದ್ದ ಅಕ್ಕಿ ರಾಸಿಯನ್ನು ನೋಡಿದಕೂಡಲೆ ಅದಕ್ಕೆ ಅಡ್ಡಬಿದ್ದು ಬಿಟ್ಟ. ಇದೇನೂ ಒಂದು ಕಟ್ಟುಕಥೆಯಲ್ಲ. "ಹತ್ತು ವರ್ಷಗಳಿಂದಲೂ ಮುಖ ಕಾಣಿಸದಂತಿದ್ದ ಅಕ್ಕಿ ಈಗ ಹೀಗೆ ರಾಸಿ ರಾಸಿಯಾಗಿ ಬಿದ್ದಿರುವುದು, ಕುರುಡನಿಗೆ ಕಣ್ಣು ಬಂದಂತಾಗಿದೆ" ಎಂದು ಆತ ಹೇಳಿದ.

ಒಂದು ಅಚ್ಚುಮೆಚ್ಚಿನ ಭಾಷಣವನ್ನು ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರುವುದಕ್ಕಾಗಿ ನಾವು ಅವರನ್ನು ಬಹಳವಾಗಿ ವಂದಿಸಬೇಕಾಗಿದೆ. ಈಗ ಆಹಾರ ಸಾಮಗ್ರಿಗಳ ಸಾಗಾಣಿಕೆಗೆ ಹೇಗೆ ನಿರ್ಬಂಧವನ್ನು ತಪ್ಪಿಸಿದ್ದಾರೋ, ಅದರ ಜೊತೆಗೆ ಈ ಹತೋಟಿ ಆಜ್ಞೆಗಳನ್ನು ಕೂಡ ತೆಗೆದುಹಾಕುವುದು ಒಳ್ಳೆಯದೆಂದು ಸೂಚಿಸಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀಮತಿ ಸುಬ್ಬಮ್ಮನವರು, ಮಾತನಾಡಬಹುದು.

Sri Mulka GOVINDA REDDY.—When the Leader of the Opposition said that the amendments tabled by some of the members would not be moved, it was agreed that they would be given an opportunity to speak on the main amendment. It is but right that those persons who had sent in amendments may be called upon to speak.

Mr. SPEAKER.—Some of them had taken part yesterday. Sri Gopala Gowda, for instance, spoke already.

Sri Mulka GOVINDA REDDY.—I may point out that comrades Sri Vasan, Sri Rachiah, Sri Madappa, Sri Swamidurai and some others had not taken part in the debate.

Mr. SPEAKER.—they can do so, provided there is time.

Sri Mulka GOVINDA REDDY.—You will have to give time.

Sri B. HUTCHE GOWDA.—Five minutes at least may be given to each member.

Mr. SPEAKER.—There are so many who have not been given opportunities.

(MR. SPEAKER)

to speak. The debate will continue till 1 P.M. Each member will have five minutes to speak.

ಶ್ರೀಮತಿ ಬಿ. ಎಚ್. ಸುಬ್ಬಮ್ಮನವರು (ಚಿಕ್ಕಮಗಳೂರು–ಮೂಡಿಗೆರೆ):–ಅಧ್ಯಕ್ಷರೇ, ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ ಭಾಷಣದ ಮೇಲೆ ವಿಫುಲ ಚರ್ಚೆ ನಡೆದಿದೆ. ಆಹಾರ, ವ್ಯವಸಾಯ ಮತ್ತು ಕೈಗಾರಿಕೆ ವಿಚಾರದಲ್ಲಿ ಸದಸ್ಯರು ಬಹಳ ಚರ್ಚೆ ನಡೆಸಿ ಅನೇಕ ಸ್ವಾರಸ್ಯವಾದ ಮತ್ತು ಸೂಕ್ತವಾದ ಸಲಹೆಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಆದರೆ ಇನ್ನು ಕೆಲವರು ಈ ಸರ್ಕಾರದವರು ಅಧಿಕಾರವನ್ನು ವಹಿಸಿಕೊಂಡ ತರುಣದಲ್ಲೇ ಹತೋಟಿ ವಿಚಾರದಲ್ಲಿ ಕೈಹಾಕಿ ಜನರಿಗೆ ಇರುವ ಅನಾನುಕೂಲಗಳನ್ನು ತಪ್ಪಿಸುವುದಕ್ಕಾಗಿ ಮಾಡುತ್ತಿರುವ ಕಾರ್ಯಕ್ರಮಗಳ ಮೇಲೆ ಬಹಳ ಆಕ್ಷೇಪಪೆತ್ತಿದ್ದಾರೆ. ಅದನ್ನು ನೋಡಿದರೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. ಹತೋಟಿ ಆಜ್ಞೆ ಬಂದು ಸುಮಾರು ಹತ್ತು ವರ್ಷಗಳಾಗಿರಬೇಕು. ಅದರಿಂದ ರೈತಾಪಿ ಜನರಿಗೆ ಎಷ್ಟು ಕಷ್ಟ ಮತ್ತು ಅನಾನುಕೂಲವುಂಟಾಗಿದೆ ಎಂಬುದನ್ನು ಯೋಚನೆ ಮಾಡಿ ಈ ಸರ್ಕಾರದವರು ಅಧಿಕಾರ ವಹಿಸಿದ ಕೂಡಲೆ ಜನರ ಹಿತವನ್ನು ಕಾಪಾಡಲು ಹತೋಟಿ ವಿಷಯದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದರು. ಅದರಿಂದ ಜನರಿಗೆಷ್ಟೋ ಸಂತೋಷವಾಗಿದೆ. ಅಕ್ಕಿಯನ್ನು ಕೊಂಡುಕೊಳ್ಳಲು ಎಲ್ಲರಿಗೂ ಶಕ್ತಿಯಿಲ್ಲದಿದ್ದರೂ ಹೊರಗಡೆ ಅಕ್ಕಿಯನ್ನಾದರೂ ನೋಡಿ ಸಂತೋಷ ಪಡುವ ಸ್ಥಿತಿಯಿದೆ. ಕಾಳನಂತೆ ವ್ಯಾಪಾರ ಮಾಡಿ ಸಂಪಾದಿಸುವುದಕ್ಕೆ ಅನುಕೂಲವಿಲ್ಲದ ಹಾಗೆ ತಡೆ ಮಾಡುವುದು ಅವಶ್ಯಕ, ಹತೋಟಿ ಮೊದಲು ತೆಗೆಯಬೇಕು ಎಂದು ಕೆಲವರು ಹೇಳುತ್ತಾರೆ. ಅದನ್ನು ಒಪ್ಪೋಣ. ಸರ್ಕಾರ ಸರಿಯಾಗಿ ಆಡಳಿತ ನಡೆಸುವುದಕ್ಕೆ ಪ್ರಜೆಗಳ ಸಹಕಾರ ಬೇಕು. ಸರ್ಕಾರ ಕಾನೂನ ರೀತಿಯಲ್ಲಿ ಪ್ರಜೆಗಳು ದವಸವನ್ನು ಬೇರೆ ಕಡೆಗೆ ಸಾಗಿಸುತ್ತಾ ಅನೀತಿಯನ್ನು ನುಸರಿಸಿದರೆ ಅದಕ್ಕೆ ಜವಾಬ್ದಾರರು ಯಾರು ಎಂದು ತಿಳಿದು ಸರ್ಕಾರಕ್ಕೆ ಸಹಾಯ ಮಾಡಿ ಅವರು ಹತೋಟಿಯನ್ನು ಸಂಪೂರ್ಣವಾಗಿ ತಪ್ಪಿಸಲು ಪ್ರಜೆಗಳು ಸಹಕಾರ ನೀಡಬೇಕಾದದ್ದು ಆವಶ್ಯಕ; ಅದು ಮೊದಲನೆಯ ಕರ್ತವ್ಯ.

ಚುನಾವಣೆ ವಿಚಾರದಲ್ಲಿ ಕೆಲವು ಅಂಶಗಳನ್ನು ಹೇಳಿದರು. ಮಾನ್ಯ ಸದಸ್ಯರೊಬ್ಬರು ಹೆದರಿಸಿ ಓಟನ್ನು ಪಡೆದರೆಂದು ಹೇಳಿದರು. ಅದು ನಿಜವಲ್ಲ, ನಮ್ಮಲ್ಲಿ ಅನೇಕರು ಹೆಣ್ಣುಮಕ್ಕಳು ಬಾಣಂತಿಯಾಗಿದ್ದವರು ಸಹ ಬಂದು ಓಟು ಮಾಡಿದರು. ಆದರೆ ಅವರು ಆ ರೀತಿ ಮಾಡಿದ್ದು ಹೆದರಿಕೊಂಡಲ್ಲ. ಈಗ ಜನರಿಗೆ ಅವರ ಹಕ್ಕುಭಾಧ್ಯತೆಗಳು ಗೊತ್ತು. ಮೂಡಿಗೆರೆ ತಾಲ್ಲೂಕಿನಲ್ಲಿ ಶೇಕಡ 80 ರಿಂದ 90 ರವರೆಗೆ ಓಟು ಮಾಡಿದರು. ಆದರೆ ಅವರು ಜವಾಬ್ದಾರಿಯಿಂದ ಮಾಡಿದರೇ ಹೊರತು ಹೆದರಿಕೊಂಡಲ್ಲ. ಜನರು ದಕ್ಷತೆಯಿಂದ ಚುನಾವಣೆ ಮಾಡಿದ್ದಾರೆ, ಜನರ ಸಹಕಾರವಿದೆ ಎಂದು ನಿರ್ವಂಚನೆಯಿಂದ ಹೇಳಬಲ್ಲೆ. ನನ್ನ ಮಿತ್ರರೊಬ್ಬರು ಹರಿಜನರ ವಿಚಾರ ಮಹಾರಾಜರ ದೃಷ್ಟಿಯಲ್ಲಿದೆಯೆ ಎಂದು ಶಂಕಿಸಿದರು. ಅದನ್ನು ಕೇಳಿ ತುಂಬಾ ವ್ಯಸನವಾಯಿತು. ಹರಿಜನರು ದೀನದರಿದ್ರರಾಗಿದ್ದು ಅವರನ್ನು ಕೇಳುವವರೇ ಇಲ್ಲದಿರುವಾಗ ಮಹಾತ್ಮ ಗಾಂಧಿಯವರು ನಿರ್ಮಿಸಿದ ಸಂಸ್ಥೆ ಅವರ ಉದ್ಧಾರಕ್ಕಾಗಿ ಎಷ್ಟೋ ಧಾಡಿದೆ. ಅವರಿಗೆ ಬೇಕಾದಷ್ಟು ಸ್ಥಾನ ಮಾನಗಳನ್ನು ಕೊಟ್ಟಿದೆ; ಅಂಥಾದ್ದಕ್ಕೆಲ್ಲಾ ಪ್ರಯತ್ನಪಟ್ಟು ಅವಕಾಶ ನೀಡಿ ಸಹಾಯ ಮಾಡಿರುವುದು ಕಾಂಗ್ರೆಸ್, ಸಂಸ್ಥೆಯಲ್ಲದೆ ಮತ್ತೆ ಬೇರೆ ಯಾವ ಸಂಸ್ಥೆಯೂ ಅಲ್ಲ ಎಂದು ಘಂಟಾಘೋಷವಾಗಿ ಹೇಳಬಲ್ಲೆ. ಹರಿಜನರಿಗೆ ವಿದ್ಯಾಭ್ಯಾಸದಲ್ಲಿ ಪ್ರೋತ್ಸಾಹ ನೀಡಿದ್ದಾರೆ, ಜಮೀನನ್ನು ಕೊಡುತ್ತಿದ್ದಾರೆ. ಹೀಗೆ ಅನೇಕ ರೀತಿಯಲ್ಲಿ ಸಹಾಯ ಮಾಡುತ್ತಿದ್ದಾರೆ. ಕಾಂಗ್ರೆಸ್ ಸಂಸ್ಥೆ ಸ್ಥಾಪಿತವಾದ ಮೇಲೆ ಮತ್ತು ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಇದೆಲ್ಲಾ ಸಹಾಯವೂ ಒದಗಿದೆಯೆಂದು ನಿರ್ವಂಚನೆಯಿಂದ ಹೇಳುತ್ತಿದ್ದೇನೆ. ಇದರಲ್ಲಿ ಪಕ್ಷಪಾತವೇನೂ ಇಲ್ಲ. ಇನ್ನೊಂದು ಪಕ್ಷದವರ ಆಕ್ಷೇಪಣೆಗಳಿಗೆ ನಾನು ಹೇಳುತ್ತಿರುವುದು ಪ್ರತ್ಯುತ್ತರವಲ್ಲ ಎಂದು ನಿಜವಾಗಿ ಹೇಳಬೇಕಾಗಿದೆ. ಈಗ ಕೋಲಾರದ ಕ್ಷಾಮದ ವಿಚಾರ ಹೇಳಿದರು. ಅದಕ್ಕೆ ಭಾಷಣ ಮಾಡಿದರೆ ಪ್ರಯೋಜನವಿಲ್ಲ. ವ್ಯವಸಾಯಕ್ಕೆ ಹೆಚ್ಚು ಉತ್ತೇಜನ ಕೊಡಬೇಕು, ಕೆರೆಗಳನ್ನು ದುರಸ್ತು ಮಾಡಬೇಕು, ಎಂದು ಮಾನ್ಯ ಮಿತ್ರರಾದ ಶ್ರೀ ಪಟ್ಟಾಭಿರಾಮಯ್ಯನವರು ಹೇಳಿದರು. ಈಗ ಕ್ಷಾಮ ಪ್ರದೇಶಗಳಲ್ಲಿ ಜನ ನಿಬಿಡತೆ ಹೆಚ್ಚಾಗಿದೆ; ಮರೆನಾಡಿನಲ್ಲಿ ಭೂಮಿಯಿದೆ, ಜನ ಸಂಖ್ಯೆಯಿಲ್ಲ. ಈಗ ಕೋಲಾರದಲ್ಲಿ ದಿವಸಕ್ಕೆ ಸುಮಾರು ಹತ್ತು ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆಹಾರ ಸಾಮಗ್ರಿಗಳನ್ನು ಒದಗಿಸಿರಬಹುದು. ಮರೆನಾಡಿನಲ್ಲಿ ಆರಣ್ಯ ಸಂಪತ್ತು ಬೇಕಾದಷ್ಟಿದೆ. ಬೇಕಾದ ಕೈಗಾರಿಕೆಯ ಸಾಮಾನಿದೆ. ಅದನ್ನು ಉಪಯೋಗಿಸಿಕೊಳ್ಳಬಹುದು. ಹಾಗೆ ಮಾಡದೆ ಆಹಾರದ ಅಭಾವ ಎಂದು ಹೇಳಿದರೆ ಯಾವ ಸರ್ಕಾರ ತಾನೆ ಏನು ಮಾಡಬಹುದು? ಜನರು ಕಷ್ಟಪಡಬೇಕು. ಅದು ಓಟ್ಟು ಕೆರೆ ಕಟ್ಟಿಸಬೇಕು, ಸಹಾಯ ಮಾಡಬೇಕು ಎಂದು ಸುಮ್ಮನೆ ಭಾಷಣಮಾಡಿದರೆ ಪ್ರಯೋಜನವಿಲ್ಲ. ನೀರಾವರಿ ಕಾಂಗಾರಿ ಕೆಲಸಗಳಿಗೆ ಬೇಕಾದಷ್ಟು ಸಹಾಯ ಮಾಡಬೇಕು ಎಂದು ಹೇಳಿದ್ದಾರೆ. ಅದಕ್ಕೆ ಬದಲಾಗಿ ಮರೆನಾಡಿನಲ್ಲಿ ಬೇಕಾದಷ್ಟು ಜಮೀನಿದೆ. ಅಲ್ಲಿ ಬಂದು ವ್ಯವಸಾಯ ಮಾಡಬೇಕು. ಕೈಗಾರಿಕೆಗಳನ್ನು ಮಾಡಲು ಅಲ್ಲಿ ಬೇಕಾದಷ್ಟು ಸಾಮಾನಿದೆ. ಬೆತ್ತದ ಕೈಗಾರಿಕೆ ಮಾಡುವುದಕ್ಕೆ ಬೆತ್ತಬೇಕಾದಷ್ಟಿದೆ, ಬಿದರು ಬೇಕಾದಷ್ಟಿದೆ, ಮರಗಳಿವೆ. ಜನರ ವಾಸಕ್ಕೆ ಸೌಕರ್ಯವಿವೆ. ತೊಂದರೆಯೇನೂ ಇಲ್ಲ. ಆದ್ದರಿಂದ ಅಂಥ ಸ್ಥಳದಲ್ಲಿ ಹೋಗಿ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಈಗ ವಿದ್ಯಾಭ್ಯಾಸದ ಕಡೆ ನೋಡಿದರೆ ಸಾವಿರಾರು ಜನರು ಸೀಟುಗಳಿಗೂ, ನೌಕರಿಗಳಿಗೂ ಅರ್ಜಿಹಾಕುತ್ತಿರುವುದನ್ನು ನೋಡಿ ವ್ಯಸನವಾಗಿದೆ. ವಿದ್ಯಾಭ್ಯಾಸ ಮುಗಿದನಂತರ ಎಲ್ಲರೂ ನೌಕರಿಬೇಕೆಂದು ಕೇಳಿದರೆ ಸರ್ಕಾರ ಕೊಡುವುದಕ್ಕೆ ಸಾಧ್ಯವೆ? ಎಲ್ಲರಿಗೂ ಅಗುವಷ್ಟು ನೌಕರಿಗಳನ್ನು ಸೃಷ್ಟಿಮಾಡಲು ಸಾಧ್ಯವೇ? ನೌಕರಿಯನ್ನು ಎಲ್ಲರೂ ಬಿಟ್ಟು ಬಿಡಬೇಕೆಂದು ಹೇಳಬಹುದೇ ಹೊರತು, ಎಲ್ಲರಿಗೂ ಉದ್ಯೋಗ ಕೊಡಲು ಯಾವ ಸರ್ಕಾರಕ್ಕೆ ಶಕ್ತಿಯಿದೆ? ಆದ್ದರಿಂದ ವ್ಯವಸಾಯ, ಕೈಗಾರಿಕೆ ಮುಂತಾದುವನ್ನು ಮಾಡುವುದಕ್ಕೆ ತಕ್ಕ ವೃತ್ತಿಶಿಕ್ಷಣವನ್ನು ಕಲ್ಪಿಸಬೇಕೇ ಹೊರತು ಸರ್ಕಾರಿ ಉದ್ಯೋಗ ಶಿಕ್ಷಣಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬಾರದು ಎಂದು ಸಲಹೆ ಕೊಡುತ್ತೇನೆ.

ಆ ಮೇಲೆ ಇನ್ನೊಂದು ಸಲಹೆಯೇನೆಂದರೆ, ನಮ್ಮ ಸಂಸ್ಥಾನದಲ್ಲಿ ವಾತಾವರಣೋಧವನ್ನು ಜಾರಿಗೆ ತಂದಿದ್ದಾರೆ; ಆದ್ದರಿಂದ ಬಹಳ ಕಡೆಗಳಲ್ಲಿ ಅನಾನುಕೂಲವಾಗಿದೆ. ನಮ್ಮ ಇಡೀ ಸಂಸ್ಥಾನವಲ್ಲಿ ಒಂದು ಕಡೆ

ಅದನ್ನು ಜಾರಿಗೆತಂದು ಇನ್ನೊಂದು ಕಡೆ ತರಬೇ ಇರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಪೂರ್ತಿಯಾಗಿ ಸಂಸ್ಥಾನಾಮಳೆ ಎಲ್ಲಾ ಕಡೆಯೂ ನಿರೋಧ ಮಾಡದೆ ಒಂದು ಕಡೆ ನಿರೋಧ ಮಾಡಿ ಇನ್ನೊಂದು ಕಡೆ ಮಾಡದಿರುವುದು ತುಂಬಾ ಅನ್ಯಾಯ. ಈ ಅನ್ಯಾಯ, ಅನಾನುಕೂಲ ಏನು ಎಂಬುದು ನಮ್ಮ ದೃಷ್ಟಿಗೆ ಬಂದಿದೆ. ಆದ್ದರಿಂದ ಶ್ರೀಮನ್ಮಹಾರಾಜರವರ ಸರ್ಕಾರದವರು ಮತ್ತು ಅಧಿಕಾರದಲ್ಲಿರುವ ಮಂತ್ರಿಗಳು ಇದನ್ನು ಜ್ಞಾಪಕದಲ್ಲಿಟ್ಟು ಪರ್ಯಾಲೋಚನೆ ಮಾಡಕ್ಕ ಕಾರ್ಯಕ್ರಮ ಕೈಗೊಳ್ಳಬೇಕು. ಇದರ ಕಷ್ಟ ಮರೆನಾಡಿನಲ್ಲಿ ನೋಡುವುದಕ್ಕೂ ಅಸಾಧ್ಯ. ಅನೇಕರು ದುಡ್ಡು ಸಂಪಾದನೆ ಮಾಡಲು ಅವಕಾಶವಾಗಿದೆ. ಆದ್ದರಿಂದ ಸಂಪೂರ್ಣವಾಗಿ ತೆಗೆದು ಹಾಕಬೇಕು. ಇಲ್ಲವೆ ಯಾವುದಾದರೂ ಬೇರೆ ರೂಪದಲ್ಲಿ ನೀರಾ ಮಾರಾಟಕ್ಕೆ ಅವಕಾಶ ಕೊಡಬೇಕು ಎಂದು ಹೇಳಬೇಕಾಗಿದೆ. ಜನರು ಪಡುವ ತೊಂದರೆ ನೋಡರಾರದೆ ಇದನ್ನು ನಾನು ಹೇಳುವುದು.

ನಮ್ಮ ಪ್ರಭುಗಳು ಬೇಕಾದಷ್ಟು ಉನ್ನತ ವಿಚಾರಗಳನ್ನೊಳಗೊಂಡು ಭಾಷಣ ಮಾಡಿದ್ದಾರೆ. ಅವರು ಉದಾರಿಗಳು. 30 ಸಾವಿರ ರೂಪಾಯಿಗಳನ್ನು ಕೋಲಾರದ ಕ್ಷಾಮ ನಿವಾರಣೆಗಾಗಿ ಕೊಡಬೇಕೆಂದು ಹೇಳಿದ್ದಾರೆ. ಹಿಂದೆಯೂ ಬೇಕಾದಷ್ಟು ಸಹಾಯ ಮಾಡಿದ್ದಾರೆ. ನಮ್ಮ ದೇಶ ಅಭಿವೃದ್ಧಿಯಾಗಬೇಕೆಂದು ಬಹಳ ಸಲಹೆ ನೀಡಿದ್ದಾರೆ. ಆದ್ದರಿಂದ ಪ್ರಭುಗಳ ಭಾಷಣವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶ್ರೀ ಎ. ಆರ್. ನಾಯ್ಡುರವರು (ಮಲ್ಲೇಶ್ವರಂ).—ಅಧ್ಯಕ್ಷ ಮಹಾಶಯರೇ, ಈಗ ತಾನೇ ನಮ್ಮ ಸದಸ್ಯರ ನೇಕರು ಶ್ರೀಮನ್ಮಹಾರಾಜರವರ ಭಾಷಣವನ್ನು ಸ್ವಾಗತಿಸಿದ್ದಾರೆ. ಅದರಲ್ಲಿ ನಾನೂ ಒಬ್ಬ. ನಮ್ಮ ಮುಂದೆ ಇಂದು ಮುಖ್ಯವಾದ ಪ್ರಶ್ನೆಯಿದೆ. ಪ್ರಭುಗಳ ಭಾಷಣವನ್ನು ಸ್ವಾಗತಿಸುತ್ತಾ ಚುನಾವಣೆ ವಿಚಾರದಲ್ಲಿ ಅನೇಕ ಸದಸ್ಯರು ಒಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ. ಕೆಲವು ವಿರೋಧ ಪಕ್ಷದ ಸದಸ್ಯರು ತಮ್ಮ ಪಕ್ಷದ ಧ್ಯೇಯಕ್ಕನುಸಾರವಾಗಿ ವಿರೋಧ ಭಾವನೆಯಿಂದ ಹಾಗೆ ಹೇಳುತ್ತಾರೆಂದರೆ ತಪ್ಪಾಗರಾರದು. ಚುನಾವಣಾ ಸಂದರ್ಭದಲ್ಲಿ ಭಾರತ ಅನುಸರಿಸಿದ ರೀತಿ ನೀತಿಯನ್ನು ಜಗತ್ತೇ ಹೊಗಳಿದೆ ಎಂಬುದನ್ನು ಎಲ್ಲಾ ಸದಸ್ಯರೂ ಗಮನಿಸಬೇಕು.

ಎರಡನೆಯ ವಿಷಯ ಆಹಾರಕ್ಕೆ ಸಂಬಂಧಪಟ್ಟುದು. ಅದು ಪ್ರಪಂಚದ ಒಂದು ದೊಡ್ಡ ಸಮಸ್ಯೆಯೆಂದರೆ ತಪ್ಪಲ್ಲ. ಅದರಲ್ಲಿ ಮುಖ್ಯವಾಗಿ ಈಗ ಯೋಚನೆ ಮಾಡಬೇಕಾದ ವಿಷಯ ಕಾಂಗ್ರೆಸ್ ಪಕ್ಷದ ಹೊಸ ಸರ್ಕಾರದ 60 ದಿವಸಗಳ ಒಂದು ರಾಜ್ಯಾಡಳಿತದಲ್ಲಿ ನಮ್ಮ ನಾಯಕರಾದ ಶ್ರೀ ಕೆ. ಹನುಮಂತಯ್ಯನವರು ರಾಜ್ಯಭಾರ ವಹಿಸಿದ ತಕ್ಷಣ ಏನು ಮಾಡಿದರು, ಅದರ ಪರಿಣಾಮವಾಗಿ ಇಂದಿನ ಪರಿಸ್ಥಿತಿ ಹೇಗಿದೆ ಎಂಬುದು. ವಿರೋಧ ಪಕ್ಷ ಅಥವಾ ಯಾವ ಪಕ್ಷವೇ ಆಗಲಿ ಎಲ್ಲರೂ ವಾಸ್ತವಾಂಶವನ್ನು ಯೋಚನೆ ಮಾಡಬೇಕಾದದು ಧರ್ಮ. ಇಂದು ನಮ್ಮ ಮೈಸೂರು ಸಂಸ್ಥಾನದ ವಿಷಯ ಹೇಳುವುದಾದರೆ, ನಮ್ಮ ದೇಶದಲ್ಲಿ ಅಕ್ಕಿ ಎನ್ನುವುದು ಬಂಗಾರಕ್ಕಿಂತ ಹೆಚ್ಚಾದ ದರ್ಜೆಯಲ್ಲಿದ್ದುದು ಈಗ ಎಲ್ಲೆಲ್ಲೂ ಸಿಕ್ಕುತ್ತಿದೆಯೆಂದು ಹೇಳುವ ಸಂತೋಷವಾರ್ತೆ ಕೇಳಿ ಬರುತ್ತಿರುವುದನ್ನು ನೋಡಿದರೆ ಅದು ನಮ್ಮ ಸುಯೋಗವೇ ಸರಿ. ಇನ್ನು 5 ವರ್ಷಗಳ ಅವರ ರಾಜ್ಯಾಡಳಿತದಲ್ಲಿ ರಾಮರಾಜ್ಯವನ್ನು ಸ್ಥಾಪಿಸುವುದರಲ್ಲಿ ಸಂದೇಹವೇ ಇಲ್ಲ ಎಂದು ಘಂಟಾಘೋಷವಾಗಿ ಹೇಳಬೇಕಾಗಿದೆ.

ನಮ್ಮ ಮುಂದೆ ಕೆಲವು ಅಂಶಗಳನ್ನು ವಿರೋಧ ಪಕ್ಷದವರು ಇಟ್ಟಿದ್ದಾರೆ. ಇಂಗ್ಲೆಂಡ್ ಮತ್ತು ಇತರ ದೇಶಗಳಲ್ಲಿ ವಿರೋಧಪಕ್ಷಕ್ಕೆ ಬಹಳ ಮಾನ್ಯತೆ ಇದೆ. ನಿಜವಾದ ಸತ್ಯಾಂಶಗಳನ್ನು ಇಂಥಾ ಸಂದರ್ಭಗಳಲ್ಲಿ ಕೊಟ್ಟು ನ್ಯಾಯ ದೊರಕಿಸಿ ಕೊಡುವುದು ವಿರೋಧ ಪಕ್ಷದ ನೀತಿ. ಈಗ ವಯಸ್ಕರ ವಿದ್ಯಾಭ್ಯಾಸದ ಪದ್ಧತಿಯಲ್ಲಿ ನ್ಯೂನತೆ ಇದೆ, ಅನೇಕ ಕಡೆ ಸ್ಲೇಟುಗಳನ್ನೂ ಬಳಪಗಳನ್ನೂ ಮಾರಿರುತ್ತಾರೆ ಎಂದು ಹೇಳಿದರು. ಆ ರೀತಿ ವಿರೋಧ ಪಕ್ಷದವರು ಹೇಳುವುದು ಸರಿಯಲ್ಲ.

ಕೆಲವು ಸದಸ್ಯರು.—ಅವರು ವಿರೋಧ ಪಕ್ಷದವರಲ್ಲ, ಸ್ವತಂತ್ರರು.

ಶ್ರೀ ಎ. ಆರ್. ನಾಯ್ಡುರವರು.—ಈಗ ನಮ್ಮ ಮುಂದೆ ಇರುವ ಬಹಳ ದೊಡ್ಡ ಪ್ರಶ್ನೆ ಯಾವುದು ಎಂದರೆ ನಿರುದ್ಯೋಗ. ಈ ದೊಡ್ಡ ಸಮಸ್ಯೆಯನ್ನೂ ನಾವು ಎದುರಿಸಬೇಕಾಗಿದೆ.

Mr. SPEAKER.—You have a minute more.

ಶ್ರೀ ಎ. ಆರ್. ನಾಯ್ಡುರವರು.—ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಒಂದು ವಿಷಯ ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ. ಮೊನ್ನೆ ತಾನೆ ಪಂಡಿತ ಜವಹರ್‌ಲಾಲ್ ನೆಹರೂರವರು ಲಕ್ನೋ ನಗರದಲ್ಲಿ ಪ್ರವಾಸ ಮಾಡಿದಾಗ ಬಡ ಕಾರ್ಮಿಕರು ವಾಸಮಾಡುತ್ತಿದ್ದಂಥ ಗುಡಿಸಲುಗಳನ್ನು ಸುಟ್ಟು ಹಾಕಬೇಕೆಂದು ಹೇಳಿದರು. ಕಾರಣವೇನೆಂದರೆ ಕಾರ್ಮಿಕರೇ ದೇಶದ ಸಂಪತ್ತು ಎಂದು ಹೇಳುವಾಗ ಅಂಥ ಕಾರ್ಮಿಕರ ಕಡೆ ಸ್ವಲ್ಪ ಗಮನಿಸಬೇಕಾದ್ದು ನ್ಯಾಯವಾಗಿದೆ. ಬೆಂಗಳೂರು ನಗರದಲ್ಲಿ ಸುಮಾರು 50–60 ಸಾವಿರಕ್ಕೂ ಹೆಚ್ಚಾಗಿ ಕಾರ್ಮಿಕರು ವಾಸ ಮಾಡತಕ್ಕ ವಸತಿಗಳು ಮಲ್ಲೇಶ್ವರ, ಶ್ರೀರಾಮಪುರ, ಬನ್ನಿಮಿರ್ ಈ ಪ್ರದೇಶಗಳಲ್ಲಿ ಇವೆ. ಇಲ್ಲಿ ವಾಸ ಮಾಡತಕ್ಕ ಕಾರ್ಮಿಕರ ಸ್ಥಿತಿ ತುಂಬಾ ತೊಂದರೆಯಲ್ಲಿದೆ ಎಂದು ಹೇಳಿದರೆ ತಪ್ಪಾಗರಾರದು. ಇಂಥ ಕಡೆ ನಮ್ಮ ಸರ್ಕಾರದವರು ಅದಷ್ಟು ಮಟ್ಟಿಗೆ ಟ್ರಸ್ಟ್ ಬೋರ್ಡ್ ಮುಖಾಂತರ ಕೇಂದ್ರ ಸರ್ಕಾರದವರು ಕಾರ್ಮಿಕರ ವಸತಿಗೃಹ ನಿರ್ಮಾಣ ಯೋಜನೆಗೆ ಒದಗಿಸಿರುವ ಹಣವನ್ನು ಪಯೋಗಿಸಿ ಮುತುವರ್ಜಿಯಿಂದ ಈ ಸಮಸ್ಯೆಯನ್ನು ಬಗೆಹರಿಸಿದರೆ ದೇಶದಲ್ಲಿ ವಿರೋಧ ಪಕ್ಷಕ್ಕೆ ಅವಕಾಶವೇ ಇರುವುದಿಲ್ಲ ಎಂದು ಘಂಟಾಘೋಷವಾಗಿ ಹೇಳಿ, ಶ್ರೀಮಾನ್ ಹನುಮಂತಯ್ಯನವರ ನಾಯಕತ್ವದಲ್ಲಿ ಪ್ರಕೃತಿ ಮಾತೆಯು ಮಡಿಲನಲ್ಲಿ ಕಂಗೊಳಿಸುತ್ತಿರುವ ನಮ್ಮ ರಾಜ್ಯ ರಾಮರಾಜ್ಯವಾಗುವುದರಲ್ಲಿ ಯಾವ ವಿಧವಾದ ಸಂದೇಹವೂ ಇಲ್ಲ ಎಂದು ನಂಬಿ, ಪೂಜ್ಯ ಗಾಂಧಿಯವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

(Some members got up to speak).

Mr. SPEAKER.—I will give a chance to Sri K. S. Vasan provided his speech does not exceed five minutes.

Sri K. S. VASAN (Kolar Gold Fields).—Sir, I really want to move the amendment in my name but since

(SRI K. S. VASAN.)

the Leader of the Opposition has agreed that the other amendments would not be moved, I do not move my amendment. I know, during this session, a number of opportunities would occur to me to raise the same subject but I want to say one or two things while supporting the amendment moved by the Leader of the Opposition and all that he said on other matters except decontrol. I am strongly opposed to decontrol, derationing and removal of procurement. I know that controls were first imposed when there was inflation. Decontrol is sought to be enforced when there is slump. By enforcing control producers were harassed. By decontrol the consumers which include a vast majority of agricultural labourers are going to be harassed. We do not want immediate decontrol of foodgrains or movement of foodstuffs. In the Rajpramukh's Address it is stated that Mysore State has paved the way or given lead to a new policy with regard to food. But I should say it is the Union Government that has given a lead, *i.e.*, forcing the State Governments to change their food policy. When they began refusing food subsidy, they forced the State Governments to increase the price of foodstuffs and paved the way for this situation. After refusing food subsidy Pandit Nehru's broadcast talks and Rafi Ahmed Kidwai's Press Conferences, and the moves of Madras and Bihar Governments show that this policy was decided at the Centre. We know that it is not the Mysore Government that has given the lead but it is the lead given from New Delhi. We are quite opposed to decontrol.

As regards other things mentioned by the Leader of the Opposition in support of the amendment, I wish to add one or two things. The Government always say that they are for industrial truce and industrial peace. But their policy is not towards industrial peace or truce. They do not intervene in industrial disputes in time. If they interfere they do it in the interests and on behalf of the management. There are a number of industrial disputes pending disposal in the State for a number of months, in some cases, years. There are disputes pending between the employers and the employees in the Binny Mills, in the Raja Mills, in the Government Electric Factory and in Bhadravati Iron and Steel Works. Government have not set in motion their conciliatory machinery. They are adopting dilatory tactics, and they have let loose the forces of disruption of trade unions thereby helping the management. There is in a number of industries like Silk, Tanneries, Handloom, etc., a serious crisis and Government have not come forward to give adequate protection to these industries nor have they come forward to assure some relief to workers affected by the crisis in these industries.

Regarding famine areas in the State, in parts of Kolar, Tumkur, Chitaldrug, Government even now hesitate to concede that famine conditions are prevailing there. In the previous Assembly some of the members, now Ministers, then said that in Kolar and other parts there were famine conditions and that Government should immediately come forward to declare them as such. The Hon'ble Member Sri A. Bheemappa Naik had also pressed on the Government to declare those parts as famine areas. Now when the conditions are worsening and when they have gone from bad to worse, Government say that in those parts there are only distress conditions and not famine conditions. I need not add to what the other members have expressed regarding the appalling conditions prevailing in the districts of Kolar, Chitaldrug and Tumkur. What is the use of just giving some relief, which does not touch even the fringe of the problem? There must be permanent measures to remove these recurring conditions. Towards that end nothing substantial or effective could be done unless there is radical land reform. This radical reform is long overdue and Government have failed to bring about proper legislation in this direction.

1 P.M.

With this, I support the amendment moved by the Leader of the Opposition.

Sri K. HANUMANTHAIYA.—Sir,....

Sri M. LINGANNA.—There are many speakers who are anxious to speak. I believe opportunity will be given to all of them.

Sri K. HANUMANTHAIYA.—I am on my legs, Sir.

Mr. SPEAKER.—Yes. The Hon'ble Chief Minister may speak.

ಶ್ರೀ ಕೆ. ಹನುಮಂತಯ್ಯನವರು (ಮುಖ್ಯಮಂತ್ರಿಗಳು).—ಸ್ಪೀಕರ್, ಈ ರಾಜ ಭಾಷಣದ ಮೇಲೆ ಮಾಡಲ್ಪಟ್ಟ ಭಾಷಣಗಳನ್ನು ಸಾವಧಾನವಾಗಿಯೂ, ಸಹ್ಯದಯನಾಗಿಯೂ ಕೇಳಿದೆ. ರಾಜ ಭಾಷಣವು ಬಹಳ ಚಿಕ್ಕದು ಎನ್ನತಕ್ಕ ಆಕ್ಷೇಪಣೆ ನಮ್ಮ ಎದುರು ಪಕ್ಷದವರಿಂದ ಮಾಡಲ್ಪಟ್ಟಿದೆ. ನಾನಾದರೋ ನತ್ಸಂಪ್ರದಾಯಗಳನ್ನು ಸ್ಥಾಪಿಸಬೇಕೆಂಬ ತೀವ್ರಾಕಾಂಕ್ಷೆಯುಳ್ಳವನಾಗಿದ್ದೇನೆ. ಆ ದೃಷ್ಟಿಯಿಂದ ನಾನು ಈ ಭಾಷಣವು ಈಗಿರತಕ್ಕ ರೂಪದಲ್ಲಿ, ಮತ್ತು ಪ್ರಮಾಣದಲ್ಲಿ ಇರತಕ್ಕಂಥಾದ್ದು ಸರಿಯೇ ಅಲ್ಲವೇ ಎಂಬುದನ್ನು ಸಭೆಯ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ.

ರಾಜ ಭಾಷಣವನ್ನು ಮಾಡತಕ್ಕಂಥ ಸಂಪ್ರದಾಯವನ್ನು ನಾವು ಇಂಗ್ಲೀಷ್ ರಾಜ್ಯ ಪದ್ಧತಿಯಿಂದ ತೆಗೆದುಕೊಂಡಿದ್ದೇವೆ. ಆದರೆ ಇಂಗ್ಲೀಷ್ ರಾಜ್ಯಪದ್ಧತಿಯ ಪದ್ಧತಿಯನ್ನು ಕುರುಡು ನಂಬಿಕೊಂಡು ಅನುಸರಿಸಬೇಕೆಂಬ ವಾದ ನನ್ನದೇನೂ ಅಲ್ಲ. ಇಲ್ಲಿನ ಸಮಯ ಸಂದರ್ಭಗಳಿಗೆ ಅನ್ವಯಿಸುವ ಹಾಗೆ ನಮ್ಮ ಸಂಪ್ರದಾಯವನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯ, ಹಕ್ಕು ನಮ್ಮ ಕೈಯಲ್ಲಿ ಇದ್ದೇ ಇದೆ. ಆದರೆ, ಅದು ಹೇಗೆ ಉಂಟಾಯಿತು, ಅದರ ವ್ಯಾಪ್ತಿಯೇನು ಎಂಬವಿಷಯದಲ್ಲಿ ಒಂದೆರಡು ವಾಕ್ಯಗಳನ್ನು ಮಾತ್ರ ಈಗ ಓದುತ್ತೇನೆ.

> "The King's speech gives in broad outline the legislative programme of the session, comments upon the position of foreign affairs and the state of the Crown Colonies and in a special paragraph of nearly an invariable form an Address to the Commons only. It promises an early submission of the Estimates for the wants of the coming year."

ಅದರಲ್ಲಿ ಹೊರಗಡೆ ವಿಷಯಗಳು ಈಗ ನಮಗೆ ಅನ್ವಯಿಸುವುದಿಲ್ಲ. ಮುಖ್ಯವಾದ ಅಂಶವೆಂದರೆ, ಒಂದು ಅಧಿವೇಶನವನ್ನು ಕರೆದರೆ ಅದರಲ್ಲಿ ಬರತಕ್ಕಂಥ ವಿಷಯಗಳನ್ನು ಪ್ರಸ್ತಾಪಿಸುವುದು ಮುಖ್ಯವಾದ ಉದ್ದೇಶ. ಎರಡನೆಯದು, ಸರ್ಕಾರದವರು ಅನುಸರಿಸತಕ್ಕ ನೀತಿಯನ್ನು ಪ್ರತಿಪಾದಿಸುವುದು ಈ ಎರಡು ಕೆಲಸಗಳು, ಇಂಗ್ಲೀಷಿನಲ್ಲಿ ಹೇಳಬೇಕಾದರೆ, Legislative programme and the policy of the Government in regard to major matters—ರಾಜ ಭಾಷಣದಲ್ಲಿರಬೇಕಾದದ್ದು ಮುಖ್ಯ. ಆ ದೃಷ್ಟಿಯಿಂದ ನಾವು ಈ ರಾಜಭಾಷಣವನ್ನು ಪರಿಶೀಲಿಸಿದರೆ, ಮೊದಲನೆಯದಾಗಿ ಎಲ್ಲರ ಗಮನವನ್ನೂ ಸೆಳೆದಿರತಕ್ಕಂಥ, ಎಲ್ಲರ ಮನಸ್ಸಿನಲ್ಲಿಯೂ ಸಂಪೂರ್ಣವಾಗಿ ತುಂಬಿರತಕ್ಕಂಥ ಆಹಾರ ನೀತಿಯನ್ನು ಇಲ್ಲಿ ಪ್ರತಿಪಾದನೆ ಮಾಡಿದೆ. ಎರಡನೆಯದಾಗಿ, ಕಷ್ಟದ, ಕ್ಷಾಮದ ಪ್ರದೇಶಗಳೆಂದು ಏನು ಹೇಳುತ್ತೀವೆಯೋ ಆ ಪ್ರದೇಶಗಳ ವಿಷಯವನ್ನು ಪ್ರಸ್ತಾಪಮಾಡಿದೆ. ಮೂರನೆಯದಾಗಿ ವಿದ್ಯಾಭ್ಯಾಸದ ಪದ್ಧತಿಯನ್ನು ಮಾರ್ಪಾಡುಮಾಡಬೇಕೆಂದು ಪ್ರಸ್ತಾಪಿಸಿದೆ. ನಾಲ್ಕನೆಯ ವಿಷಯ, ಕೈಗಾರಿಕೆಗಳನ್ನು ಉತ್ತಮರೀತಿಯಲ್ಲಿ ನಡೆಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂಬ ಅಂಶವನ್ನು ಇದರೊಳಗಳವಡಿಸಿದೆ. ಇನ್ನು ಐದನೆಯದು ಮತ್ತು ಕೊನೆಯದು, 15 ಮಸೂದೆಗಳು ತಮ್ಮ ಅವಗಾಹನೆಗೆ ಬರುತ್ತವೆಂದು ತಿಳಿಸಿದೆ. ಆದ್ದರಿಂದ ರಾಜಭಾಷಣದ ಉದ್ದೇಶವೇನಿದೆ ಅದೆಲ್ಲವೂ ಸಂಪೂರ್ಣವಾಗಿ ಈ ಭಾಷಣದಲ್ಲಿ ಪರಿಪಾಲಿಸಲ್ಪಟ್ಟಿದೆಯೆಂಬುದನ್ನು ವಿನಯಪೂರ್ವಕವಾಗಿ ನಾನು ಈ ಸಭೆಗೆ ತಿಳಿಸಬೇಕಾಗಿದೆ.

ಈ ಹೊಸ ಮಂತ್ರಿಮಂಡಳ ಬಂದಮೇಲೆ ಇವರ ಮೇಜರ್ ಪಾಲಿಸಿಗಳೇನೆಂದು ಕೆಲವರು ಕೇಳಬಹುದು. ಕೇಳುವುದೂ ಸಹಜವೇ. ಅದಕ್ಕೆ ಸರಿಯಾಗಿ ನಮ್ಮ ಆಹಾರದ ನೀತಿ, ವಿದ್ಯಾಭ್ಯಾಸದ ನೀತಿ, ಕೈಗಾರಿಕಾ ನೀತಿಯೇನೆಂಬುದನ್ನು ಇಲ್ಲಿ ಪ್ರತಿಪಾದಿಸಿದೆ. ಸದಸ್ಯರು ಮುಖ್ಯವಾಗಿ ಎದುರು ಪಕ್ಷದ ಸದಸ್ಯರು ಮತ್ತು ನಾಯಕರು, ಈ ಮೂರು ವಿಷಯಗಳಲ್ಲಿ ನನಗೆ ಸಲಹೆಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಕೆಲವು ವಿಷಯಗಳಲ್ಲೇನೋ ಅವರುಗಳು ಸಲಹೆಗಳನ್ನು ಕೊಟ್ಟಿಯೂ ಇದ್ದಾರೆ. ಆದರೆ ನಾನು ನಿರೀಕ್ಷಿಸುತ್ತಿದ್ದುದು ಎಲ್ಲಕ್ಕಿಂತಲೂ ದೊಡ್ಡ ವಿಶೇಷ ಪರಿಣಾಮಕಾರಿಯಾದ ವಿಷಯವಾದ ವಿದ್ಯಾಭ್ಯಾಸ ಪದ್ಧತಿಯ ವಿಷಯ. ಆ ವಿಷಯ ಅಷ್ಟು ಹೆಚ್ಚಾಗಿ ಪ್ರಸ್ತಾಪಮಾಡಲ್ಪಡಲಿಲ್ಲ. ಆದರೂ ಚಿಂತೆಯಿಲ್ಲ, ತಿರುಗಿ ನೋಡೋಣ. ಅಂತೂ, ಹೀಗೆ ರಾಜಭಾಷಣದಲ್ಲಿ ನೀತಿಯ ವಿಚಾರ ಮತ್ತು ಈ ಅಧಿವೇಶನದಲ್ಲಿ ಬರತಕ್ಕಂಥ ಮಸೂದೆಗಳ ವಿಚಾರಗಳನ್ನು ಪ್ರಸ್ತಾಪಮಾಡಿ, ಸರ್ಕಾರದವರು ಸಾಮಾನ್ಯವಾಗಿ ಇರಾಖೆಯಲ್ಲಿ ಏನೇನು ಕೆಲಸ ಮಾಡಿದೆ, ಮುಂದೇನು ಮಾಡಬೇಕೆಂದಿದೆ—ಇದನ್ನೆಲ್ಲಾ ಹಣಕಾಸಿನ ಮಂತ್ರಿಗಳ ಭಾಷಣದಲ್ಲಿ ಪ್ರಸ್ತಾಪಮಾಡುವುದಕ್ಕೆ ಬಿಟ್ಟಿರುವುದು ಯುಕ್ತವಾಗಿದೆ. ರಾಜಭಾಷಣವು ಇದ್ದು ಹಣಕಾಸಿನ ಮಂತ್ರಿಗಳ ಭಾಷಣವೂ ಇರುವ ಸಂದರ್ಭದಲ್ಲಿ ಒಂದರೊಂದರ ವ್ಯಾಪ್ತಿಯನ್ನೂ ಇಷ್ಟೇ ಎಂದು ಸ್ವಲ್ಪ ಹೆಚ್ಚು ಕಡಮೆ ತಿಳಿದುಕೊಳ್ಳಬೇಕಾದದ್ದು ನ್ಯಾಯ. ರಾಜಭಾಷಣದಲ್ಲಿ ಹಣಕಾಸಿನ ಮಂತ್ರಿಗಳು ಮಾಡತಕ್ಕ ಭಾಷಣವನ್ನು ಪ್ರಸ್ತಾಪಿಸುವುದಾಗಲೀ, ಅಥವಾ ರಾಜ ಭಾಷಣವನ್ನು ಏನೂ ಇಲ್ಲದ ನೀರಸಭಾಷಣವನ್ನಾಗಿ ಮಾಡುವುದಾಗಲಿ ಎರಡೂ ಸರಿಯಲ್ಲ. ಆ ದೃಷ್ಟಿಯಿಂದ policy matters ಮತ್ತು legislative matters ಗಳನ್ನು ಈ ರಾಜ ಭಾಷಣದಲ್ಲಿ ಸೇರಿಸಿದ್ದೇವೆ. ಅದು ಸಮರ್ಪಕವಾಗಿಯೂ, ಸಂಪ್ರದಾಯಕ್ಕನುಸಾರವಾಗಿಯೂ ಇದೆಯೆಂದು ನನ್ನ ಅರಿಕೆ.

ಈ ರೀತಿಯಾಗಿ ನಾನು ಪ್ರತಿಪಾದಿಸಿದ ಮೇಲೆ, ಈ ನಾಲ್ಕು ವಿಷಯಗಳ ಮೇಲೆ ಸಭಾಸದಸ್ಯರು ಮಾಡಿರತಕ್ಕ ಆಕ್ಷೇಪಣೆಗಳಿಗೆ ಮತ್ತು ನೂಡಿನೆಗಳಿಗೆ ಉತ್ತರ ಕೊಡಬೇಕಾದದ್ದು ನನ್ನ ಕರ್ತವ್ಯ. ಮೊದಲನೆಯದಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಪಟ್ಟಾಭಿರಾಮಾವರರು ಎರಡು ವಿಷಯಗಳನ್ನು ಹೇಳಿದರು. ಅದು ಸಾಪರ್ಟಿಡೆಮೋಕ್ರಾಟಿಕ್ ರಿಪಬ್ಲಿಕ್ ಎಂಬುದನ್ನು ಸಾರ್ಥಕ ಪಡಿಸಬೇಕೆಂತಲೂ ಮತ್ತು ಹೊಸದಾಗಿ

(ಶ್ರೀ ಕೆ. ಹನುಮಂತಯ್ಯನವರು.)

ಅನುಷ್ಠಾನಕ್ಕೆ ಬಂದಿರತಕ್ಕ ರಾಜ್ಯಾಂಗ ರಚನಾಕ್ರಮವನ್ನು ನ್ಯಾಯವಾದ ರೀತಿಯಲ್ಲಿ in its true spirit ಜಾರಿಗೆ ತರಬೇಕೆಂದೂ ಇದೆ, ಈ ವಿಷಯದಲ್ಲಿ ಇಲ್ಲಿರತಕ್ಕ ಯಾವ ಸದಸ್ಯರಿಗೂ ಕೂಡ ಪರಸ್ಪರ ಭಿನ್ನಾಭಿಪ್ರಾಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. (Hear, Hear) ಅಲ್ಲದೆ ಆ ವಿಷಯವನ್ನು ಅವರು ಒತ್ತಿ ಹೇಳಿದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಏಕೆಂದರೆ ನಾವು ಅನೇಕವು ಅದನ್ನು ಮರೆತುಬಿಡುತ್ತೇವೆ. ಅನೇಕವೇಳೆ ವಾರಗಳ ಹೆಸರುಗಳು ಕೂಡ ನಮಗೆ ಜ್ಞಾಪಕದಲ್ಲಿರುವುದಿಲ್ಲ. ಹಾಗೆಯೇ ಅನೇಕರಿಗೆ ಯುಗ ಪರಿವರ್ತನೆಯಾಗಿದೆಯೆಂದು ಕೂಡ ಮರೆತು ಹೋಗಿರುತ್ತದೆ. ಈಗ ನಾನು ತಮ್ಮೆಲ್ಲರ ಗಮನವನ್ನು ಸೆಳೆಯುವುದು ತಾವು ತೆಗೆದುಕೊಂಡಿರುವ ಪ್ರಮಾಣವಚನಕ್ಕೆ. ಇಂಡಿಯಾ ಸರ್ಕಾರದ ಅಧ್ಯಕ್ಷರಾಗಲಿ ಕೇಂದ್ರ ಸರ್ಕಾರದ ಮಂತ್ರಿಗಳಾಗಲಿ, ಪ್ರಾಂತಗಳ ಗವರ್ನರುಗಳಾಗಲಿ, ರಾಜಪ್ರಮುಖರಾಗಲಿ ಅಥವಾ ಈ ಸಭಾಸದಸ್ಯರಾಗಲಿ, ಪ್ರತಿಯೊಬ್ಬರೂ ಈ ದಿವಸ ಪ್ರಮಾಣವಚನವನ್ನು ಸ್ವೀಕರಿಸುವುದು ಯಾವ ವ್ಯಕ್ತಿಗೋಸ್ಕರವೂ ಅಲ್ಲ. ಅದು ಭಾರತದ ರಾಜ್ಯಾಂಗ ಸಂವಿಧಾನಕ್ಕಾಗಿ, ಆ ಗ್ರಂಥಕ್ಕಾಗಿ. ಅದ್ದರಿಂದ ನಮ್ಮ ಪೂಜ್ಯಭಾವನೆ. ಹಿಂದೆ ಯಾವ ವ್ಯಕ್ತಿಯಲ್ಲೇ ಇದ್ದರೂ ಅದನ್ನು ಈ ಹೊಸ ಯುಗಕ್ಕೆ ಅನುಗುಣಿಸುವುದು ಅವಶ್ಯಕ. We must owe allegiance to the Constitution not to any particular indivisual. ಆದ್ದರಿಂದ ನಾವು ಯಾವ ಪ್ರಮಾಣವಚನವನ್ನು ಸ್ವೀಕರಿಸಿದ್ದೇವೋ ಆ ಪ್ರಮಾಣವಚನಕ್ಕನುಗುಣವಾಗಿ ಮನಸಾ ವಾಚಾ ಕಾಯಾ ನಡೆದುಕೊಳ್ಳಬೇಕಾದದ್ದು ನಮ್ಮ ಪವಿತ್ರ ಕರ್ತವ್ಯ. ಆ ದೃಷ್ಟಿಯಿಂದ ಶ್ರೀಮಾಣಿಪಟ್ಟಾಭಿರಾಮನ್‌ರವರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಈಗಲೂ ಶಾಲೆಗಳಲ್ಲಿ "ಕಾಯಾ ಶ್ರೀ ಗೌರೀ" ಎಂತಲೇ ಹಾಡುತ್ತಿದ್ದಾರೆ ಎಂದು ಹೇಳಿದನು.

ಶ್ರೀ ಕೆ ಪಟ್ಟಾಭಿರಾಮರವರು.—"ಜನಗಣಮನ" ಹಾಡಿದ ಮೇಲೆ "ಕಾಯಾ ಶ್ರೀ ಗೌರಿ" ಹಾಡುತ್ತಿದ್ದಾರೆ.

ಶ್ರೀ ಕೆ. ಹನುಮಂತಯ್ಯನವರು.—ಹಾಗೆಯೇ ಮೈಸೂರು ದೇಶದಲ್ಲಿ ಎರಡು ಧ್ವಜಗಳು ಹಾರಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ಒಂದು, ಹಿಂದಿನಿಂದ ಬಂದ ಮೈಸೂರು ಧ್ವಜ; ಇನ್ನೊಂದು, ರಾಷ್ಟ್ರ ಧ್ವಜ. ನಾವೀಗ ಈ ಪ್ರಮಾಣವಚನಕ್ಕನುಸಾರವಾಗಿ ನಡೆದುಕೊಳ್ಳಬೇಕಾದದ್ದು ಸರ್ಕಾರದ ಮತ್ತು ಸಭಾಸದಸ್ಯರ ಪವಿತ್ರ ಕರ್ತವ್ಯ ಎಂದು ಹೇಳಿದ ಮೇಲೆ, ಇನ್ನು ಮುಂದೆ ಮೈಸೂರು ದೇಶದಲ್ಲಿ ಒಂದು ಧ್ವಜ ಮತ್ತು ಒಂದು ರಾಷ್ಟ್ರಗೀತೆ ಇರುವುದು ಅವಶ್ಯಕ. ಆದ್ದರಿಂದ ನಮ್ಮ ಮಂತ್ರಿಮಂಡಲದವರು ಇನ್ನು ಮುಂದೆ ಮೈಸೂರಿನಲ್ಲಿ ಒಂದೇ ಧ್ವಜಮಾತ್ರ ಹಾರಾಡಬೇಕೆಂದು ತೀರ್ಮಾನಿಸಿದ್ದಾರೆ.

ಆದುದರಿಂದ ನಮ್ಮ ಮಂತ್ರಿಮಂಡಲದವರು ತೀರ್ಮಾನಿಸಿರುವಂತೆ, ಇನ್ನು ಮುಂದೆ ಮೈಸೂರಿನಲ್ಲಿ ಒಂದು ಧ್ವಜ ಮಾತ್ರ ಹಾರಾಡಬೇಕು ಮತ್ತು ಒಂದು ರಾಷ್ಟ್ರಗೀತೆಯನ್ನು ಮಾತ್ರ ಹಾಡಬೇಕು ಎಂದು ಸರ್ಕಾರಿ ಆಜ್ಞೆಯನ್ನು ಹೊರಡಿಸುವುದಕ್ಕೆ ತಕ್ಕ ಏರ್ಪಾಡನ್ನು ನಾನು ಮಾಡುತ್ತೇನೆ.

ಇನ್ನು ಆಹಾರದ ವಿಷಯವನ್ನು ಪ್ರಸ್ತಾಪಮಾಡಿದರು. ನನ್ನ ಹಲವು ಮಾನ್ಯ ಮಿತ್ರರು ಈ ಮಂತ್ರಿಮಂಡಲ ಅಧಿಕಾರಕ್ಕೆ ಬಂದ ಕೂಡಲೇ ತೆಗೆದುಕೊಂಡ ಆಹಾರ ನೀತಿಯ ವಿಚಾರವಾಗಿ ಉತ್ಪ್ರೇಕ್ಷಿತವಾದ ಮಾತುಗಳನ್ನಾಡಿದ್ದಾರೆ. ಆ ಮಾತುಗಳಿಗಾಗಿ ನಾನು ಕೃತಜ್ಞನಾಗಿರಬೇಕಾಗಿದೆ. ಆದರೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬೇಕೆಂಬ ಸಲಹೆ ಬಂದಿದೆ. ಈ ಮುಂದಿನ ಹೆಜ್ಜೆಯನ್ನಿಟ್ಟು ಸಂಪೂರ್ಣವಾಗಿ ಹತೋಟಿಯನ್ನು ತೆಗೆದುಹಾಕಬೇಕೆಂದು ಮೊದಲು ನನ್ನ ಮನಸ್ಸಾದರೂ ಈ ರೀತಿ ಇತ್ತು. ಈ ರೀತಿ ಕೊನೆಯ ತೀರ್ಮಾನ ಮಾಡುವುದಕ್ಕೆ ಮೊದಲು ಶಾಸನ ಸಭೆಯ ಅಭಿಪ್ರಾಯವನ್ನು ಪಡೆಯಬೇಕೆಂಬ ಸದುದ್ದೇಶದಿಂದ ಕಾಯುತ್ತಿದ್ದೆನೇ ಹೊರತು ಯಾವ ಭಯ ಭ್ರಾಂತಿಯಿಂದಾಗಲೀ ಅಲ್ಲವೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಯಾವಾಗ ಒಂದು administrative responsibility ಇರುತ್ತದೆಯೋ ಆಗ ಇದು ಭಯ, ದಿಗಿಲು, ಭ್ರಾಂತಿಯನ್ನುಂಟುಮಾಡುವುದು ಸ್ವಾಭಾವಿಕ. ಇದನ್ನು ಹೋಗರಾಡಿಸುವುದು ತಮ್ಮೆಲ್ಲರ ಕರ್ತವ್ಯ. ಈಗ ಒಬ್ಬ ಸದಸ್ಯರನ್ನು ಬಿಟ್ಟರೆ ಮಿಕ್ಕೆಲ್ಲರೂ ಆಹಾರ ಹತೋಟಿ ವ್ಯವಸ್ಥೆ ಹೋಗಬೇಕೆಂಬುದನ್ನು ನಿರ್ದಿಷ್ಟವಾಗಿ ಹೇಳಿದ್ದೀರಿ. ಇದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲುಪೇಟೆ ಹೆಗ್ಗಡದೇವನ ಕೋಟೆ) —ಹಾಗೆಯೇ ಈ ಆಶ್ವಾಸನವನ್ನೂ ಕೊಟ್ಟುಬಿಡಿ. ಎಲ್ಲರ ಅಭಿಪ್ರಾಯವೂ ಹೀಗಿರುವಾಗ ಕೊಡುವುದಕ್ಕೇನು ಭಯ?

ಶ್ರೀ ಕೆ. ಹನುಮಂತಯ್ಯನವರು.—ನಮ್ಮ ಆಹಾರ ಮಂತ್ರಿಗಳು ದೆಲ್ಲಿಗೆ ಹೋಗಿದ್ದಾರೆ. ದೆಲ್ಲಿಯಲ್ಲಿ ಇಂಡಿಯಾ ಸರ್ಕಾರದವರೊಡನೆ ಸಮಾಲೋಚನೆಮಾಡಿಕೊಂಡು ಬಂದ ಮೇಲೆ ಅವರ ಅಭಿಪ್ರಾಯ ಹೇಗಿದೆ ಎಂಬುದನ್ನೂ ತಿಳಿದುಕೊಳ್ಳೋಣ. ಎಲ್ಲಕ್ಕಿಂತ ಹೆಚ್ಚಾಗಿ ಯಾವ ಪ್ರದೇಶದ ಪ್ರಜೆಗಳಿಗೆ ಈ ಕಷ್ಟದ ಬೇಗೆ ತಾಗುತ್ತಿದೆಯೋ ಆ ಪ್ರದೇಶದ ಜನರ ಅಭಿಪ್ರಾಯವನ್ನು ಕೂಡ ಶೇಖರಿಸಿದ್ದೇನೆ. ಬೆಂಗಳೂರು ಸಿಟಿ ಮೈಸೂರು ಸಿಟಿ, ದಾವಣಗೆರೆ ಈ ಪ್ರದೇಶಗಳಲ್ಲಿ ಸ್ಪೆಷಲ್ ರೇಷನಿಂಗ್ ಇರುವುದು ತಮಗೆ ಗೊತ್ತಿದೆ. ಈ ಪ್ರದೇಶಗಳ ಜನರ ಅಭಿಪ್ರಾಯ ಹೇಗಿದೆ ಎಂಬುದನ್ನು ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್ ಸದಸ್ಯರ ಅಭಿಪ್ರಾಯವನ್ನು ಕೇಳಿ ಪಡೆದಿದ್ದೇನೆ. ಈ ರೀತಿ ಎಲ್ಲರ ಅಭಿಪ್ರಾಯ ಮತ್ತು ವಿಷಯಗಳನ್ನು ಶೇಖರಿಸಿ, ಈಗ ಒಂದು ನಿರ್ಧಾರಕ್ಕೆ ಬರುವುದಕ್ಕೆ ಅನುಕೂಲವಾದ ವಾತಾವರಣವಿದೆ. ನಿರ್ಧಾರವನ್ನು ಈ ಅಧಿವೇಶನ ಮುಗಿಯುವುದರೊಳಗೆಯೇ ನಮ್ಮ ಮಂತ್ರಿಮಂಡಲದವರು ಕೈಕೊಳ್ಳುತ್ತಾರೆಂಬ ನಂಬಿಕೆಯನ್ನು ತಮ್ಮ ಮುಂದಿಡುತ್ತೇನೆ. ಆದರೆ, ಈ ರಾಜ್ಯ ಭಾರಣದಲ್ಲಿ ವಿವರಿಸಿರುವ ಹಾಗೆ ಪುನಃ ಯಾವ ಕಾರಣದಿಂದರೇ ಆಗಲಿ ಆಹಾರ ಧಾನ್ಯಗಳ ಬೆಲೆ ಏರಿ ಆಹಾರ ಅಭಾವವುಂಟಾಗಿ ಜನರಿಗೆ ಎಲ್ಲಿ ತೊಂದರೆಯಾದೀತೋ ಎಂಬ ಶಂಕೆ ಮನಸ್ಸಿನಲ್ಲಿದೆ. ಮಂತ್ರಿಮಂಡಲದ ಮನಸ್ಸಿನಲ್ಲಿರುವ ಈ ಶಂಕೆಯನ್ನು ಸಭೆಗೂ ಸಾರ್ವಜನಿಕರಿಗೂ ಸಾರಿದ್ದೇನೆ. ಪ್ರಜಾಭಿಪ್ರಾಯಕ್ಕನುಗುಣವಾಗಿ ನಡೆಯುವುದು ನನ್ನ ಕರ್ತವ್ಯ. ಈ ಕರ್ತವ್ಯ ಪರಿಪಾಲನೆಯಲ್ಲಿ ಮುಂದೆ ಕಷ್ಟವುಂಟಾದರೆ, ಅಪಕೀರ್ತಿ ಬಂದರೆ ನನ್ನೊಬ್ಬನ ತಲೆಯ ಮೇಲೆ ಹಾಕಬಾರದು. ನಿಮ್ಮ ಅಭಿಪ್ರಾಯಕ್ಕನುಗುಣವಾಗಿ ಪೂರ್ತಿಯಾಗಿ ಕಂಚ್ರೋಲುಗಳನ್ನು ತೆಗೆದು ಹಾಕಿದರೆ ಆ ಮೂಲಕ ಉಂಟಾಗುವ ಕೀರ್ತಿಗೂ ಅಪಕೀರ್ತಿಗೂ ತಾವೆಲ್ಲರೂ ಭಾಗಿಗಳಾಗಬೇಕಾಗುತ್ತದೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ನಮ್ಮ election pledgeನಲ್ಲೇ ನಾವು ಇದನ್ನು ಬಹಿರಂಗ ಪಡಿಸಿದ್ದೇವೆ. So we are equally responsible.

ಶ್ರೀ ಕೆ. ಹನುಮಂತಯ್ಯನವರು.—ಎರಡನೆಯ ವಿಷಯ—ಮೈಸೂರು ದೇಶದಲ್ಲಿ ಚಿತ್ರದುರ್ಗ, ತುಮಕೂರು, ಬೆಂಗಳೂರು, ಕೋಲಾರ ಈ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಉಂಟಾಗಿರತಕ್ಕ ಕಷ್ಟ ಪರಿಸ್ಥಿತಿ. ಈ ಬಗ್ಗೆ ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂಬುದು ಈಗಾಗಲೇ ಎಲ್ಲರಿಗೂ ಗೊತ್ತಿದೆ. ವಿವರಗಳನ್ನು ಬಡ್ಜೆಟ್ ಭಾಷಣದಲ್ಲಿ ಬೇಕಾದರೆ ಪ್ರಸ್ತಾಪಮಾಡಬಹುದು. ಶ್ರೀಮಾಕ ಪಟ್ಟಾಭಿರಾಮರ್ಕರವರು ಹೇಳಿದಂತೆ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯದಲ್ಲಿ ಒಂದು ಗಾದೆಯಿದೆ: ನೀತಿ ಕಡಿಮೆಯಾದಾಗ ಕ್ಷಾಮ ಬರುತ್ತದೆಂದು. ಗಾದೆ ವೇದಕ್ಕೆ ಸಮಾನವೆಂಬುದನ್ನು ಸಂಬಂಧಪಟ್ಟವರೆಲ್ಲರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅದು ಅವರವರ ಅಂತರಾತ್ಮನಿಗೆ ಸಂಬಂಧಪಟ್ಟ ವಿಷಯ. ಇದನ್ನು ಹೆಚ್ಚು ಪ್ರಸ್ತಾಪಮಾಡಬೇಕಾಗಿಲ್ಲ. ಮುಖ್ಯವಾಗಿ ಸರ್ಕಾರದವರು ಈ ವಿಷಯದಲ್ಲಿ ಏನೇನು ಕಾರ್ಯಕ್ರಮವನ್ನು ಕೈಕೊಳ್ಳಬೇಕೋ ಅವೆಲ್ಲವನ್ನೂ ಕೈಕೊಂಡಿದ್ದೇವೆಂದು ಧೈರ್ಯವಾಗಿ ಹೇಳುತ್ತೇನೆ. ಇಷ್ಟೇ ಅಲ್ಲದೆ ಇಂಡಿಯಾ ಸರ್ಕಾರಕ್ಕೆ ಯಾವ ಯಾವ ಮನವಿಗಳನ್ನು ಮಾಡಬೇಕೋ ಅದೆಲ್ಲವನ್ನೂ ಮಾಡಿದ್ದೇವೆ. ಇದರ ಫಲವಾಗಿ ಮೊದಲು ಇಪ್ಪತ್ತು ಸಾವಿರ ಅನಂತರ ಮುವತ್ತುಸಾವಿರ ರೂಪಾಯಿಗಳನ್ನು ಪಂಡಿತ ನೆಹರೂರವರು ಕ್ಷಾಮಪರಿಹಾರಕ್ಕಾಗಿ ಕೊಟ್ಟಿದ್ದಾರೆ. ಇದನ್ನು ಫೈನಾನ್ಸ್ ಮಿನಿಸ್ಟರವರಿಗೆ ತಿಳಿಸಿ ಎಂದು ಹೇಳಿದ್ದಾರೆ. ಅದರ ಪ್ರಕಾರ ಅವರಿಗೆ ತಿಳಿಸಿದ್ದೇವೆ. ಕೃಷ್ಣರಾಜನಗರದಲ್ಲಿ ಕಾಂಗ್ರೆಸ್ ಸಮಿತಿ ಮಾಡಿದ ನಿರ್ಣಯವನ್ನು ಇಂಡಿಯಾ ಸರ್ಕಾರಕ್ಕೂ ಕಾಂಗ್ರೆಸ್ ಪಾರ್ಟಿಯ ಹೈ ಕಮ್ಯಾಂಡಿಗೂ ಕಳುಹಿಸಿದ್ದೇವೆ. ಎಲ್ಲ ವಿಷಯಗಳನ್ನೂ ಎಷ್ಟು ಪ್ರತಿಪಾದಿಸಬೇಕೋ ಅಷ್ಟು ಪ್ರತಿಪಾದಿಸಿದ್ದೇವೆ. ಕೈಯಲ್ಲಿ ನಾಕಾಸ್ತು—ಹಣವಿಲ್ಲದೆ ಹಣ ಕೊಡದೇ ಇರಬಹುದು. ಆದರೆ ಪತ್ರವ್ಯವಹಾರಕ್ಕೂ ಮಾತಿಗೂ ಕುಂದಿಲ್ಲ. ಈ ವಿಷಯದಲ್ಲಿ ಯಾರೂ ಏನೂ ಶಂಕೆಪಡಬೇಕಾಗಿಲ್ಲ. ಒಂದು ವಿಷಯ ಮಾತ್ರ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಯಾವ ಯಾವ ಸದಸ್ಯರು ಕ್ಷಾಮದ ವಿಚಾರವನ್ನು ಮನಸ್ಸಿಗೆ ಬಹಳ ಅಂಟಿಸಿಕೊಂಡಿದ್ದಾರೋ ಅವರು ಬರಿಯಮಾತಿನಲ್ಲಿ ಕೊನೆಗಾಣಿಸದೆ ಕಾರ್ಯದಲ್ಲಿಯೂ ತೋರಿಸಬೇಕೆಂದು ನನ್ನ ಪ್ರಾರ್ಥನೆ.

ಅನಂತರ ವಿದ್ಯಾಭ್ಯಾಸ ಪದ್ಧತಿಯ ವಿಚಾರ. ವಿದ್ಯಾಭ್ಯಾಸ ಪದ್ಧತಿಯ ವಿಚಾರವನ್ನು ಇನ್ನೂ ಹೆಚ್ಚು ಕಾಲ ತೆಗೆದುಕೊಂಡು ನಾವು ಡಿಬೇಟ್ ಮಾಡಬೇಕೆಂಬುದೇ ನನ್ನ ಸೂಚನೆ. ವಿರುದ್ಧ ಪಕ್ಷದ ನಾಯಕರು ಕಾಲ ಸಾಕಾಗಲಿಲ್ಲವೆಂದು ಹೇಳಿದರು. ಕಾಲದ ಪ್ರಶ್ನೆ ಇಲ್ಲ. ಇದಕ್ಕಾಗಿಯೇ ಒಂದೆರಡು ದಿವಸಗಳನ್ನು ಇಟ್ಟು, ವಿದ್ಯಾಭ್ಯಾಸ ಮಾರ್ಪಾಡಾಗುವ ವಿಷಯದಲ್ಲಿ ತಾವೆಲ್ಲರೂ ಸಲಹೆ ಕೊಟ್ಟು ಸಹಾಯಮಾಡಬೇಕೆಂದು ನಾನು ತಮ್ಮೆಲ್ಲರನ್ನೂ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

I will not allow the Leader of the Opposition merely to criticize the scheme that I adumbrate. I want his positive contribution so that all of us jointly may evolve an acceptable system of education.

Janab J. MOHAMED IMAM.—We do not want to criticize the scheme, but to make any improvement, we want to show any commissions or omissions. I am sure the Government must have prepared a scheme. We are interested in the system of education and we do agree that to a certain extent the present system of education needs some change. We will examine all aspects. I said it would help us. Perhaps you have already prepared the scheme. That scheme may be made available to all the members. That will not be treated as a party issue.

Sri K. HANUMANTHAIYA.—The Government have not prepared any scheme. It is in order to prepare such a scheme that I am inviting suggestions and discussion on the subject.

ಕೈಗಾರಿಕೆಗಳ ವಿಷಯವಾಗಿ ಪ್ರಸ್ತಾಪಮಾಡುತ್ತ ವಿರೋಧಪಕ್ಷದ ನಾಯಕರು, ಒಂದು ಹೆಜ್ಜೆ ಮುಂದೆ ಹೋಗಿ ಮೈಸೂರಿನವರಲ್ಲದೇ ಇರತಕ್ಕಂಥವರಿಗೆ ಸ್ಥಾನಗಳನ್ನು ಕೊಡದೆ ಮೈಸೂರಿನವರಿಗೇ ಕೊಡಬೇಕೆಂದು ಒಂದು ವಾದವನ್ನು ಪ್ರತಿಪಾದಿಸಿದ್ದಾರೆ. ನಾನು ಈಗಾಗಲೇ ಹೇಳಿರುವಂತೆ, ಮೈಸೂರು ಬೇರೆ, ಮದ್ರಾಸೇ ಬೇರೆ, ಎಂದು ಪರಿಗಣಿಸತಕ್ಕ ಕಾಲ ಹೋಗಿದೆ. We are now a Sovereign Democratic Republic. ಆದರೆ ಇದರ ಮುಖ್ಯೋದ್ದೇಶ, ಕೈಗಾರಿಕೆಗಳು ಚೆನ್ನಾಗಿ ಬೆಳೆಯಬೇಕು, ತನ್ಮೂಲಕ ದೇಶಕ್ಕೆ ಒಳ್ಳೆಯದಾಗಬೇಕು ಎಂಬುದು. ಈ ಕೆಲಸಕಾರ್ಯಗಳು ಯಾರ ಸಹಾಯದಿಂದ ಸಮರ್ಪಕವಾಗಿ ಆಗುತ್ತವೆಂದು ಕಂಡುಬರುತ್ತದೆಯೋ ಅಂಥವರ ಸಹಾಯವನ್ನು ತೆಗೆದುಕೊಳ್ಳೋಣ. ಅವರು ಮೈಸೂರಿಗೆ ಹೊರಗಿನವರಾಗಿರಲಿ, ಅಥವಾ ಇಂಡಿಯಾದೇಶಕ್ಕೇ ಹೊರಗಿನವರಾಗಿರಲಿ, ಈಗ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಕೂಡದು. ಈ ಕೈಗಾರಿಕೆಗಳು ಬೆಳೆಯಬೇಕೆಂಬುದು ಮುಖ್ಯವೇ ಹೊರತು, ಅದು ಯಾರಿಂದಾಯಿತು ಎಂಬುದು ಮುಖ್ಯವಲ್ಲ. ಇದಕ್ಕೆ ಇಂಗ್ಲೀಷಿನಲ್ಲಿ ಒಂದು ಒಳ್ಳೆಯ ಗಾದೆಯಿದೆ—" You will always get a thing done, provided you do not care who takes the credit for it " ಎಂದು—ಈ ದೃಷ್ಟಿಯಿಂದ ನಾವು ಈ ಪ್ರಶ್ನೆಯನ್ನು ಪರಿಶೀಲಿಸಬೇಕು.

ಇನ್ನುಳಿದಿರತಕ್ಕದ್ದು, ಕೊನೆಯದಾಗಿ ಮನೂದಾ ಕಾನೂನುಗಳ ವಿಚಾರ. ಆದರೆ ಇವುಗಳೆಲ್ಲವೂ ಈ ಸಭೆಯ ಮುಂದೆ ಡಿಬೇಟ್‌ಗೆ ಬರತಕ್ಕವುಗಳಾಗಿವೆ. ಆಗ ಈ ಎಲ್ಲ ಮಸೂದೆಗಳಮೇಲೂ ವಿಪುಲವಾದ ಡಿಬೇಟ್‌ಗಳು ಆಗಿಯೇ ಆಗುತ್ತವೆ. ಆದುದರಿಂದ ಈ ಬಗ್ಗೆ ಈಗ ನಾನು ವಿವರವನ್ನೂ ಪ್ರಸ್ತಾಪಮಾಡಲು ಇಚ್ಛಿಸುವುದಿಲ್ಲ.

ಆದರೆ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ಮಾಡಿದ್ದಾರೆ. ಆ ಸಲಹೆಗಳನ್ನೆಲ್ಲಾ ನಾನು ಈಗ ಪ್ರಸ್ತಾಪಿಸಿದರೆ ಅದೇ ಒಂದು ದೊಡ್ಡ ಬಡ್ಜೆಟ್ ಭಾಷಣವಾಗುತ್ತದೆ. ಆದುದರಿಂದ ನಾನು ಈ ದಿವಸದ

(SRI K. HANUMANTHAIYA.)

ಸೂಚನೆಗಳಿಗೆ ಅಥವಾ ಟೀಕೆಗಳಿಗೆ ಉತ್ತರ ಕೊಡುವು ದಿಲ್ಲ. ಎಂದರೆ ಉತ್ತರ ಕೊಡಬಾರದೆಂಬ ಮನಸ್ಸಿ ನಿಂದೇನೂ ಅಲ್ಲ. ಇದೇ ರೀತಿಯ ಸೂಚನೆಗಳು ಟೀಕೆ ಗಳು ಮುಂದೆ ಬಂದೇ ಬರುತ್ತವೆ, ಆಗ ಸರ್ಕಾರದ ಪರವಾಗಿ ಉತ್ತರ ಕೊಡುತ್ತೇನೆ. ಈಗ ನನಗೇ ಭಾನ ವಾಗುತ್ತಿದೆ—ಎದುರು ಪಾರ್ಟಿಯವರು ಏನೇನು ಟೀಕೆಗಳನ್ನು ಮಾಡಿದ್ದಾರೋ, ಆ ಟೀಕೆಗಳಲ್ಲಿ ಏನೂ ತಿರುಳಿಲ್ಲವೆಂಬ ಅಂಶ ಈಗಾಗಲೇ ಅವರ ಮನಸ್ಸಿಗೇ ಗೊತ್ತಾಗಿರಬೇಕೆಂದು ಕಾಣುತ್ತದೆ. ಆದರೆ ಈಗ ಸಭೆಯ ಮುಂದೆ ರಾಜಭಾಷಣದ ಬಗ್ಗೆ ಅಭಿನಂದನೆ ಯನ್ನು ಸೂಚಿಸತಕ್ಕ ಯಾವ ನಿರ್ಣಯವೊಂದನ್ನೂ ನನ್ನವಾನ್ಯಸ್ನೇಹಿತರಾದ ಶ್ರೀಮಾನ್ ಎಚ್. ಎಸ್. ರುದ್ರಪ್ಪನವರು ಮಂಡಿಸಿದ್ದಾರೋ ಅದರ ಪರವಾಗಿ ತಮ್ಮೆಲ್ಲರ ಬೆಂಬಲವನ್ನು ನಾನು ಅಪೇಕ್ಷಿಸುತ್ತೇನೆ ಮತ್ತು ನಿರೀಕ್ಷಿಸುತ್ತೇನೆ.

Mr. SPEAKER.—I think there is no absolute necessity for Sri Rudrappa to reply.

Janab J. MOHAMED IMAM.—Have I a right to reply in respect of my amendment?

Mr. SPEAKER.—No. There is the main motion and there are now three amendments to it. What does Sri Pattabhiraman propose to do with his amendment?

Sri K. PATTABHI RAMAN.—I seek the leave of the House to withdraw my amendment.

The amendment was, by leave, withdrawn.

Sri B. V. NARAYANA REDDY.—Sir, as the amendment of the Leader of my party is going to be pressed, I seek the leave of the House to withdraw my amendment.

The amendment was, by leave, withdrawn.

Janab J. MOHAMED IMAM.—Is the system of voting by show of hands?

Mr. SPEAKER.—Not by show of hands, but by Ayes or Noes. When the member presses for a division, we may have to count by show of hands. ತಾವು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳು ತ್ತೀರೋ ಅಥವಾ ಒತ್ತಾಯ ಪಡಿಸುತ್ತೀರೋ?

Janab J. MOHAMED IMAM.—I press it.

Mr. SPEAKER.—The question is:

"Add the following at the end of the Motion of Thanks and substitute for the full-stop.

'but regret, that the Address while clearly revealing the failure of Your Highness's Government to solve food problem, gives no assurance for the progress of the State in the sphere of Irrigation, Industry, Agriculture, Scheduled Castes' problems and other nation building departments and to give relief to the common man from his ever increasing hardships'."

The motion was negatived.

Mr. SPEAKER.—I now put the main motion. The question is:

"That an Address be presented to His Highness the Maharaja in the following terms.—

'May it please your Highness, we the Members of the Mysore Legislative Assembly assembled in this session beg leave to thank your Highness for the Address delivered to the members of both Houses of the Legislature."

The motion was adopted.

1-30 P.M.

Mr. SPEAKER.—The House now stands adjourned and will meet on Monday at 12 NOON.

The Assembly adjourned at Thirty Minutes past One of the Clock to meet again at Twelve of the Clock on Monday, 23rd June 1952.

WD 2802—GPB—500—23-7-52